ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಸೆಪ್ಟೆಂಬರ್ 11, 2013 ಪುಟ 20 ರೂ. 14/-

ರಂಗತಂಡ ರಂಗಸಂಪದ ಸಂದರ್ಶನ ಪ್ರಸನ್ನ



ವಸತಿ ಸಚಿವ ಅಂಬರೀಷ್ ಆಚಾರವಿಲ್ಲದ ನಾಲಿಗೆ



31 ಬಾಲಕಿಯರನ್ನು ಕಿಡ್ನಾಪ್ ಮಾಡಿದ ವಿಕಾರಿ



ಬಿಜೆಪಿಗೆ ಬತ್ತಿ ಇಟ್ಟ ಉದಾಸಿ




ಜನಪರ ನಾಯಕ ಶ್ರೀನಿವಾಸ್ ಪ್ರಸಾದ್‌ಗೆ 65



ಢುಂಢಿ ದುರದೃಷ್ಟಕರ ವಿವಾದ

KPSC ಭ್ರಷ್ಟ...

ಅಭ್ಯರ್ಥಿಗಳಿಗೆ ನಡುಕ



ಕುಮಾರಸ್ವಾಮಿಗೊಂದು ಬಹಿರಂಗ ಪತ್ರ



• ಪಾರ್ವತೀಶ
bparvateesha@gmail.com

ಬಿಡಿ ಚಿತ್ರಗಳು

ಸಂಪಾದಕ

ಮಾನ್ಯ ಕುಮಾರಸ್ವಾಮಿಯವರೆ,

ಮೊನ್ನಿನ ಲೋಕಸಭಾ ಉಪಚುನಾವಣೆಯು ಫಲಿತಾಂಶವು ನಿಮಗೆ ಬಹಳ ಹತಾಶೆ ಉಂಟು ಮಾಡಿದೆ. ನೀವದನ್ನು ಮರೆ ಮಾಚದೆ ಪತ್ರಿಕಾಗೋಷ್ಠಿಯಲ್ಲಿಯೇ ಹೇಳಿಕೊಂಡಿದ್ದೀರಿ. 'ಲಂಕೇಶ್' ಪತ್ರಿಕಾ ಬಳಗ ಸೇರಿದಂತೆ ಕರ್ನಾಟಕದ ಲಕ್ಷಾಂತರ ಜನರಿಗೆ ಈ ಫಲಿತಾಂಶದಿಂದ ನೆಮ್ಮದಿಯಾಗಿದೆ. ಈ ಖುಷಿ ಕಾಂಗ್ರೆಸ್ ಗೆದ್ದಿದ್ದಕ್ಕಲ್ಲ ಅಥವಾ ಜನತಾದಳ ಸೋತಿದ್ದಕ್ಕೂ ಅಲ್ಲ, ಬದಲಾಗಿ ಬಿಜೆಪಿಯ ಸಮಾಜದ್ರೋಹಿಗಳ ಜೊತೆಗಿನ ನಿಮ್ಮ ಪಕ್ಷದ ಮೈತ್ರಿಕೂಟವನ್ನು ಮತದಾರ ತಿರಸ್ಕರಿಸಿದ್ದಕ್ಕೆ! ಇಂಡಿಯಾ ದೇಶದ ಅನೇಕ ರಾಜ್ಯಗಳಲ್ಲೂ ಸೆಕ್ಯುಲರ್‌ವಾದಿಗಳಿಗೆ ಹಾಗೂ ನ್ಯಾಯ-ಸಮಾನತೆಯಲ್ಲಿ ನಂಬಿಕೆ ಇಟ್ಟಿರುವ ಜನರಿಗೆ ಈಗಿನ ಉಪಚುನಾವಣೆಯ ಫಲಿತಾಂಶದಿಂದ ಸಂತೋಷವಾಗಿದೆ...!


ಏಕೆ ಗೊತ್ತೆ?

ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದಲ್ಲಿ ಈಗ ಅಕಾಲಿದಳ ಹಾಗೂ ಶಿವಸೇನೆ ಬಿಟ್ಟರೆ ಬೇರೆ ಯಾವ ಪ್ರಾದೇಶಿಕ ಪಕ್ಷಗಳೂ ಇಲ್ಲ. ಒರಿಸ್ಸಾದ ಬಿಜೂ ಜನತಾದಳ ಹಾಗೂ ಬಿಹಾರಿನಲ್ಲಿ ನಿತೀಶ್ ಕುಮಾರ್ ಈಗಾಗಲೇ ಎನ್‌ಡಿಎ ಕೋಮುವಾದಿಗಳ ಕೂಟದಿಂದ ಆಚೆ ಬಂದಿದ್ದಾರೆ. ಇಂತಾ ಸನ್ನಿವೇಶದಲ್ಲಿ ನೀವು ವಿನಾಕಾರಣ ಬಿಜೆಪಿ ಜೊತೆ ಕೈಕುಲುಕಿದಿರಿ. ಈಗೇನಾದರೂ ನಿಮ್ಮ ಪಕ್ಷದ ಅಭ್ಯರ್ಥಿಗಳು ಗೆದ್ದೇ ಬಿಟ್ಟಿದಿದ್ದರೆ ಅದಕ್ಕೆ ತಾನೇ ಕಾರಣವೆಂದು ಹೇಳಿಕೊಂಡು ಬಿಜೆಪಿಗೆ ರಾಷ್ಟ್ರಮಟ್ಟದಲ್ಲಿ ಎನ್‌ಡಿಎ ಕೂಟವನ್ನು ವಿಸ್ತರಿಸಲು ಒಳ್ಳೇ ನೆಪ ಸಿಕ್ಕಿರುತ್ತಿತ್ತು. ಆದರೆ ಹಾಗಾಗಲಿಲ್ಲ ಎಂಬುದೇ ಸಮಾಧಾನಕರ ಸಂಗತಿ.

ಈ ಚುನಾವಣೆಯು ಫಲಿತಾಂಶದ ನಂತರ ಜೆಡಿಎಸ್‌ನೊಳಗೆ ಭಿನ್ನಮತ ಕಾಣಿಸಿಕೊಂಡಿದೆ. ನೀವೀಗ ಕೊಂಚ ಮೈಮರೆತರೂ ಪಕ್ಷ ಛಿದ್ರವಾಗುವ ಸನ್ನಿವೇಶ ಕಾಣುತ್ತಿದೆ. ಆದರೆ ಹಾಗಾಗಕೂಡದೆಂಬುದೇ ನಮ್ಮಂತವರ ಅಪೇಕ್ಷೆ. ಜೆಡಿಎಸ್ ಛಿದ್ರವಾಗಿ ಬಿಡುವುದೋ ಅಥವಾ ದುರ್ಬಲವಾಗುವುದೂ ಸಹ ಕರ್ನಾಟಕದ ರಾಜಕೀಯಕ್ಕೆ ಹಾಗೂ ಜನರಿಗೆ ಒಳ್ಳೆಯದನ್ನು ಮಾಡುವುದಿಲ್ಲ. ಇಲ್ಲಿ ಕಾಂಗ್ರೆಸ್ ಬಿಟ್ಟರೆ ಬಿಜೆಪಿಯೊಂದೇ ಜನರಿಗೆ ಪರ್ಯಾಯ ಆಯ್ಕೆ ಎಂಬ ಸನ್ನಿವೇಶ ಬರಕೂಡದು. ಪ್ರಜಾಪ್ರಭುತ್ವಕ್ಕೆ ಇದು ಒಳ್ಳೆಯದಲ್ಲ. ಇದಾಗಬೇಕೆಂದರೆ ನೀವು ಧೈರ್ಯಗೆಡದೆ ಜನತಾದಳ ಪಕ್ಷವನ್ನು ಪುನಃ ಕಟ್ಟುವತ್ತ ಗಮನ ನೀಡಲೇಬೇಕು. ಬಿಜೆಪಿ ಜೊತೆಗಿನ ಗೆಳೆತನ ನಿಮ್ಮ ಕಿಮ್ಮತ್ತನ್ನು ರಾಜ್ಯದಲ್ಲಾಗಲಿ-ರಾಷ್ಟ್ರ ರಾಜಕಾರಣದಲ್ಲಾಗಲಿ ನಯಾ ಗ್ರಾಂನಷ್ಟೂ ಜಾಸ್ತಿ ಮಾಡುವುದಿಲ್ಲ ಎಂಬುದು ನಿಮಗೆ ಗೊತ್ತಿರಲಿ.

ಇಷ್ಟಕ್ಕೂ ಈಗಿನ ಮೈತ್ರಿಕೂಟದಿಂದ ನೀವೇನು ಪಡೆದಿರಿ? ಮೊನ್ನಿನ ಚುನಾವಣಾ ಫಲಿತಾಂಶದ ಅಂಕಿ ಅಂಶಗಳತ್ತ ನೀವೊಮ್ಮೆ ನೋಡುವಿರಾ?

ಇಲ್ಲಿ ಬೆಂಗಳೂರು ಗ್ರಾಮಾಂತರ ಲೋಕಸಭಾ ಉಪ ಚುನಾವಣೆಯ ಫಲಿತಾಂಶದ ಅಂಕಿಅಂಶಗಳನ್ನು ನಿಮ್ಮ ಗಮನಕ್ಕೆ ತರಬಯಸುತ್ತೇವೆ. ಈ ಕ್ಷೇತ್ರದ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ 2013ರ ಮೇನಲ್ಲಿ ನಡೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಜನತಾದಳ-ಬಿಜೆಪಿ-ಕೆಜೆಪಿ ಹಾಗೂ ಕಾಂಗ್ರೆಸ್ ತಲಾ ಎಷ್ಟು ಓಟ್ ಪಡೆದಿದ್ದವು ಎಂಬುದನ್ನು ಹಾಗೂ ನಂತರ ಮೊನ್ನಿನ ಸಂಸತ್ ಉಪಚುನಾವಣೆಯಲ್ಲಿ ನಿಮ್ಮ ಮೈತ್ರಿಕೂಟ ಎಷ್ಟು ಓಟು ಪಡೆಯಿತೆಂಬುದರ ಅಂಕಿಅಂಶಗಳಿವು.



ಈ ಅಂಕಿಅಂಶಗಳು ಏನನ್ನು ಹೇಳುತ್ತಿವೆ ಎಂಬುದನ್ನು ನೀವು ಗಂಭೀರವಾಗಿ ಯೋಚಿಸಬೇಕಿದೆ.

ಅನೇಕ ಅಸೆಂಬ್ಲಿ ಸೆಗ್ಮೆಂಟ್‌ಗಳಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಏಕಾಂಗಿಯಾಗಿ ಪಡೆದಿದ್ದಷ್ಟು ಓಟುಗಳಿಗಿಂತ ಕಡಿಮೆ ಓಟುಗಳನ್ನು ಈಗ ನೀವು ಪಡೆದಿದ್ದೀರಿ. ಅದೂ ಬಿಜೆಪಿ-ಕೆಜೆಪಿಗಳ ಬಲವೆಲ್ಲಾ ಸೇರಿಸಿಕೊಂಡ ಮೇಲೂ ನಿಮ್ಮ ಪಾಲಿನ ಓಟ್ ಶೇರ್ ಕುಸಿದುಬಿದ್ದಿದೆ.

ಹೀಗಾಗಲು ಕಾರಣವೇನಿರಬಹುದು?

ಜನರಿಗೆ ಈ ಉಪಚುನಾವಣೆಯ ಬಗ್ಗೆ ಅಂತಾ ಉತ್ಸಾಹವೇನಿರಲಿಲ್ಲ ಎಂಬುದು ಕೊಂಚ ನಿಜವೇ ಆಗಿದ್ದರೂ ನಿಮಗೆ ನಿಮ್ಮ ಪಕ್ಷದ ಕಾಯಂ ಬೆಂಬಲಿಗರು, ಜಾತಿ ಕಾರಣಕ್ಕೆ ಜೊತೆಗಿದ್ದವರು ಹಾಗೂ ಸಾಮಾನ್ಯ ನಾಗರಿಕರೂ ಕೂಡ ಬೆಂಬಲಿಸಲಿಲ್ಲ. ಇನ್ನು ಬಿಜೆಪಿ-ಕೆಜೆಪಿ ಕಾರ್ಯಕರ್ತರ್‍ಯಾರೂ ಜೆಡಿಎಸ್ ಪರವಾಗಿ ಪ್ರಚಾರವನ್ನೂ ಮಾಡಲಿಲ್ಲ, ಓಟೂ ಕೇಳಲಿಲ್ಲ. ಸ್ವತಃ ಮತಗಟ್ಟೆಗೆ ಬಂದು ಜೆಡಿಎಸ್ ಪರ ಓಟೂ ಹಾಕಲಿಲ್ಲ.

ಇದೆಲ್ಲಾ ಕಹಿ ವಾಸ್ತವಗಳು!

ಈ ಹಂತದಲ್ಲಿ ಜನತಾದಳ ಪಕ್ಷವು ಗಮನದಲ್ಲಿಟ್ಟುಕೊಳ್ಳಬೇಕಾದ ಕೆಲವು ಮುಖ್ಯ ಸಂಗತಿಗಳನ್ನು 'ಲಂಕೇಶ್' ಬಳಗವು ಇಲ್ಲಿ ಪ್ರಸ್ತಾಪಿಸಲು ಬಯಸುತ್ತದೆ.

1. ಜನತಾದಳ (ಎಸ್) ಪಕ್ಷವನ್ನು ಮತ್ತೆ ಕಟ್ಟುವುದು ಹೇಗೆ?

2. ಬಿಜೆಪಿ ಸಖ್ಯದಿಂದಾಗಬಹುದಾದ ಲಾ[illegible] ನಷ್ಟಗಳೇನು?

3. ರಾಷ್ಟ್ರ ರಾಜಕಾರಣದಲ್ಲಿ ಜೆಡಿಎಸ್ ಪಾತ್ರವೆಷ್ಟಿರುತ್ತದೆ?

1. ಜನತಾದಳ ಪಕ್ಷವು ಒಕ್ಕಲಿಗರ ಸಮುದಾಯ[illegible] ಹಿತಾಸಕ್ತಿ ಕಾಪಾಡುವ ಪಕ್ಷ ಎಂಬ ಅರ್ಧ ಸತ್ಯ ಹಾಗ[illegible] ಇನ್ನರ್ಧ ಅಪ್ರಚಾರದ ಅಂಶವನ್ನೂ ಮೀರಿ ನಿಲ್ಲಬೇಕು. ಅದಾಗಬೇಕೆಂದರೆ ಅಖಿಲ

▶▶..8

ಬಿಜೆಪಿ ಸಖ್ಯದಿಂದ ಜನತಾದಳ ಪಡೆದದ್ದು ಹಾಗೂ ಕಳೆದುಕೊಂಡಿದ್ದರ ಚುನಾವಣೆಯ ಓಟ್‌ಷೇರ್ ವಿವರ

2013 ಎಂಎಲ್‌ಎ ಫಲಿತಾಂಶ


ಕ್ಷೇತ್ರ ತಾಲ್ಲೂಕು	ಜೆಡಿಎಸ್	ಬಿಜೆಪಿ	ಕೆಜೆಪಿ	ಕಾಂಗ್ರೆಸ್
ಕುಣಿಗಲ್	44,417	34869	1,022	33,762
ಆರ್.ಆರ್.ನಗರ	52,106	50,600	5,392	70,932
ಬೆಂಗಳೂರು ದಕ್ಷಿಣ	71,995	1,02,129	3,932	63,811
ಆನೇಕಲ್	7,294	65,086	2,364	1,05,331
ಮಾಗಡಿ	74,578	1,602	27,063	60,344
ರಾಮನಗರ	83,238	1,774	465	57,964
ಕನಕಪುರ	68,583	1,803	357	1,00,007
ಚನ್ನಪಟ್ಟಣ	73,635	1,607	373	8,134
			(ಯೋಗೇಶ್ವರ್ ಪಕ್ಷೇತರ : 79,794)	
ಮಳವಳ್ಳಿ	61,147	1,691	26,297	61,523
ಒಟ್ಟು	4,35,853	2,28,181	1,60,968	8,00,205

2013 ಎಂಪಿ ಉಪಚುನಾವಣೆ ಬೆಂ. ಗ್ರಾಮಾಂತರ ಓಟ್ ವಿವರ

2013ರ ಎಂಎಲ್‌ಎ ಜೆಡಿಎಸ್-ಬಿಜೆಪಿ-ಕೆಜೆಪಿ ಗಳಿಸಿದ ಒಟ್ಟು ಮತ	ಚುನಾವಣೆ	ಈಗಿನ ಎಂಪಿ ಚುನಾವಣೆಯ ಗಳಿಕೆ	ಕಾಂಗ್ರೆಸ್ ಎಂಎಲ್‌ಎ	ಕಾಂಗ್ರೆಸ್ ಎಂಪಿ
ಕುಣಿಗಲ್	80,328	51,442	33,762	56,340
ಆರ್.ಆರ್.ನಗರ	1,08,098	51,148	70,932	58,428
ಬೆಂಗಳೂರು ದಕ್ಷಿಣ	1,78,056	54,681	63,811	78,597
ಆನೇಕಲ್	74,744	41,517	1,05,331	78,736
ಮಾಗಡಿ	1,03,243	68,167	60,344	72,443
ರಾಮನಗರ	85,477	65,949	57,964	62,070
ಕನಕಪುರ	76,743	48,854	1,00,007	1,00703
ಚನ್ನಪಟ್ಟಣ	75,615	59,927	8,134	72,894
ಒಟ್ಟು	8,65,002	4,41,601	5,09,225	8,78,608

'ಜಯನಗರ 4th ಬ್ಲಾಕ್...' ಎಂಬ ಪುಟ್ಟ ಸಿನಿಮಾ ನೀಡುವ ಖುಷಿ

ಇಪ್ಪತ್ತಾರು ನಿಮಿಷಗಳ ಒಂದು ಪುಟ್ಟ ಸಿನಿಮಾ ಇದು. ಸಿನಿಮಾ ನಿರ್ದೇಶಕನಾಗುವ ಆಕಾಂಕ್ಷೆ ಇರುವ ಸತ್ಯಪ್ರಕಾಶ್ ಎಂಬ ಯುವಕ ಹಾಗೂ ಗುರುಪ್ರಸಾದ್‌ರ 'ಡೈರೆಕ್ಟರ್ ಸ್ಪೆಷಲ್' ಸಿನಿಮಾದ ಹೀರೊ ಧನಂಜಯ್ ಸೇರಿ ರೂಪಿಸಿರುವ ಈ 'ಜಯನಗರ 4th ಬ್ಲಾಕ್' ಎಂಬ ಸಿನಿಮಾ ಮನಸ್ಸಿಗೆ ಮುದ ನೀಡುವಂತಿದೆ.



ಜಯನಗರ ಶಾಪಿಂಗ್ ಕಾಂಪ್ಲೆಕ್ಸಿನ ನಿತ್ಯದ ಯಾಂತ್ರಿಕ ಗದ್ದಲಗಳ ನಡುವೆಯೂ ಅರಳುವ ಮನುಷ್ಯ ಸಂಬಂಧ ಹಾಗೂ ಪ್ರೀತಿ-ಗೆಳೆತನಗಳ ಕತೆ ಹೇಳುವ ಈ ಸಿನಿಮಾವನ್ನು ನೋಡಿ ಮುಗಿದಾದ ಮೇಲೂ ಅಲ್ಲಿನ ಪಾತ್ರಗಳು ನೆನಪಾದರೆ ಮನಸ್ಸು ಬೆಚ್ಚಗಾಗುವಂತಿದೆ.



ವೆಂಕಿ ಎಂಬ ನಿವೃತ್ತ ಟೀಚರ್, ರಾಣಿ ಎನ್ನುವ ಹೂ ಮಾರುವ ಪುಟ್ಟ ಬಾಲೆಯ ನಡುವಿನ ಗೆಳೆತನ, ಅವರ ಜೊತೆ ಸೇರುವ ಕಥಾನಾಯಕನ ಸಿನಿಮಾ ಕನಸು ಹಾಗೂ ಅತಂತ್ರ ಬದುಕಿನ ಸ್ಥಿತಿಯಲ್ಲೇ ಅವನಿಗೆ ಸಿಗುವ ಹಿಜ್ರಾ ಫ್ರೆಂಡ್ ಒಬ್ಬಳ ಮಾನವೀಯ ಗುಣ... ಇದರ ನಡುವೆ ಡೈಲಾಗ್‌ಗಳೇ ಇರದ ರಸ್ತೆ ಬದಿ ವ್ಯಾಪಾರಿ ಹುಡುಗ-ಹುಡುಗಿಯ ನಡುವೆ ಮೂಡುವ ಪ್ರೀತಿ, ಅದು ಅವರದ್ದೇ ಪುಟ್ಟ ಸಂಸಾರವಾಗಿ ಅರಳುವ ಪರಿಯನ್ನು ನಿರ್ದೇಶಕ ಸತ್ಯ ಹೆಗಡೆ ಸೊಗಸಾಗಿ ನಿರೂಪಿಸಿದ್ದಾರೆ. ಈ ಸಿನಿಮಾದ ಮಿತಿ ಅಂದರೆ ಸಂಗೀತ... ಇದು ಸಿನಿಮಾದ ಒಟ್ಟಂದವನ್ನು ಹೆಚ್ಚಿಸುವ ಕೆಲಸ ಮಾಡಿಲ್ಲ.

ಗೆಳೆಯ, ನಟ ಧನಂಜಯ ಆಪ್ತಭಾವನೆ ಹುಟ್ಟಿಸುವಂತೆ ಕಾಣುತ್ತಾರೆ. ಅದ್ಭುತ ಸಾಮರ್ಥ್ಯವಿರುವ ಈ ನಟನತ್ತ ಕನ್ನಡ ಸಿನಿಮಾ ನಿರ್ದೇಶಕರು-ನಿರ್ಮಾಪಕರು ನೋಡಬೇಕಿದೆ.

ಸಿನಿಮಾ ಆಸಕ್ತಿಯಿರುವ ನಮ್ಮ ಓದುಗರು 'ಜಯನಗರ 4th ಬ್ಲಾಕ್' ಸಿನಿಮಾ ನೋಡಿ ನಿರ್ದೇಶಕ ಸತ್ಯ ಪ್ರಕಾಶ್‌ಗೆ ನಿಮ್ಮ ಅಭಿಪ್ರಾಯ ತಿಳಿಸಬಹುದು.

ಸಿನಿಮಾದ ಡಿವಿಡಿ ಪ್ರತಿ ಬೇಕಾದವರು ನೇರವಾಗಿ ನಿರ್ದೇಶಕ ಸತ್ಯಪ್ರಕಾಶ್‌ರ 9980400269 ನಂಬರಿಗೆ ಫೋನ್ ಮಾಡಿ ತರಿಸಿಕೊಳ್ಳಬಹುದು.


ಅಂದ ಹಾಗೆ ಆಗಸ್ಟ್ ೩೧ರ ಸಂಜೆ ೬ ಗಂಟೆಗೆ ಈ ಸಿನಿಮಾ ಜಯನಗರ ಕಾಂಪ್ಲೆಕ್ಸ್‌ನ ಬೀದಿಯಲ್ಲೇ ಪ್ರದರ್ಶನಗೊಳ್ಳುತ್ತಿದೆ ಬಿಡುವು ಮಾಡಿಕೊಂಡು ಹೋಗಿ ಬನ್ನಿ.


ಅಸರಾಮ್ ಎಂಬ ಮಕ್ಕಳ ಪೀಡಕ


ಅಪ್ರಾಪ್ತ ವಯಸ್ಸಿನ ಬಾಲಕಿಯ ಮೇಲೆ ಲೈಂಗಿಕ ಕಿರುಕುಳ ಮಾಡಿದ ...ೋಪ ಈಗ ಅಸರಾಮ್ ಬಾಪು ಎಂಬ ನಕಲಿ 'ದೇವ ಮಾನವ'ನ ...ದ್ಧ ದಾಖಲಾಗಿದೆ. ಆರೋಪಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಗೆ ...ಜರಾಗು ಎಂದು ನೋಟೀಸ್ ಜಾರಿಯಾಗಿದ್ದರೆ ಈ ದುಷ್ಟ ...ಧ್ಯಪ್ರದೇಶದಲ್ಲಿರುವ ತನ್ನ ಆಶ್ರಮವೊಂದರಲ್ಲಿ ಅಡಗಿ ಕೂತಿದ್ದಾನೆ. ಅಷ್ಟೇ ..., ತನ್ನನ್ನು ಪೊಲೀಸರು ಬಂಧಿಸಿದರೆ ತನ್ನ ಹಿಂಬಾಲಕರು ದಂಗೆ ...ಏಳುತ್ತಾರೆಂದೂ, ತನ್ನ ವಿರುದ್ಧ ಲೈಂಗಿಕ ಕಿರುಕುಳ ಆರೋಪ ಮಾಡಿರುವ ...ಲಕಿಯ ಬುದ್ಧಿಯೇ ನೆಟ್ಟಗಿಲ್ಲವೆಂದೂ ಹೂಂಕರಿಸುತ್ತಿದ್ದಾನೆ. ಆತನ ...ಬಾಲಕರೂ ಅಸರಾಮನ ವಿರುದ್ಧದ ದೂರನ್ನು ರದ್ದುಪಡಿಸಬೇಕೆಂದು ಧಮಕಿ ...ಸುತ್ತಿದ್ದಾರೆ.

...ಅಸರಾಮ್ ಎಂತಹ ಹೇಸಿಗೆ ಹುಟ್ಟಿಸುವ ವ್ಯಕ್ತಿ ಎಂದರೆ ಹೋದವರ್ಷ ...ಂಬರ್‌ನಲ್ಲಿ ದೆಹಲಿಯ ಯುವತಿಯೊಬ್ಬಳ ಮೇಲೆ ಸಾಮೂಹಿಕ ಅತ್ಯಾಚಾರ ...ದಾಗ ಈತ ಆಕೆಯನ್ನೇ ಟೀಕಿಸಿದ್ದ. "ಒಂದೇ ಕೈಯಿಂದ ಚಪ್ಪಾಳೆ ...ಡೆಯಲಾಗುವುದಿಲ್ಲ, ಅತ್ಯಾಚಾರದಲ್ಲಿ ಆ ಹುಡುಗಿಯ ಪಾತ್ರವೂ ಇದೆ. ... ಆ ಪುರುಷರ ಕೈಹಿಡಿದು 'ನೀನು ನನಗೆ ಅಣ್ಣ ಇದ್ದಂತೆ' ಎಂದು ...ಕೊಂಡಿದ್ದರೆ ಅವರು ಆಕೆಯ ಮೇಲೆ ಅತ್ಯಾಚಾರ ನಡೆಸುತ್ತಿರಲಿಲ್ಲ" ...ು ಈತ ಹೇಳಿದ್ದ. ಇದರ ವಿರುದ್ಧ ಟೀಕೆಗಳ ಪ್ರವಾಹವೇ ಹರಿದುಬಂದಾಗ ... "ಇದೆಲ್ಲದರಿಂದ ನನಗೇನೂ ಆಗುವುದಿಲ್ಲ, ನಾನು ಆನೆ ಇದ್ದಂತೆ. ...ಕಾರರು ಬೊಗಳುವ ನಾಯಿಗಳಿದ್ದಂತೆ" ಎಂದು ಅಬ್ಬರಿಸಿದ್ದ. ಈಗ ...ನೇ ಓರ್ವ ಬಾಲಕಿಯ ಮೇಲೆ ಲೈಂಗಿಕ ದಾಳಿ ಮಾಡಿ ಸಿಕ್ಕಿಬಿದ್ದಿದ್ದಾನೆ.

...ಈ 72 ವರ್ಷ ವಯಸ್ಸಿನ ಮುದಿ ವಿಕೃತ ಕಾಮಿಯನ್ನು ಕಂಡರೆ ...ಪಿಗರಿಗೆ, ಹಿಂದೂ ಕೋಮುವಾದಿ ಆರೆಸ್ಸೆಸಿಗರಿಗೆ, ವಿಶ್ವಹಿಂದೂ ಪರಿಷತ್ತಿನ ...ಂತ್ರಿಗಳಿಗೆ ತುಂಬಾ ಅಭಿಮಾನ ಮತ್ತು ಗೌರವ! ಈತ ಬಿಜೆಪಿಯ ...ಜ' ಎಲ್.ಕೆ.ಅಧ್ವಾನಿಗೆ 'ಧಾರ್ಮಿಕ ಗುರು' ಆಗಿದ್ದಾನಲ್ಲದೆ ಇವನಿಗೆ 'ಭಾವಿ ...ಾನಿ' ಎಂದು ಈಗ ಚೆಡ್ಡಿಗಳು ಬಿಂಬಿಸುತ್ತಿರುವ ನರಹಂತಕ ನರೇಂದ್ರ ...ೀದಿಯ ಶ್ರೀರಕ್ಷೆಯೂ ಇದೆ. ಈ ಎಲ್ಲ ಕಾರಣಗಳಿಗೆ ಇತ್ತೀಚೆಗೆ ಮುಂಬೈನಲ್ಲಿ ...ಕಾ ಛಾಯಾಗ್ರಾಹಕಿಯ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದವರನ್ನು ...ಗೇರಿಸಬೇಕೆಂದು ಬೊಬ್ಬಿರಿಯುತ್ತಿದ್ದ ಬಿಜೆಪಿ ನಾಯಕರು ಈ ಅಸರಾಮ್, ...ಚಾ 'ಸಾಚಾ ವ್ಯಕ್ತಿ' ಎಂದೂ, ಆತನ ವಿರುದ್ಧ ಕಾಂಗ್ರೆಸ್ ಷಡ್ಯಂತ್ರ ರೂಪಿಸಿ ...ಗಿಕ ದಾಳಿ ಆರೋಪವನ್ನು ಹೊರಿಸಿದೆ ಎಂದೂ ಬಾಯಿಬಡಿದುಕೊಂಡಿದ್ದಾರೆ. ...ಹವರಲ್ಲಿ ಪ್ರಮುಖಳು ಈತನಂತೆಯೇ ಢೋಂಗಿ ಸನ್ಯಾಸಿನಿ ಆಗಿರುವ, ... ಪೇಜಾವರರ ಶಿಷ್ಯೆಯಾದ ಉಮಾ ಭಾರತಿ!







...ಈಗ ದೇಶದಾದ್ಯಂತ ಸುಮಾರು ನಾನೂರು ಆಶ್ರಮಗಳನ್ನು ಮತ್ತು ...ರಿಕೆಯಲ್ಲಿ ಎರಡು ಶಾಖೆಗಳನ್ನು ಹೊಂದಿರುವ ಈ ಅಸರಾಮ್ ಮೂಲತಃ ...ರಾತಿನವನು. ನಾಲ್ಕು ದಶಕಗಳ ಹಿಂದೆ ಅಕ್ಷರಶಃ ಬರಿಗೈ ದಾಸನಾಗಿದ್ದವನು. ...ೆ ಕಳೆದ ನಲವತ್ತು ವರ್ಷಗಳಲ್ಲಿ ಗುಜರಾತಿನಲ್ಲಿ ಬಿಜೆಪಿ ಬೆಳೆದಿದ್ದಕ್ಕೂ ... ಅವಧಿಯಲ್ಲಿ ಅಸರಾಮನ ಸಂಪತ್ತು ಏರುತ್ತಾ ಹೋಗಿದ್ದಕ್ಕೂ ನೇರಾನೇರ ...ಂಧವಿದೆ. ಈತ ಬಿಜೆಪಿಯ ಹಿಂದೂ ಕೋಮುವಾದವನ್ನು ಬೆಂಬಲಿಸುತ್ತಾ ...ದಿದ್ದರಿಂದ ಚೆಡ್ಡಿಗಳೂ ಈತನ ಬೆಳವಣಿಗೆಗೆ ನೆರವು ನೀಡುತ್ತಾ ಬಂದರು. ...ನ ಆಶ್ರಮಗಳಲ್ಲಿ ನಡೆಯುವ ಅನೈತಿಕ ಕೃತ್ಯಗಳನ್ನು, ಅಕ್ರಮಗಳನ್ನು, ...ಚಾರಗಳನ್ನು, ವಾಮಾಚಾರಗಳನ್ನು, ಎಲ್ಲ ತರಹದ ಅವ್ಯವಹಾರಗಳನ್ನು, ...ನ ಹಿಂಬಾಲಕರ ಗೂಂಡಾಗಿರಿಯನ್ನೂ ಚೆಡ್ಡಿಗಳು ರಕ್ಷಿಸುತ್ತಾ ಬಂದಿದ್ದಾರೆ.

...ಈತನ ಆಶ್ರಮದಲ್ಲಿ ಎಂತೆಂತಹ ಕರಾಳ ಕೊಲೆಗಳು ನಡೆಯುತ್ತವೆ ...ುದಕ್ಕೆ ಇಲ್ಲೊಂದು ಉದಾಹರಣೆ ಇದೆ ನೋಡಿ.

...ಅಸರಾಮನ 'ಹೆಡ್ ಆಫೀಸ್' ಆಶ್ರಮ ಇರುವುದು ಗುಜರಾತ್ ರಾಜಧಾನಿ ...ಮದಾಬಾದಿನ ಹತ್ತಿರವೇ ಇರುವ ಮೊಟೆರಾ ಎಂಬ ಗ್ರಾಮದಲ್ಲಿ, ಈ ...ಮದ ಹತ್ತಿರವೇ ಸಬರಮತಿ ನದಿ ಹರಿಯುತ್ತದೆ. ಮೊಟೆರಾದಲ್ಲಿರುವ ತನ್ನ ...ಮದಲ್ಲಿ ಅಸರಾಮ್ ಒಂದು ಬಾಲ ಕೇಂದ್ರವನ್ನು ನಡೆಸುತ್ತಿದ್ದಾನೆ. ಐದು ...ಗಳ ಹಿಂದೆ ವರಸೆಯಲ್ಲಿ ಸಹೋದರರಾದ ಅಭಿಷೇಕ್ ಮತ್ತು ದಿಪೇಶ್ ...ೀಲಾ ಎಂಬ ಹತ್ತು ವರ್ಷ ವಯಸ್ಸಿನ ಸಹೋದರರನ್ನು ಅವರ ...ಹಾಲಕರು ಈ ಬಾಲ ಕೇಂದ್ರಕ್ಕೆ ಸೇರಿಸಿದರು. ಬಾಲ ಕೇಂದ್ರದಲ್ಲಿ ... ಮಕ್ಕಳು ಆಟಪಾಠ ಕಲಿಯುತ್ತಾರೆಂಬ ಆಶೆ ಅವರ ಪಾಲಕರದ್ದಾಗಿತ್ತು, ...ಮಕ್ಕಳನ್ನು ಅಸರಾಮ್ ಸುಮ್ಮಸುಮ್ಮನೆ ಸೇರಿಸಿಕೊಂಡಿರಲಿಲ್ಲ, ಪ್ರತಿ ಮಗುವಿಗೂ ...ೋಬ್ಬರಿ 15,000 ರೂಪಾಯಿಗಳನ್ನು ಕಿತ್ತುಕೊಂಡೇ ಸೇರಿಸಿಕೊಂಡಿದ್ದ.

...ಆ ಇಬ್ಬರು ಮಕ್ಕಳು ಬಾಲ ಕೇಂದ್ರವನ್ನು ಸೇರಿದ ಒಂದು ತಿಂಗಳಲ್ಲೇ ...ಪತ್ತೆಯಾದರು. ತಮ್ಮ ಮಕ್ಕಳೆಲ್ಲಿ ಎಂದು ವಿಚಾರಿಸಿಕೊಂಡು ಬಂದ ಪಾಲಕರಿಗೆ ...ಮದ ಅಧಿಕಾರಿಗಳು ಹೇಳಿದ್ದು "ಅರಳಿಮರಕ್ಕೆ ಹನ್ನೊಂದು ಸುತ್ತು ಹಾಕಿ ...ದರೆ ನಿಮ್ಮ ಮಕ್ಕಳು ಸಿಗುತ್ತಾರೆ" ಎಂದು. ಅನಕ್ಷರಸ್ಥರಾದ ಆ ಪಾಲಕರು ...ನ್ನು ಹಾಗೆಯೇ ಮಾಡಿದರು. ಮಕ್ಕಳು ವಾಪಸ್ ಬರಲಿಲ್ಲ, ಆಗ ... ಅಸರಾಮ್ ತನ್ನ ಹಿಂಬಾಲಕರ ಮೂಲಕ ಒಂದು ವಿಚಿತ್ರ ಸಲಹೆಯನ್ನು ...ಿಸಿದ. ಅದೇನೆಂದರೆ ಎರಡು ರೆಕ್ಕೆಗಳು ಕೂಡುವ ಜಾಗಕ್ಕೆ ಹೋಗಿ, ...ದ ಬಿಳಿ ಕಲ್ಲುಗಳನ್ನು ಆಯ್ದುಕೊಂಡು, ಆ ಕಲ್ಲುಗಳನ್ನು ಮತ್ತು ಬಾಲಕರ ಬಟ್ಟೆಗಳನ್ನು ಬಿಸಿ ನೀರಿನಲ್ಲಿ ಹಾಕಿ, ಆರಿದ ನಂತರ ಬಟ್ಟೆಗಳನ್ನು ಒಣಗಿ ಹಾಕಿ, ಬಟ್ಟೆಗಳು ಒಣಗುವ ಹೊತ್ತಿಗೆ ನಿಮ್ಮ ಮಕ್ಕಳು ವಾಪಸ್ ಬರುತ್ತಾರೆಂಬುದಾಗಿತ್ತು, ಆತಂಕಗೊಂಡಿದ್ದ ಪಾಲಕರು ಹಾಗೆಯೇ ಮಾಡಿದರೂ ಮಕ್ಕಳು ಬರಲಿಲ್ಲ, ಮಕ್ಕಳು ನಾಪತ್ತೆಯಾದ ಮೂರು ದಿನಗಳ ನಂತರ ಅವರಿಬ್ಬರೂ ಕಲ್ಲೋಲ್ ಎಂಬ ಊರಿನಲ್ಲಿದ್ದಾರೆ ಎಂದು ಆಶ್ರಮದ ಅಧಿಕಾರಿಗಳು ಹೇಳಿದರು. ಆ ಊರಿನಲ್ಲಿ ಎಷ್ಟೇ ಹುಡುಕಿದರೂ ಮಕ್ಕಳು ಸಿಗಲಿಲ್ಲ.

ಬದಲಾಗಿ ಹಲವು ದಿನಗಳ ನಂತರ ಆ ಪುಟಾಣಿ ಮಕ್ಕಳಿಬ್ಬರ ಶವಗಳು ಆಶ್ರಮದ ಹತ್ತಿರದಲ್ಲೇ ಹರಿಯುವ ಸಬರಮತಿ ನದಿಯ ದಡದಲ್ಲಿ ಸಿಕ್ಕಿದವು. ಅಸರಾಮನ ರಕ್ಷಣೆಯನ್ನೇ ತಮ್ಮ ಕರ್ತವ್ಯವಾಗಿಸಿಕೊಂಡಿರುವ ಗುಜರಾತ್ ಪೊಲೀಸರು ಮಕ್ಕಳಿಬ್ಬರೂ ನದಿಯಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ ಎಂದು ತಿಪ್ಪೆಸಾರಿಸಿ ಅವರಿಬ್ಬರ ಅಮಾನುಷ ಕೊಲೆಯನ್ನು ಮುಚ್ಚಿಹಾಕಲು ಯತ್ನಿಸಿದರು. ಆದರೆ ಆ ಶವಗಳಿದ್ದ ಸ್ಥಿತಿಯೇ ಇನ್ನೊಂದು ಕತೆಯನ್ನು ಹೇಳುತ್ತಿತ್ತು, ಯಾಕೆಂದರೆ ಶವಗಳು ಸಿಕ್ಕಾಗ ಬಾಲಕ ದೀಪೇಶನ ಕೈಗಳನ್ನು ಕತ್ತರಿಸಿಹಾಕಲಾಗಿತ್ತು, ಒಂದು ಕಾಲು ನಾಪತ್ತೆಯಾಗಿತ್ತು, ಇನ್ನೊಂದು ಕಾಲಿನ ಮೇಲೆ ಸುಟ್ಟ ಗಾಯಗಳಿದ್ದವು. ಅಷ್ಟೇ ಅಲ್ಲ, ಇನ್ನೂ ಭೀಕರವಾಗಿ ಆತನ ಅಂಗಾಂಗಗಳೆಲ್ಲ ನಾಪತ್ತೆಯಾಗಿದ್ದು ಪಕ್ಕೆಗೂಡು ಮಾತ್ರ ಇತ್ತು, ಇನ್ನು ಆತನ ಸಹೋದರ ಅಭಿಷೇಕ್‌ನ ದೇಹದ ಮೇಲೂ ಸುಟ್ಟ ಗಾಯಗಳಿದ್ದವು.

ತಮ್ಮ ಮಕ್ಕಳ ದಾರುಣ ಸ್ಥಿತಿಯನ್ನು ಕಂಡು ಪಾಲಕರು ತಮ್ಮ ಮಕ್ಕಳನ್ನು ವಾಮಾಚಾರಕ್ಕೆ ಬಲಿಕೊಡಲಾಗಿದೆ ಎಂದು ಚೀರಿಕೊಳ್ಳಲಾರಂಭಿಸಿದರು. ಆಗ ಅಸರಾಮನ ಹಿಂಬಾಲಕರಾದ ಆಶ್ರಮದ ನೂರಾರು ನಿವಾಸಿಗಳು ಕೋಲು, ದೊಣ್ಣೆಗಳನ್ನು ಹೊತ್ತು ಬಂದು ಅವರನ್ನೆಲ್ಲ ಅಲ್ಲಿಂದ ಒದ್ದೋಡಿಸಿದರು.

ಅಮಾಯಕ ಮಕ್ಕಳ ಸಾವು ಸಹಜವಾಗಿಯೇ ಮಾಧ್ಯಮಗಳ ಗಮನ ಸೆಳೆಯಿತು. ಆಶ್ರಮದಲ್ಲಿ ನಿಜವಾಗಲೂ ಏನು ನಡೆಯುತ್ತಿದೆ ಎಂದು ತನಿಖೆ ಮಾಡಲು ಬಂದ ವರದಿಗಾರರಿಗೂ ದೊಣ್ಣೆ ಕೋಲುಗಳಿಂದ ಹೊಡೆತ ಬಿತ್ತು. 'ದಿವ್ಯ ಭಾಸ್ಕರ್' ಎಂಬ ಪತ್ರಿಕೆಯ ವರದಿಗಾರ ಕುಲ್ದೀಪ್ ಸಿಂಗ್ ಎಂಬಾತನನ್ನು ಆಶ್ರಮದ ನಿವಾಸಿಗಳ ರೂಮೊಂದರಲ್ಲಿ ಕೂಡಿಟ್ಟು ಬಡಿದರು. ಕೊನೆಗೆ ಪೊಲೀಸರೇ ಬಂದು ಆತನನ್ನು ಬಿಡಿಸಬೇಕಾಯಿತು.

ಇಷ್ಟೆಲ್ಲ ನಡೆಯುತ್ತಿದ್ದರೂ ನರೇಂದ್ರ ಮೋದಿಯ ಸರ್ಕಾರ ತುಟಿಪಿಟಿಕ್ ಎನ್ನದೆ ಸುಮ್ಮನಿತ್ತು, ಹೇಗಿದ್ದರೂ ಮೋದಿಯೂ ನರಹಂತಕನೇ ಅಲ್ಲವೇ? ಆದರೆ ಸಮಾಜದಿಂದ ಒತ್ತಡ ಹೆಚ್ಚಾಗಿ ಮಕ್ಕಳು ನಾಪತ್ತೆಯಾದ 17 ದಿನಗಳ ನಂತರ ವಿಧಿ ಇಲ್ಲದೆ ಮಕ್ಕಳ ಸಾವನ್ನು ತನಿಖೆ ಮಾಡಲು ಒಂದು ಆಯೋಗವನ್ನು ರಚಿಸಿತು. ಆದರೆ ತನ್ನ ಹೀನಬುದ್ಧಿಗೆ ತಕ್ಕಂತೆ ಅಸರಾಮನಿಗೆ ಯಾವ ತೊಂದರೆಯನ್ನೂ ಕೊಡದಂತಹ ನಿವೃತ್ತ ನ್ಯಾಯಾಧೀಶ ಡಿ.ಕೆ.ತ್ರಿವೇದಿ ಎಂಬಾತನನ್ನು ಆಯೋಗದ ಮುಖ್ಯಸ್ಥನಾಗಿ ನೇಮಿಸಿತು. ಈ ತ್ರಿವೇದಿ ಎಂತಹ ದಕ್ಷತೆ ಮೆರೆದನೆಂದರೆ ಆಯೋಗ ಕಾಲಾಪನೆಗೆ ಹೆಸರುವಾಸಿಯಾಯಿತು. ಗುಜರಾತ್ ಹೈಕೋರ್ಟ್ ತನ್ನ ಆದೇಶವೊಂದರಲ್ಲಿ ಈ ಆಯೋಗದ ಕಾರ್ಯವೈಖರಿಯನ್ನು ತೀವ್ರವಾಗಿ ಟೀಕಿಸಿ, ಅಸರಾಮನ ಬಗ್ಗೆ ಮೃದು ಧೋರಣೆ ತೋರಿದ್ದನ್ನು ಖಂಡಿಸಿತು. ಈ ಆಯೋಗ ಐದು ವರ್ಷಗಳ ನಂತರ ಹೋದ ತಿಂಗಳು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಆ ವರದಿಯಲ್ಲಿ ಏನಿದೆ ಎಂಬುದು ಇನ್ನೂ ಬಹಿರಂಗಗೊಂಡಿಲ್ಲ.

ಗುಜರಾತ್‌ನಲ್ಲಿರುವ ಅಸರಾಮನ ಆಶ್ರಮದಲ್ಲಿ ಈ ಜಂಟಿ ಕೊಲೆ ಪ್ರಕರಣ ನಡೆದ ಕೆಲವೇ ದಿನಗಳಲ್ಲಿ ಮಧ್ಯಪ್ರದೇಶದ ಚಿಂದ್ವಾರ ನಗರದಲ್ಲಿನ ಆತನ ಇನ್ನೊಂದು ಆಶ್ರಮದಲ್ಲೂ ಇಂತಹದ್ದೇ ಇನ್ನೊಂದು ಜಂಟಿ ಕೊಲೆ ನಡೆಯಿತು. ಅದು ಇದಕ್ಕಿಂತಲೂ ಬರ್ಬರವಾಗಿತ್ತು, ಚಿಂದ್ವಾರದಲ್ಲಿನ ಬಾಲಕೇಂದ್ರದಲ್ಲಿ ನರ್ಸರಿ ವಿದ್ಯಾರ್ಥಿಯಾಗಿದ್ದ ಐದು ವರ್ಷದ ಬಾಲಕ ರಾಮಕೃಷ್ಣ ಯಾದವ್ ಮತ್ತು ಮೊದಲನೆ ತರಗತಿಯಲ್ಲಿದ್ದ ಆರು ವರ್ಷದ ಬಾಲಕ ವೇದಾಂತ್ ಮೊರಯ್ಯ ಎಂಬ ಇಬ್ಬರು ಮಕ್ಕಳು ಹಾಸ್ಟೆಲ್‌ನ ಟಾಯ್ಲೆಟ್‌ನಲ್ಲಿ ನಿಗೂಢವಾಗಿ ಶವವಾಗಿದ್ದರು. ಆಗ ಚಿಂದ್ವಾರದ ನಿವಾಸಿಗಳು ಆಶ್ರಮದ ವಿರುದ್ಧ ಪ್ರತಿಭಟಿಸಿದ್ದರು. ಆಗ ಅವರ ಮೇಲೂ ಅಸರಾಮನ ಹಿಂಬಾಲಕರಿಂದ ದಾಳಿ ನಡೆದಿತ್ತು.

ಈ ಹಿಂದೆ ಅಸರಾಮನೊಂದಿಗೆ ನಿಕಟ ಸಂಬಂಧ ಹೊಂದಿದ್ದ, ಆತನ ಎಲ್ಲ ಅವ್ಯವಹಾರಗಳಿಗೆ ಪ್ರತ್ಯಕ್ಷದರ್ಶಿಗಳಾಗಿದ್ದ, ಅದರಿಂದ ಹೇಸಿಗೆ ಅನುಭವಿಸಿ ಆನಂತರ ಆತನಿಂದ ದೂರವಾದ ಇಬ್ಬರು ಈಗ ತಮ್ಮ ಪ್ರಾಣವನ್ನೇ ಉಳಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ. ಅವರೆಂದರೆ ಅಸರಾಮನ ಕಾರ್ಯದರ್ಶಿಯಾಗಿದ್ದ ರಾಜು ಚಂಡಕ್ ಮತ್ತು ಖಾಸಗಿ ವೈದ್ಯರಾಗಿದ್ದ ಅಮೃತ್ ಪ್ರಜಾಪತಿ. ತ್ರಿವೇದಿ ಆಯೋಗದ ಮುಂದೆ "ಅಸರಾಮನ ಆಶ್ರಮದಲ್ಲಿ ಲೈಂಗಿಕ ಅತ್ಯಾಚಾರಗಳು ನಡೆಯುತ್ತಿವೆ" ಎಂದು ಹೇಳಿದ್ದ ರಾಜು ಚಂಡಕ್ ಮೇಲೆ ಅಸರಾಮನ ಹಿಂಬಾಲಕರು ಮೂರು ಗುಂಡುಗಳನ್ನು ಹಾಕಿಸಿದ್ದರು. ಆದರೆ ಅದೃಷ್ಟವಶಾತ್ ಚಂಡಕ್ ಪ್ರಾಣ ಉಳಿಯಿತು.

ಹಾಗೆಯೇ ಅಮೃತ್ ಪ್ರಜಾಪತಿ ಕೂಡ ಅಸರಾಮನ ಆಶ್ರಮದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಗಳನ್ನು, ಮಹಿಳೆಯರೊಂದಿಗೆ ಅಸರಾಮನ ಲೈಂಗಿಕ ಸಂಬಂಧಗಳನ್ನು ಆಕಸ್ಮಿಕವಾಗಿ ಕಣ್ಣಾರೆ ಕಂಡವರು. ಆಗ ಅಸರಾಮನ ಹಿಂಬಾಲಕರು ಪ್ರಜಾಪತಿಗೆ ಬೆದರಿಕೆಗಳನ್ನು ಹಾಕಿ ಅವರನ್ನು ಆಶ್ರಮದಿಂದಲೇ ಒದ್ದೋಡಿಸಿದರು. ಅಷ್ಟಕ್ಕೆ ಸುಮ್ಮನಾಗದೆ ಆನಂತರ ಪ್ರಜಾಪತಿಯವರ ಮೇಲೆ ಆರು ಬಾರಿ ಮಾರಣಾಂತಿಕ ಹಲ್ಲೆಗಳನ್ನೂ ಮಾಡಿದ್ದಾರೆ. ಅವರೂ ಕೂಡ ಅದೃಷ್ಟವಶಾತ್ ಇಲ್ಲಿಯತನಕ ಅದು ಹೇಗೋ ತಮ್ಮ ಪ್ರಾಣವನ್ನು ಉಳಿಸಿಕೊಂಡಿದ್ದಾರೆ.

ವಾಮಾಚಾರದ ಆರೋಪ, ಈಗ ದಾಖಲಾಗಿರುವ ಲೈಂಗಿಕ ದಾಳಿಯ ಆರೋಪ, ಇವುಗಳಲ್ಲದೆ ಅಸರಾಮನ ವಿರುದ್ಧ ಈಗಾಗಲೇ ಹತ್ತಾರು ಭೂಕಬಳಿಕೆ ಆರೋಪಗಳೂ ಕೇಳಿಬಂದಿದ್ದು ಅವುಗಳಲ್ಲಿ ಹಲವು ಸಾಬೀತಾಗಿವೆ.

2000ರಲ್ಲಿ ಅಸರಾಮನ ಆಶ್ರಮಕ್ಕೆಂದು ಗುಜರಾತ್ ಸರ್ಕಾರ ನವ್ಸಾರಿ ಜಿಲ್ಲೆಯಲ್ಲಿ ಹತ್ತು ಎಕರೆಗಳನ್ನು ನೀಡಿತ್ತು, ಆದರೆ ಅಸರಾಮನಿಗೆ ಅಕ್ರಮವಾಗಿ ಭೂಮಿ ನುಂಗುವುದು ಎಷ್ಟು ಪ್ರೀತಿಯ ಕೆಲಸವೆಂದರೆ ಆತ ಸರ್ಕಾರ ಮಂಜೂರು ಮಾಡಿದ್ದ ಭೂಮಿಯ ಸುತ್ತ ಇದ್ದ ಜಾಗೆಗಳಿಗೂ ಬೇಲಿ ಸುತ್ತಿಕೊಂಡಿದ್ದ. ಸ್ಥಳೀಯರು ತೀವ್ರವಾಗಿ ಪ್ರತಿಭಟಿಸಿ ದೂರನ್ನೂ ದಾಖಲಿಸಿದ್ದರು. ಸ್ಥಳೀಯರ ಒತ್ತಡದಿಂದಾಗಿ ಹತ್ತಾರು ಬಾರಿ ವಿಚಾರಣೆ ನಡೆಸಿದ ಸ್ಥಳೀಯ ಅಧಿಕಾರಿಗಳು ಕೊನೆಗೆ ವಿಧಿ ಇಲ್ಲದೆ ಅಸರಾಮ್ ಒತ್ತುವರಿ ಮಾಡಿಕೊಂಡಿದ್ದ ಭೂಮಿಯನ್ನು ಬಿಡಿಸಿಕೊಂಡಿದ್ದರು.

ಆದರೆ ಮಧ್ಯಪ್ರದೇಶದಲ್ಲಿ ಆತ ನುಂಗಿದ್ದ ಭೂಮಿಗೆ ಅಂತಹ ಅದೃಷ್ಟವಿರಲಿಲ್ಲ. ಬರೋಬ್ಬರಿ 700 ಕೋಟಿ ರೂಪಾಯಿಗಳ ಮೌಲ್ಯದ ಆ ಭೂಮಿ ಈಗಲೂ ಆತನ ವಶದಲ್ಲಿದೆ. ಇದು ಹೇಗಾಯಿತೆಂದರೆ 2001ರಲ್ಲಿ ಮಧ್ಯಪ್ರದೇಶದಿಂದ ಪೂಣೆಗೆ ಹೋಗುವ ಹೆದ್ದಾರಿಯಲ್ಲಿ ಇರುವ ಮಂಗಲ್ಯ ದೇಗುಲದ ಆವರಣದಲ್ಲಿ ಹನ್ನೊಂದು ದಿನಗಳ 'ಸತ್ಸಂಗ್' ಸಭೆಯನ್ನು ನಡೆಸಲು ಮಧ್ಯಪ್ರದೇಶದ ಸರ್ಕಾರ ಅನುಮತಿ ನೀಡಿತ್ತು, ಅದನ್ನು ನಡೆಸಲು ಬಂದ ಅಸರಾಮ್ ಸತ್ಸಂಗ್ ಮುಗಿದ ನಂತರವೂ ಆ ದೇಗುಲದ ಆವರಣವನ್ನು ತೊರೆಯಲಿಲ್ಲ, ಯಾಕೆಂದರೆ ಅದರ ವಿಸ್ತಾರವೇ ಇನ್ನೂರು ಎಕರೆ! ಮೊದಲೇ ಹೇಳಿದಂತೆ ಅದರ ಮಾರುಕಟ್ಟೆ ಮೌಲ್ಯ ಬರೋಬ್ಬರಿ 700 ಕೋಟಿ ರೂಪಾಯಿಗಳು.

ಈ ಹಿಂದೆ ಈ ಭೂಮಿಯು ಜಯಂತ್ ವಿಟಮಿನ್ಸ್ ಲಿಮಿಟೆಡ್ ಎಂಬ ಕಂಪನಿಯ ಸ್ವತ್ತಾಗಿತ್ತು, ಆದರೆ ಆ ಕಂಪನಿ ನಷ್ಟವನ್ನು ಅನುಭವಿಸಿ ಕಣ್ಣು ಮುಚ್ಚಿದ್ದರಿಂದ ಈ ಭೂಮಿಯಲ್ಲಿ ಏನಾಗುತ್ತಿದೆ ಎಂದು ಹೇಳುವವರು ಕೇಳುವವರು ಇಲ್ಲದಂತಾಗಿತ್ತು, ಕಂಪನಿಯ ಮಾಲೀಕರೂ ತೆಪ್ಪಗಿದ್ದರು. ಆದರೆ ಈ ಕಂಪನಿಯಲ್ಲಿ ಹಣವನ್ನು ಹೂಡಿದ್ದ ಶೇರುದಾರನೊಬ್ಬ ಕಂಪನಿಯ ಮಾಲೀಕರು ಕಂಪನಿಯ ಸ್ವತ್ತುಗಳನ್ನು ಕಾಪಾಡಿಕೊಳ್ಳದಿದ್ದರಿಂದ ತನ್ನಂತಹವರಿಗೆ ನಷ್ಟವಾಗಿದೆ ಎಂದು ಆರೋಪಿಸಿ ದೂರನ್ನು ಸಲ್ಲಿಸಿದ. ಆಗ ಅಧಿಕಾರಿಗಳು ಕಂಪನಿಯ ಸ್ವತ್ತುಗಳು ಯಾವ್ಯಾವು ಎಂದು ಪತ್ತೆಹಚ್ಚಲು ಶುರುಮಾಡಿದಾಗ ಅದಕ್ಕೆ ಸೇರಿದ್ದ ಈ ಭೂಮಿಯನ್ನು ಅಸರಾಮ್ ಅಕ್ರಮವಾಗಿ ಕಬಳಿಸಿದ್ದು ಪತ್ತೆ ಆಯಿತು. ಈಗ ಇದರ ವಿಚಾರಣೆ ನಡೆಯುತ್ತಿದೆ.

ಇದಲ್ಲದೆ ಗುಜರಾತಿನಲ್ಲೂ ಅಸರಾಮ್ ಭೂಮಿಯನ್ನು ಕಬಳಿಸಿದ್ದನ್ನು ಸ್ವತಃ ಮೋದಿಯ ಸರ್ಕಾರವೇ ವಿಧಾನಸಭೆಯಲ್ಲಿ ಒಪ್ಪಿಕೊಂಡಿದೆ. ನಾಲ್ಕು ವರ್ಷಗಳ ಹಿಂದೆ ಕಾಂಗ್ರೆಸ್ ಶಾಸಕರೊಬ್ಬರು ಕೇಳಿದ ಪ್ರಶ್ನೆಗೆ ಮೋದಿಯ ಸರ್ಕಾರ ಅಹಮದಾಬಾದಿನಲ್ಲಿ ಅಸರಾಮನ ಆಶ್ರಮ 67,099 ಚದುರಡಿ ಭೂಮಿಯನ್ನು ಅಕ್ರಮವಾಗಿ ವಶಪಡಿಸಿಕೊಂಡಿದೆ ಎಂದು ಒಪ್ಪಿಕೊಂಡಿತ್ತು, ಈ ಕುರಿತ ವಿಚಾರಣೆ ಇನ್ನೂ ಆಮೆ ಗತಿಯಲ್ಲಿ ನಡೆಯುತ್ತಿದೆ.

ಇನ್ನು 'ಹೆಡ್‌ಆಫೀಸ್' ಮೊಟೆರಾದಲ್ಲೂ ಅಸರಾಮನ ಗೂಂಡಾಗಿರಿ ಮುಂದುವರೆಯುತ್ತಿದೆ. 1971ರಲ್ಲಿ ಈತ ತನ್ನ ಆಶ್ರಮವನ್ನು ಸ್ಥಾಪಿಸುವ ಮುನ್ನ ಈತನಿಗೆ ಎರಡು ವರ್ಷಗಳ ಕಾಲ ಆಶ್ರಯ ನೀಡಿದ್ದು, ಊಟ ಹಾಕಿದ್ದು ಆತನ ಆಶ್ರಮದ ಪಕ್ಕದಲ್ಲೇ ಇರುವ ಸದಾಶಿವ ಆಶ್ರಮ. ಇವತ್ತು ಸದಾಶಿವ ಆಶ್ರಮಕ್ಕಿಂತಲೂ ಅಸರಾಮನ ಸಾಮ್ರಾಜ್ಯ ಬೃಹದಾಕಾರವಾಗಿ ಬೆಳೆದು ನಿಂತಿದೆ. ಆದರೂ ಭೂಮಿಯ ದಾಹ ಇದ್ದೇ ಇದೆ. 1986ರಲ್ಲಿ ತನಗೆ ಆಶ್ರಯ ನೀಡಿದ್ದ ಸದಾಶಿವ ಎಂಬುವವರು ತೀರಿಕೊಂಡಾಗ ಆತನ ಆಶ್ರಮದ ಭೂಮಿಯನ್ನೂ ವಶಪಡಿಸಿಕೊಳ್ಳಲು ಅಸರಾಮ್ ಪ್ರಯತ್ನಿಸಿದ್ದ. ಆದರೆ ಅಸರಾಮ 'ಬಾಪು' ಎಂದು ಕರೆಸಿಕೊಳ್ಳುವ, ಸ್ವಘೋಷಿತ 'ದೇವಮಾನವ' ಆಗುವ ಮುನ್ನ ಇವನ ಅಸಲಿಯತ್ತನ್ನು ಅರಿತಿದ್ದ ಸ್ಥಳೀಯರು ಇದನ್ನು ವಿರೋಧಿಸಿದ್ದರು. ಆಗ ಸ್ಥಳೀಯರು ತನ್ನ ಮಹಿಳಾ ಹಿಂಬಾಲಕಿಯ ಮೇಲೆ ದಾಳಿ ಮಾಡಿದರೆಂದು ಅಸರಾಮ್ ಕೊಟ್ಟ ದೂರನ್ನು ಸಲ್ಲಿಸಿದ್ದ, ಆ ಮೂಲಕ ಅವರೆಲ್ಲರೂ ಕಂಬಿ ಎಣಿಸುವಂತೆ ಮಾಡಿದ್ದ.

ಇದು ಅಸರಾಮನ ಅಸಲಿ ಚಿತ್ರ. ಆದರೂ ವಿಶ್ವಹಿಂದೂ ಪರಿಷತ್ತಿನ ನಾಯಕ್ ಪ್ರವೀಣ್ ತೊಗಾಡಿಯಾ "ಅಸರಾಮ್ ಬಾಪು ಓರ್ವ ಸಂತ, ನಿಷ್ಪಾಪಿ. ಆತನ ವಿರುದ್ಧ ಸುಳ್ಳು ದೂರನ್ನು ದಾಖಲಿಸಲಾಗಿದೆ" ಎಂದು ವಕಾಲತ್ತು ವಹಿಸುತ್ತಾನೆಂದರೆ ಈ ಚೆಡ್ಡಿಗಳಿಗೆ ಯಾವುದರಿಂದ ಹೊಡೆಯಬೇಕು ಹೇಳಿ. ■

ಕಂಡಹಾಗೆ




• ಗೌರಿ ಲಂಕೇಶ್
ಪ್ರಧಾನ ಸಂಪಾದಕಿ
editorlankesh@gmail.com

ಧುಂಧಿ: ದುರದೃಷ್ಟಕರ ವಿವಾದ…

ಪುಸ್ತಕ ವಿಮರ್ಶೆ

ಸಾಹಿತಿ-ರಂಗಕರ್ಮಿ-ನಾಟ್ಯಾಚಾರ್ಯ ಯೋಗೇಶ್ ಮಾಸ್ಟರ್ ಅವರು ರಚಿಸಿರುವ 'ಧುಂಧಿ' ಸಾಕಷ್ಟು ವ್ಯಾಪಕ ಓದು ಹಾಗೂ ಸಂಶೋಧನೆಯನ್ನು ಆಧರಿಸಿರುವ ಒಂದು ವಿಶಿಷ್ಟ ಕಾದಂಬರಿ. ಇದನ್ನು ಎರಡು ನೆಲೆಗಳಲ್ಲಿ ಅರ್ಥೈಸಬಹುದು: ಸಾಹಿತ್ಯಕ ನೆಲೆಯಲ್ಲಿ ಮತ್ತು ಮಾನವ ಶಾಸ್ತ್ರೀಯ ನೆಲೆಯಲ್ಲಿ.

ಅ) ಸಾಹಿತ್ಯಕ ನೆಲೆಯಲ್ಲಿ, ಸ್ಥೂಲವಾಗಿ, 'ಧುಂಧಿ' ಕೃತಿಯನ್ನು ವೇದಕಾಲೀನ ಸಮಾಜವನ್ನು ವಸ್ತುವನ್ನಾಗುಳ್ಳ ಒಂದು ರೋಚಕ ಕಾದಂಬರಿಯಂತೆ ನೋಡಬಹುದು. ಕನ್ನಡದಲ್ಲಿ ಇದೇ ವಸ್ತುವನ್ನಾಧರಿಸಿದ ಕೆಲವಾದರೂ ಕಾದಂಬರಿಗಳು ಬಂದಿವೆ: ಶಂಕರ ಮೊಕಾಶಿ ಪುಣೇಕರ್, 'ಅವಧೇಶ್ವರಿ'; ದೇವುಡು, 'ಮಹಾಬ್ರಾಹ್ಮಣ', 'ಮಹಾಕ್ಷತ್ರಿಯ'; ಕೆ. ಎಸ್. ನಾರಾಯಣಾಚಾರ್ಯ, 'ಅಗಸ್ತ್ಯ', 'ಕೃಷ್ಣಾವತಾರ'; ಇತ್ಯಾದಿ. ಈ ಕೃತಿಗಳೆಲ್ಲವೂ ಶ್ರೇಣೀಕೃತ ಭಾರತೀಯ ಸಮಾಜವನ್ನು ಮೇಲಿಂದ, ಎಂದರೆ ಅಧಿಕಾರಸ್ಥ ವರ್ಗಗಳ ನೆಲೆಯಿಂದ ನೋಡುತ್ತವೆ. 'ಧುಂಧಿ' ಯಾದರೋ ಅದೇ ಪ್ರಾಚೀನ ಭಾರತೀಯ ಸಮಾಜವನ್ನು



ಧುಂಧಿ: ಅರಣ್ಯಕನೊಬ್ಬ ಗಣಪತಿಯಾದ ಕಥೆ
ಲೇಖಕ: ಯೋಗೇಶ್ ಮಾಸ್ಟರ್
ಪ್ರಕಾಶಕರು: ರಾಜಮಾರ್ಗ ಸಾಹಿತ್ಯ ಸಂಸ್ಕೃತಿ
ಪುಟ: 355 ಬೆಲೆ: 160/-

ಕೆಳಗಿನಿಂದ, ಎಂದರೆ ಬುಡಕಟ್ಟು ಜನಾಂಗಗಳು, ಅರಣ್ಯವಾಸಿಗಳು, ದಾಸರು, ಇವರುಗಳನ್ನು ಒಳಗೊಂಡ ಅಲಕ್ಷಿತ ಸಮುದಾಯಗಳ ನೆಲೆಯಿಂದ ನೋಡುತ್ತದೆ.

ಕ್ರಿಪೂ. 400-200 ಈ ಅವಧಿಯಲ್ಲಿ, ಗಂಗಾನದಿಯ ದಂಡೆಯಲ್ಲಿರುವ ಒಂದು ಕಾಡಿನಲ್ಲಿ ವಾಸಿಸುತ್ತಿರುವ, ಪಶುಪಾಲಕರಾದ ಶಂಬರ ಎಂಬ ಆರಣ್ಯಕ ಮತ್ತು ಅವನ ತಾಯಿ ವಸುಮಾ ಇವರುಗಳಿಂದ ಈ ಕೃತಿ ಪ್ರಾರಂಭವಾಗುತ್ತದೆ. ಶಂಬರನಿಗೆ 25 ವರ್ಷಗಳಾದಾಗ ವಸುಮಾ ತನ್ನ ಗೆಳತಿಯರೊಡನೆ ಹಿಮಾಲಯದ ತಪ್ಪಲಿಗೆ ಹೊರಟುಹೋಗುತ್ತಾಳೆ; ಅವಳಿಗಾಗಿ ಹಂಬಲಿಸುತ್ತಾ ಶಂಬರ ಒಬ್ಬನೇ ಇರುವಾಗ, ಕಾಲಕ್ರಮದಲ್ಲಿ ಯಾಜ್ಞಿಕ ಎಂಬ ಬ್ರಾಹ್ಮಣ ಮತ್ತು ಅಮ್ಮಿತ ಎಂಬ ದಾಸ ಇವನನ್ನು ಕೂಡಿಕೊಳ್ಳುತ್ತಾರೆ. ಸ್ವಲ್ಪ ಸಮಯದನಂತರ, ಸಾವಿನ ಅಂಚಿನಲ್ಲಿರುವ ಧುಂಧಿ ಗಣಪತಿಯನ್ನು ನೋಡಲು ಯಾಜ್ಞಿಕ ಮತ್ತು ಶಂಬರ ಮನೆಯನ್ನು ಅಮ್ಮಿತನ ರಕ್ಷಣೆಗೆ ಒಪ್ಪಿಸಿ ಹೊರಡುತ್ತಾರೆ. ದಾರಿಯಲ್ಲಿ ಧುಂಧಿಯ ಬಾಲ್ಯದ ತಂದೆ-ಗುರು-ಮಿತ್ರ ಎಲ್ಲವೂ ಆದ ವೃದ್ಧ ವದೀರಜ್ಜ ಇವರನ್ನು ಸೇರಿಕೊಳ್ಳುತ್ತಾನೆ; ಪ್ರವಾಸದುದ್ದಕ್ಕೂ ವದೀರಜ್ಜ ಧುಂಧಿಯ ಕಥೆಯನ್ನು ಇತರರಿಗೆ ಹೇಳುತ್ತಾನೆ. ಧುಂಧಿಯೊಬ್ಬ ಅರಣ್ಯಕ; ಅವನ ಸಾಕುತಾಯಿ ಪಾರ್ವತಿ. ತನ್ನ ಅಗಾಧ ಪೌರುಷದಿಂದ ಧುಂಧಿ ತನ್ನ ಸುತ್ತಮುತ್ತಲಿನ ಗಣಗಳನ್ನು ಹಾಗೂ ಆರ್ಯ ರಾಜರನ್ನು ಗೆಲ್ಲುತ್ತಾ, ಗಣ-ಪತಿಯಾಗಿ, ಕೊನೆಯಲ್ಲಿ ಮಹಾ ಗಣ-ಪತಿಯಾಗುತ್ತಾನೆ. "ಒರಟ- ಕ್ರೂರಿ-ಅನಾರ್ಯ"ನಾದ ಧುಂಧಿಯಿಂದಾಗುವ ಉಪಟಳವನ್ನು ನಿವಾರಿಸಿಕೊಳ್ಳಲು ಆರ್ಯ ರಾಜರು ಯಾವ ಶುಭಕಾರ್ಯವಾದರೂ ಮೊದಲಿಗೆ ಇವನನ್ನು ಆಹ್ವಾನಿಸಿ, ತಮ್ಮ ಕಾರ್ಯ ನಿರ್ವಿಘ್ನವಾಗುವಂತೆ ಆಶೀರ್ವದಿಸಲು ಬೇಡಿಕೊಳ್ಳುತ್ತಾರೆ; ಕೆಲ ಕಾಲದನಂತರ ಇದೇ ಒಂದು ಸಂಪ್ರದಾಯವಾಗಿ ಬೆಳೆಯುತ್ತದೆ. ಧುಂಧಿಯ ಸಾವಿನೊಂದಿಗೆ ಈ ಕಾದಂಬರಿ ಕೊನೆಗೊಳ್ಳುತ್ತದೆ.

ಅರ್ಥಾತ್, ಪುರಾಣಗಳಲ್ಲಿ ಪಾರ್ವತಿಯ ಬೆವರಿನಿಂದ ಹುಟ್ಟುವ ಮತ್ತು ತನ್ನ ತಂದೆಯಿಂದಲೇ ಕೊಲ್ಲಲ್ಪಟ್ಟು ಅನಂತರ ಆನೆಯ ಮುಖವನ್ನು ಪಡೆಯುವ ಗಣಪತಿಗೆ ಬದಲಾಗಿ, ಈ ಕಾದಂಬರಿಯಲ್ಲಿ ನಾವು ಅನಾರ್ಯ ಬಂಡುಕೋರ ಗಣಪತಿಯನ್ನು ಕಾಣುತ್ತೇವೆ. ಶಂಬರ-ಅಮ್ಮಿತರ ಕಥೆ ಧುಂಧಿಯ ಕಥೆಗೊಂದು ಆವರಣವನ್ನು ಕಲ್ಪಿಸುತ್ತದೆ. ಈ ಆವರಣವೂ ತನ್ನ ವಿವರಗಳಲ್ಲಿ ಮುಖ್ಯ ಕಥೆಗೆ ಸಮಾನಾಂತರವಾಗಿರುವುದರಿಂದ, ಆ ಮುಖ್ಯ ಕಥೆಗೆ ವಿಶ್ವಸನೀಯತೆಯನ್ನು ಕೊಡುತ್ತದೆ.

ಆ) ಮಾನವಶಾಸ್ತ್ರೀಯ ನೆಲೆಯಲ್ಲಿ, ಪ್ರಾಚೀನ ಭಾರತೀಯ ಸಮಾಜದಲ್ಲಿ ಯಾವುದೋ ಒಂದು ದೀರ್ಘ ಕಾಲಘಟ್ಟದಲ್ಲಿ ಸಂಭವಿಸಿರಬಹುದಾದ ಅಗಾಧ ಸಾಮಾಜಿಕ ಚಲನೆಯನ್ನು ಈ ಕೃತಿ ದಾಖಲಿಸಲು ಪ್ರಯತ್ನಿಸುತ್ತದೆ. ಈ ನೆಲೆಯಲ್ಲಿ ಕೃತಿಯ ಮುಖ್ಯ ವಾದವೆಂದರೆ "ಪ್ರಾಚೀನ ಆರ್ಯ ವೈದಿಕ ಸಮಾಜವು ತಮ್ಮಿಂದ ಸೋತ ಬರ್ಬರ ಮತ್ತು ನಿಷಾದಾದಿಗಳ ಸಾಮಾಜಿಕ ಸ್ಥಿತಿಗಳನ್ನು ಯಥಾಸ್ಥಾನದಲ್ಲಿರಿಸಲು ಮತ್ತು ಸ್ನೇಹಬುದ್ಧಿಯಿಂದ ಅವರನ್ನು ಸಮಾಧಾನಪಡಿಸಲು ಅವರಲ್ಲಿಯ ಬಹುಪೂಜಿತ ದೇವತೆಗಳನ್ನು ಮತ್ತು ಮುಖ್ಯವಾದ ಪೂಜಾಂಶಗಳನ್ನು ತಮ್ಮ ಶಕ್ತ್ಯಾನುಸಾರ ಪರಿಷ್ಕರಿಸಿ ಅವುಗಳನ್ನು ಒಪ್ಪಿಕೊಂಡರು" ('ಮುನ್ನುಡಿ'). ಈ ಕಥನದ ಕೇಂದ್ರದಲ್ಲಿರುವುದು ಆ ಕಾಲಘಟ್ಟದಲ್ಲಿ ಆಗಿರಬಹುದಾದ ಆರ್ಯ-ಅನಾರ್ಯ ಸಂಪರ್ಕ-ಸಂಘರ್ಷ-ರಾಜಿ-ಅನುಸಂಧಾನ ಪ್ರಕ್ರಿಯೆಯ ರೋಚಕ ವಿವರಗಳು. ಮುಖ್ಯವಾಗಿ, ಈ ಕಥನವು ಮಂಡಿಸುವುದೇನೆಂದರೆ:

ಅ) ಅನಾರ್ಯ ರುದ್ರಗಣ (ನಿಷಾದರು), ಮಾತಂಗ ಗಣ (ಆನೆಗಳನ್ನು ಪಳಗಿಸುವವರು), ಮೂಷಿಕ ಗಣ, ಮಯೂರ ಗಣ, ಇತ್ಯಾದಿ ಅನೇಕ ಸಮುದಾಯಗಳು ಸ್ವತಂತ್ರವಾಗಿ ತಮ್ಮದೇ ಆದ ಶ್ರೀಮಂತ, ಮಾತೃಮೂಲೀಯ ಸಂಸ್ಕೃತಿಯನ್ನು ಹೊಂದಿ, ವಿವಿಧ ಅರಣ್ಯಗಳಲ್ಲಿ ನೆಮ್ಮದಿಯಿಂದ ಬಾಳುತ್ತಿದ್ದುವು. 'ರುದ್ರ,' 'ಗಣಪತಿ' ಮುಂತಾದುವು 'ಇಂದ್ರ'ನಂತೆ ಪದವಿಗಳ ಹೆಸರೇ ಹೊರತು ವ್ಯಕ್ತಿವಾಚಕಗಳಲ್ಲ, ಆರ್ಯರು ಆರ್ಯಾವರ್ತದಿಂದ ದಕ್ಷಿಣಕ್ಕೆ ತಮ್ಮ ಪ್ರಭುತ್ವವನ್ನು ವಿಸ್ತರಿಸುತ್ತಾ ಕೃಷಿಗಾಗಿ ಹಾಗೂ ರಾಜ್ಯವಿಸ್ತರಣೆಗಾಗಿ ಅರಣ್ಯಗಳನ್ನು ನಾಶಮಾಡಬೇಕಾಯಿತು; ಆಗ ಅನಿವಾರ್ಯವಾಗಿ ಅರಣ್ಯಗಳಲ್ಲಿದ್ದ ಅನಾರ್ಯ ಗಣಗಳೊಡನೆ ಘರ್ಷಣೆ ಶುರುವಾಯಿತು. ಕಾಲಕ್ರಮದಲ್ಲಿ, ಆರ್ಯರು ಅನಾರ್ಯರೊಡನೆ ರಾಜಿ-ಸಂಧಾನಗಳಿಗೆ ಮುಂದಾದಾಗ ಎರಡೂ ಸಂಸ್ಕೃತಿಗಳು ಪರಸ್ಪರ ಕೊಡುಕೊಳ್ಳುವಿಕೆಗಳನ್ನು ಕೈಗೊಂಡವು.

ಆ) ಅನಾರ್ಯ ಗಣ-ನಾಯಕರಾದ ನಿಷಾದ ರುದ್ರ, ಗಿರಿಕನ್ಯೆ ಪಾರ್ವತಿ, ಗೊಲ್ಲ ಕೃಷ್ಣ ಮುಂತಾದವರನ್ನು ಆರ್ಯರು ದೈವತ್ವಕ್ಕೇರಿಸಿ ಸ್ವೀಕರಿಸಿದರು. ಈ ರೀತಿ ಕಾಲಕ್ರಮದಲ್ಲಿ ದೈವತ್ವಕ್ಕೇರಿದವನು ಅನಾರ್ಯ ಗಣಪತಿ. (ಇದನ್ನು ಸಂಸ್ಕೃತೀಕರಣದ ('appropriation') ಒಂದು ಭಾಗದಂತೆ ನೋಡಬಹುದು.)

ಆ) ಅನಾರ್ಯರು ತಮ್ಮ ಸಂಸ್ಕೃತಿಯ ಪ್ರಮುಖ ಅಂಶವಾಗಿದ್ದ ಮುಕ್ತ ಲೈಂಗಿಕತೆಯನ್ನು ಹಾಗೂ ಬಹುಪತಿತ್ವವನ್ನು ಕೈಬಿಟ್ಟು, ಆರ್ಯರ ವಿವಾಹಪದ್ಧತಿಯನ್ನು ಸ್ವೀಕರಿಸಿದರು.

ಇ) ಆರ್ಯರೂ ಅನಾರ್ಯರಂತೆ ಗೋಮಾಂಸ ಭಕ್ಷಕರಾದುದರಿಂದ ಆಹಾರದ ವಿಷಯದಲ್ಲಿ ಹೊಂದಾಣಿಕೆ ಅಷ್ಟೇನೂ ಕಷ್ಟವಾಗಲಿಲ್ಲ. (ಆರ್ಯರು ಅತಿಥಿಗಳನ್ನು 'ಗೋಘ್ನ' ಎಂದರೆ 'ಗೋವುಗಳನ್ನು ಘಾತಿಸುವವರು' ಎಂದೇ ಕರೆಯುತ್ತಿದ್ದರು); ಇತ್ಯಾದಿ.

ಈ ಸಂದರ್ಭದಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ, ಈ ಕೃತಿಯ ವೈಚಾರಿಕ ಕೇಂದ್ರ (normative centre) ಧುಂಧಿಯಲ್ಲ - ಆರ್ಯ ವಾಮದೇವ ಮತ್ತು ಅನಾರ್ಯ ವದೀರಜ್ಜ. ಒಂದು ಸಂದರ್ಭದಲ್ಲಿ ಮಹರ್ಷಿ ವಾಮದೇವರು ಧುಂಧಿಗೆ ಹೀಗೆ ಹೇಳುತ್ತಾರೆ: "ಗೆಳೆಯಾ, ಯಾರೇ ಯಾವುದೇ ಜಾತಿಯಲ್ಲಿ, ಯಾವುದೇ ವರ್ಣದಲ್ಲಿ, ಯಾವುದೇ ವರ್ಗದಲ್ಲಿ ಹುಟ್ಟಿದರೂ ತಾವು ಪಡೆಯುವ ಸಂಸ್ಕಾರದಿಂದ, ತಾವು ನಡೆಸುವ ಸದಾಚಾರದಿಂದ ಬ್ರಾಹ್ಮಣರಾಗುತ್ತಾರೆ. ಜಾತಿ ಎಂಬುದು ಕರ್ಮದಿಂದಾಗುವುದೇ ಹೊರತು ಹುಟ್ಟಿನಿಂದಲ್ಲ" (ಪು. 271). ಅರಣ್ಯಕನಾದ ವದೀರಜ್ಜನಿಗೆ ಸೃಷ್ಟಿಯ ಸಕಲ ಜೀವಜಾಲವೂ ಪೂಜಾರ್ಹ; ತಮ್ಮ ಸಮುದಾಯದ ಮೇಲೆ ದಂಡೆತ್ತಿ ಬಂದ ಶತ್ರುಗಳಿಗೂ ತಾವು ತಿನ್ನುವ ಆಹಾರವನ್ನು ಕೊಡುತ್ತಾರೆ. "ಒಂದು ಪ್ರಾಣಿಯನ್ನು ಕುಯ್ಯುವಾಗಲೂ, ಒಂದು ಮರವನ್ನು ಕಡಿಯುವಾಗಲೂ, ಒಂದು ಮರದಿಂದ ಅಥವಾ ಗಿಡದಿಂದ ಹಣ್ಣನ್ನೋ ಕಾಯಿಯನ್ನೋ ಹೂವನ್ನೋ ಅಥವಾ ಬರೀ ಎಲೆಯನ್ನೋ ಕೀಳುವಾಗಲೂ ಬೊಗಸೆಯೊಡ್ಡಿ, ಕಣ್ಮುಚ್ಚಿ, ವದೀರಜ್ಜ" ಪ್ರಾರ್ಥಿಸುತ್ತಿದ್ದರು; ಅವುಗಳ ಒಪ್ಪಿಗೆ ಅಂತರ್ಬೋಧವಾದಾಗ ಮಾತ್ರ ಮುಂದುವರೆಯುತ್ತಿದ್ದರು (ಪು.80). ಮಾನವರಿಗೂ ನಿಸರ್ಗಕ್ಕೂ ಇರಬೇಕಾದ ಅವಿನಾಸಂಬಂಧದ ಮೂರ್ತ ರೂಪ ವದೀರಜ್ಜ.

'ಧುಂಧಿ' ಲೇಖಕರ ಮೊದಲ ದೀರ್ಘ ಕೃತಿಯಾದುದರಿಂದ ಅದರ ಮಿತಿಗಳೂ ಸಾಕಷ್ಟಿವೆ. ಕಾದಂಬರಿ ವರ್ಣಿಸುವ ಆರ್ಯ-ಅನಾರ್ಯ ಘರ್ಷಣೆ ಹಾಗೂ ಸಂಧಾನ ಪ್ರಕ್ರಿಯೆ ಕನಿಷ್ಠ ಪಕ್ಷ ಲೇಖಕರು ಸೂಚಿಸುವ ಕಾಲಕ್ಕಿಂತ ಒಂದೆರಡು ಸಹಸ್ರಮಾನ ಹಿಂದೆ ಹೋಗಬೇಕು; ಕ್ರಿಪೂ. 3-2ನೆಯ ಶತಮಾನಗಳ ಕಾಲ ಮೌರ್ಯ ಸಾಮ್ರಾಜ್ಯದ ಕಾಲ ಮತ್ತು ಬುದ್ಧನಿಗಿಂತ 200 ವರ್ಷ ಈಚಿನದು. ಆ ಹೊತ್ತಿಗೆ, ಆರ್ಯ-ಅನಾರ್ಯ ಸಂಘರ್ಷ ತನ್ನದೇ ಆದ ರೀತಿಯಲ್ಲಿ ಮುಗಿದಿತ್ತು. ಹಾಗೆಯೇ, ಅನೇಕ ಸಂದರ್ಭಗಳಲ್ಲಿ ಲೇಖಕರು ಕೊಡುವ ವಿವರಗಳು ಔಚಿತ್ಯಪ್ರಜ್ಞೆಯನ್ನು ಮೀರುತ್ತವೆ. ಅನಾರ್ಯ ಸಮುದಾಯಗಳಲ್ಲಿತ್ತು ಎಂದು ಹೇಳಲಾಗುವ ಮುಕ್ತ ಲೈಂಗಿಕತೆಯನ್ನು ದಾಖಲಿಸಲು ಲೇಖಕರು ಅನೇಕ ಸನ್ನಿವೇಶಗಳನ್ನು ಸೃಷ್ಟಿಸುತ್ತಾರೆ: ಕಾದಂಬರಿಯು ಶುರುವಾಗುವುದೇ ಶಂಬರನು ತನ್ನ ಉದ್ರಿಕ್ತ ಶಿಶ್ನವನ್ನು ತೋರಿಸುತ್ತಾ… ತಾಯಿಯನ್ನು ಸುತ್ತು ಹಾಕುವುದರಿಂದ. ಅನಂತರ ಬರುವ ರುದ್ರ-ಪಾ… ಸಂಭೋಗ ವರ್ಣನೆ ದೀರ್ಘವಾಗಿರುವುದಲ್ಲದೆ ಜಿಗುಪ್ಸೆಯ… ಉಂಟುಮಾಡುತ್ತದೆ. ಕೃತಿಯಲ್ಲಿ ಬರುವ ರುದ್ರ/ಶಿವನ ಪಾತ್ರ ತು… ಅತೃಪ್ತಿಕರವಾಗಿದೆ.

ಆದರೆ, ಇವೆಲ್ಲಾ ಮಿತಿಗಳನ್ನು ಗುರುತಿಸಿಯೂ ನಾವು 'ಧು… ಕಾದಂಬರಿಯ ರಚನೆಯ ಹಿಂದೆ ಇರುವ ಅಗಾಧ ವ್ಯುತ್ಪತ್ತಿ ಹಾಗೂ ಚಿಂತನೆ… ಮರೆಯಬಾರದು. ಕನ್ನಡದಲ್ಲಿ ಮತ್ತು ಕಾದಂಬರಿಯ ರೂಪದಲ್ಲಿ ಈ ಬ… ಇತಿಹಾಸ ಚಿತ್ರಣ ಬಂದಿರುವುದು ಇದೇ ಮೊದಲು.

ಒಂದು ವೈಚಾರಿಕ ಕೃತಿ ಮಿಶ್ರ ಪ್ರತಿಕ್ರಿಯೆಗಳಿಗೆ ಆಸ್ಪದ ಕೊಡು… ಸಹಜ; ಈ ಕುರಿತು ಆರೋಗ್ಯ ಪೂರ್ಣ ಚರ್ಚೆ ನಡೆಯುವುದೂ ಅ… ಓದುಗರಿಗೆ ಕೃತಿಯ ವೈಚಾರಿಕತೆಯನ್ನು ಒಪ್ಪುವ ಅಥವಾ ತಿರಸ್ಕರಿ… ಸಂಪೂರ್ಣ ಸ್ವಾತಂತ್ರ್ಯವಿದೆ. ಆದರೆ, 'ಧಾರ್ಮಿಕ ಕಾರಣ'ಗಳನ್ನು ಮುಂ… ಈ ಕೃತಿಯ ವೈಚಾರಿಕತೆಯನ್ನು ಕುರಿತು ಆವೇಶಪೂರ್ಣ ವಾದ-ವಿವಾದ… ನಡೆಯುತ್ತಿ ರುವುದು ದುರದೃಷ್ಟಕರ.


1) ಪ್ರಾಚೀನ ಭಾರತವನ್ನು ಕುರಿತು ಕಾದಂಬರಿ ಯಲ್ಲಿ ಬರುವ ವಿವ… ಅಷ್ಟೇನೂ ಹೊಸದಲ್ಲ.

ಕಳೆದ ಶತಮಾನದಲ್ಲಿ ರೋಮಿಲಾ ಥಾಪರ್, ಎಸ್.ಆರ್.ಶರ್ಮ, ಭ… ಶರಣ ಉಪಾಧ್ಯಾಯ, ದೇವೀ ಪ್ರಸಾದ್ ಚಟ್ಟೋಪಾಧ್ಯಾಯ, ಮುಂ… ಅನೇಕ ಇತಿಹಾಸಜ್ಞರು ಪ್ರಾಚೀನ ಭಾರತೀಯ ಸಮಾಜದ ಬಹುವಣೀ… ನೇಯ್ಗೆಯನ್ನು ಸವಿಸ್ತಾರವಾಗಿ ದಾಖಲಿಸಿದ್ದಾರೆ. (ಪಾಲ್ ಬಿ.ಕೋರ್ಟ್… ಅವರ 'ಗಣೇಶ: ಲಾರ್ಡ್ ಆಫ್ ಅಬ್ಸ್ಟಕಲ್ಸ್' ಕೃತಿಯನ್ನು … ಆಧರಿಸಿರುವುದಾಗಿ ಲೇಖಕರು ಮುನ್ನುಡಿಯಲ್ಲಿ ಹೇಳುತ್ತಾರೆ.) ಇವು… ಒಂದೆರಡನ್ನಾದರೂ ನಾವು ಗಮನಿಸಿದರೆ, ಯೋಗೇಶ್ ಮಾಸ್ಟರ್ ಅವರ… ಎಷ್ಟು ಸಂಯಮದಿಂದ ಬರೆಯಲ್ಪಟ್ಟಿದೆ ಎಂಬುದು ಗೊತ್ತಾಗುತ್ತದೆ.

ಅನೇಕ ಭಾಷೆಗಳಿಗೆ ಅನುವಾದಿತವಾಗಿರುವ ಭಗವತ್ ಶರಣ ಉಪಾಧ… 'ಭಾರತೀಯ ಬಹುಮುಖೀ ಸಂಸ್ಕೃತಿ' ಎಂಬ ಕೃತಿಯ ಕೆಲವು ತೀರ್ಮಾನ… ಹೀಗಿವೆ: ಪ್ರಸಿದ್ಧ ವೈಯಾಕರಣಿ ಪಾಣಿನಿ "ಭಾರತದವನಾಗಿರದೆ ಇ… ನಾಗರಿಕನಾಗಿದ್ದ ಯೂಸುಫ಼ಿಯಾ ಪಠಾಣನಾಗಿದ್ದ"; "ಮುಸ್ಲಿಮರ ಏಕ ದ… ಕಲ್ಪನೆಯು... ಶಂಕರರ ಅದ್ವೈತ ಚಳವಳಿಗೆ ಪ್ರೇರಕವಾಗಿರಬಹು… "ಮಹಾಭಾರತದಲ್ಲಿ ಬರುವ ಶಿಲ್ಪಿ ಮಯ ಅಸ್ಸೀರಿಯಾದ ವಾಸ್ತು… "ಅಸ್ಸೀರಿಯನ್ನರ ಶಿಕ್ಷಾವಿಧಾನಗಳಲ್ಲಿ ಒಂದಾದ 'ಮೂಗಿನಲ್ಲಿ ರಂಧ್ರ … ದಾರ ಕಟ್ಟುವ ಪದ್ಧತಿ' ಭಾರತದಲ್ಲಿ ಮೂಗುಬೊಟ್ಟಾಗಿ ಅಲಂ… ವಿಧಾನವಾಯಿತು"; ಇತ್ಯಾದಿ. … ದ್ವೈತ ಸಿದ್ಧಾಂತದ ಮೇಲೆ ಕ್ರಿಶ್ಚಿ… ಧರ್ಮದ ಪ್ರಭಾವವಿದೆ … ಎ.ಎಲ್.ಬಾಷಮ್ ವಾದಿಸುತ್ತಾ… ಅಂಶವನ್ನು ರೋಮಿಲಾ ಥಾ… ಅವರೂ ಒಪ್ಪುತ್ತಾರೆ. ಇಂ… ವಿಚಾರಗಳಿಗಾಗಿ ಉಪಾಧ… ರನ್ನಾಗಲಿ, ಬಾಷಮ್ ಹ… ರೋಮಿಲಾ ಥಾಪರ್ ಅವರನ… ಧರ್ಮದ್ರೋಹಿಗಳೆಂದು ಕ… ದಾಗಲಿ ಅವರ ವಿರುದ್ಧ ಪ್ರತಿ… ದುದಾಗಲಿ ನನಗೆ ಗೊತ್ತಂತೆ …

2) ವೇದೋಪನಿಷತ್ತುಗ… ಕಂಡುಬರುವ ಧೀಮಂತ ವೈಚಾ… ಇಂದಿಗೂ ನವ್ಯ… ಆಶ್ಚರ್ಯಗೊಳಿಸುತ್ತದೆ. ಕೃಷ್ಣ ಯಜುರ್ವೇದದಲ್ಲಿ ಬರುವ 'ಶ್ರೀ ರುದ್ರ… ಎಂಬ ಭಾಗವು ಪ್ರತಿದಿನವೂ ದೇಶದ ಸಹಸ್ರಾರು ಶಿವ ದೇವಾಲಯ… ಅಭಿಷೇಕದ ಸಂದರ್ಭದಲ್ಲಿ ಉಚ್ಚರಿಸಲ್ಪಡುತ್ತದೆ; ಅದರಲ್ಲಿ ಒಂದು … "ತಸ್ಕರಾಣಾಂ ಪತಯೇ ನಮಃ" ("ಕಳ್ಳರ ನಾಯಕನಿಗೆ ನಮಿಸುತ್ತೆ… ಎಂದೂ, ಮತ್ತೊಂದು ಕಡೆ "ಕುಲಾಲೇಭ್ಯೋ ಕರ್ಮಾರೇಭ್ಯಶ್ಚ ವೋ ನ… ("ಕುಂಬಾರನಿಗೆ, ಕಮ್ಮಾರನಿಗೆ ನಮಿಸುತ್ತೇವೆ") ಎಂದೂ ರುದ್ರನನ್ನು ವರ್ಣಿಸಲ… ಪ್ರಸಿದ್ಧ 'ನಾಸದೀಯ ಸೂಕ್ತ' ಹೀಗೆ ಮುಗಿಯುತ್ತದೆ: "ಅಸ್ಯಾ… ಪರಮೆವ್ಯೋಮನ್ ತ್ಸೋ ಅಂಗ ವೇದ ಯದಿ ವಾ ನ ವೇದ" ("ಮೇಲಿ… ಎಲ್ಲವನ್ನೂ ನೋಡುತ್ತಿರುವ ಅವನು ಇದೆಲ್ಲವನ್ನೂ ಅರಿತಿರಬಹುದ… ಅಥವಾ ಅವನಿಗೂ ಗೊತ್ತಿಲ್ಲ"). ಎಂದರೆ, ದೇವರಿಗೂ ಈ ಸೃಷ್ಟಿ ರ… ಪ್ರಾಯಶಃ ಗೊತ್ತಿಲ್ಲ ಎಂದು ಹೇಳುವ ಪ್ರಖರ ವೈಚಾರಿಕತೆ ಉಪನಿಷದ್ಕಾರರ… ಕೊನೆಯದಾಗಿ: ಅತ್ಯಂತ ಪ್ರಾಚೀನವಾಗಿರುವ, ಉಪನಿಷತ್ತುಗಳ … ಚಿಂತನೆಯನ್ನು ಮತ್ತು ಪ್ರತಿಭೆಯ ಪರಾಕಾಷ್ಠೆಯಾದ 'ರಾಮಾಯ… 'ಮಹಾಭಾರತ'ಗಳನ್ನು ಆಧರಿಸಿರುವ, ಹಿಂದೂ ಧರ್ಮವು ಒಂದು ಒ… ಪುಸ್ತಕದಿಂದ ಹಿರಿಮೆಯಾಗಲೀ, ಒಂದು ಕೆಟ್ಟ ಪುಸ್ತಕದಿಂದ ಆಘಾತವಾ… ಆಗದಷ್ಟು ಶ್ರೀಮಂತವಾಗಿದೆ.


■ ಸಿ.ಎನ್.ರಾಮಚಂದ…



ಲೇಖಕ ಯೋಗೇಶ್ ಬಂಧನ
ಕೋಮುವಾದಿಗಳ ಜಗಳಕ್ಕೆ ಕಾಂಗ್ರೆಸ್ ಸರ್ಕಾರದ ಬೆಂಬಲ ಖಂಡನೀಯ

ಒಂದು ವೈಚಾರಿಕ ಕೃತಿ ಮಿಶ್ರ ಪ್ರತಿಕ್ರಿಯೆಗಳಿಗೆ ಆಸ್ಪದ ಕೊಡುವುದು ಸಹಜ; ಈ ಕುರಿತು ಆರೋಗ್ಯಪೂರ್ಣ ಚರ್ಚೆ ನಡೆಯುವುದೂ ಅವಶ್ಯಕ. ಓದುಗರಿಗೆ ಕೃತಿಯ ವೈಚಾರಿಕತೆಯನ್ನು ಒಪ್ಪುವ ಅಥವಾ ತಿರಸ್ಕರಿಸುವ ಸಂಪೂರ್ಣ ಸ್ವಾತಂತ್ರ್ಯವಿದೆ. ಆದರೆ, 'ಧಾರ್ಮಿಕ ಕಾರಣ' ಗಳನ್ನು ಮುನ್ನೊಡ್ಡಿ, ಈ ಕೃತಿಯ ವೈಚಾರಿಕತೆ ಯನ್ನು ಕುರಿತು ಆವೇಶಪೂರ್ಣ ವಾದ-ವಿವಾದ ಗಳು ನಡೆಯುತ್ತಿರುವುದು ದುರದೃಷ್ಟಕರ. ಇಷ್ಟಲ್ಲದೆ ಹಿಂದೂ ಮಹಾಸಭಾದವರ ದೂರನ್ನೇ ಆಧರಿಸಿ ಕಾಂಗ್ರೆಸ್ ಸರ್ಕಾರವು ಲೇಖಕ ಯೋಗೇಶರನ್ನು ಬಂಧಿಸಿರುವುದು ಖಂಡನೀಯ.

ಲಂಕೇಶ್ ಪತ್ರಿಕಾ ಬಳಗ



ಮೌಲ್ಯಾಧಾರಿತ ಹಿರಿಯ ಮುತ್ಸದ್ದಿ ಶ್ರೀನಿವಾಸ ಪ್ರಸಾದ್

ಕರ್ನಾಟಕದ ಹಿರಿಯ ರಾಜಕಾರಣಿ ವಿ. ಶ್ರೀನಿವಾಸ ಪ್ರಸಾದ್ ಈಗ 65ನೇ ವರ್ಷಕ್ಕೆ ಕಾಲಿಡುತ್ತಿದ್ದಾರೆ. ಅವರ ಬದುಕು ಹಾಗೂ ಸಾಮಾಜಿಕ ರಾಜಕೀಯ ಚಟುವಟಿಕೆ ಕುರಿತಂತೆ ವಿಚಾರ ಸಂಕಿರಣವೊಂದು ಇದೇ ಆಗಸ್ಟ್ 31ರಂದು ಚಾಮರಾಜನಗರದಲ್ಲಿ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಶ್ರೀನಿವಾಸ ಪ್ರಸಾದ್‌ರ ವ್ಯಕ್ತಿತ್ವ ಬಿಂಬಿಸುವ ಲೇಖನವನ್ನು ಇಲ್ಲಿ ಪ್ರಕಟಿಸಲಾಗಿದೆ.

ಶ್ರೀನಿವಾಸ ಪ್ರಸಾದ್ ಅವರು ಡಾ.ಬಿ.ಆರ್. ...ೇಡ್ಕರ್ ಅವರಿಂದ ಪ್ರಭಾವಿತರಾಗಿ ಅವರನ್ನೇ ...ರ್ಶಯಾಗಿಟ್ಟುಕೊಂಡು ದಲಿತರ, ಶೋಷಿತರ, ಬಡವರ ...ದ್ಧಾರ ಮತ್ತು ಸಮಾನತೆಗಾಗಿ ಶ್ರಮಿಸುತ್ತಿರುವ ಹಿರಿಯ ...ಕೀಯ ಮುತ್ಸದ್ದಿ. ಅಸ್ಪೃಶ್ಯತೆಯ ನೋವು, ಅವಮಾನದ ...ಟಿಗೆ ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ನಿರ್ಲಕ್ಷ್ಯಕ್ಕೆ ...ಗಾಗಿದ್ದ ಪುಟ್ಟಮ್ಮ ಮತ್ತು ಎಂ.ವೆಂಕಟಯ್ಯ ಎಂಬ ... ದಂಪತಿಗಳ ಪುತ್ರರಾಗಿ 1949ರ ಆಗಸ್ಟ್ 6 ... ಮೈಸೂರಿನಲ್ಲಿ ಜನಿಸಿದರು. ಬಿ.ಎಸ್ಸಿ. ಪದವಿ ... ಪ್ರಸಾದ್ ರಾಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ...ದರು.

...ದಲಿತರಿಗೆ ಬೆನ್ನೆಲುಬಾಗಿ ನಿಲ್ಲುವ ಗಾಡ್‌ಫಾದರ್ಸ್ ...ವ ಆ ಹೊತ್ತಿನಲ್ಲಿ ಮೈಸೂರು ಪ್ರಾಂತ್ಯದಲ್ಲಿ ತಮ್ಮ ... ಪ್ರತಿಭೆ ಮತ್ತು ಸಂಘಟನಾ ಶಕ್ತಿಯಿಂದ, ...ಮೆಯನ್ನು ಕಿತ್ತೊಗೆದು ದಲಿತ ಲೋಕಕ್ಕೆ ಯುವ ...ಂಡರಾಗಿ, ಹೋರಾಟಗಾರರಾಗಿ ಪರಿಚಯಗೊಂಡರು. ...4 ರ ಬೂಸಾ ಚಳವಳಿಯ ನೇತೃತ್ವವನ್ನು ...ಕೊಂಡು ಹೋರಾಟ ಮಾಡಿದರು.

ರಾಜಕೀಯಕ್ಕೆ ಪಾದಾರ್ಪಣೆ

...ನಂತರ ರಾಜಕೀಯ ಕ್ಷೇತ್ರದತ್ತ ಮುಖಮಾಡಿ ...4ರಲ್ಲಿ ಮೈಸೂರಿನ ಕೃಷ್ಣರಾಜ ವಿಧಾನಸಭಾ ಕ್ಷೇತ್ರದಿಂದ ...ತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಅಲ್ಪಮತಗಳ ...ರದಿಂದ ಪರಾಭವಗೊಂಡರು. ಆದರೆ ಅಂದು ...ಖವಾಗಿದ್ದ ಡಿ.ದೇವರಾಜ ಅರಸ್ ಅವರ ಸ್ವಂತ ...ಮಲ್ಲಿಯೇ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಿದರು. ...ಂದಾಗಿ ಸಂಸ್ಥಾ ಕಾಂಗ್ರೆಸ್‌ಗೆ ಜಯ ದೊರಕಿತು. ...ದ್ ಅವರ ಶಕ್ತಿಯನ್ನು ಮನಗಂಡ ಸಂಸ್ಥಾ ಕಾಂಗ್ರೆಸ್‌ನ ...ನ ಮುಖಂಡರುಗಳಾದ ವೀರೇಂದ್ರ ಪಾಟೀಲ್, ...ಕೃಷ್ಣ ಹೆಗಡೆ ಮತ್ತು ಗುರುಪಾದಸ್ವಾಮಿಯವರು ...ದ್‌ರವರನ್ನು ಒತ್ತಾಯಿಸಿ ಸಂಸ್ಥಾ ಕಾಂಗ್ರೆಸ್‌ಗೆ ...ಕೊಂಡರು.

...ನಂತರ ಇವರೆಲ್ಲರೂ 1977ರಲ್ಲಿ ಜನತಾ ಪಕ್ಷವನ್ನು ... ಮಾಡಿಕೊಂಡು ಅದರಲ್ಲಿಯೇ ಸಂಸ್ಥಾ ಕಾಂಗ್ರೆಸ್‌ನ್ನು ...ನ ಮಾಡಿಕೊಂಡರು. ಆಗ ಪ್ರಸಾದ್ ಚಾಮರಾಜನಗರ ...ಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ ಸೋತರು. 1979ರಲ್ಲಿ ... ಮುಖಂಡರುಗಳ ಕಚ್ಚಾಟದಿಂದ ಜನತಾಪಕ್ಷ ...ದು ಹೋಯಿತು. ಆ ಸಂದರ್ಭದಲ್ಲಿ ...ಗುಂಡೂರಾಯರು ಇಂದಿರಾ ಕಾಂಗ್ರೆಸ್‌ಗೆ ಸೇರಲು ...ದ್ ಅವರನ್ನು ಒತ್ತಾಯ ಮಾಡಿದರು. ಇದರಿಂದಾಗಿ ...ಸ್ ಸೇರಿದ ಪ್ರಸಾದ್ ಅವರು 1980ರಲ್ಲಿ ಇಂದಿರಾ ...ಸ್ ಅಭ್ಯರ್ಥಿಯಾಗಿ ಚಾಮರಾಜನಗರ ಲೋಕಸಭಾ ...ತ್ರದಿಂದ ಸ್ಪರ್ಧಿಸಿ ಅತ್ಯಧಿಕ ಮತಗಳಿಂದ ...ಚಾಯಿತರಾದರು. ನಂತರ ಪ್ರಸಾದ್ ಅವರ ...ನಡೆದ ಪ್ರತಿಕ್ರಿಯೆಗಳು ದಲಿತ ರಾಜಕಾರಣದ ವಿಶಿಷ್ಟ ...ಗಳಾಗಿ ಪರಿವರ್ತನೆಗೊಂಡವು. ನಂತರ ಸತತವಾಗಿ ...4, 1989 ಮತ್ತು 1991ರಲ್ಲೂ ಸಂಸತ್ತಿಗೆ ಇಂದಿರಾ ...ಸ್‌ನಿಂದಲೇ ಆಯ್ಕೆಯಾದರು.

ಜನಹಿತಕ್ಕಾಗಿ ರಾಜಕೀಯ

...1993 ಮಾರ್ಚ್ 25 ರಂದು ನಂಜನಗೂಡು ...ಕು ಬದನವಾಳುವಿನಲ್ಲಿ ನಡೆದ ದಲಿತರ ಮಾರಣಹೋಮ ಮಾನವೀಯ ಅಂತಃಕರಣದ ಪ್ರಸಾದ್ ಅವರಿಗೆ ಆಘಾತಕಾರಿಯಾಗಿ ಕಂಡಿತು. ದೌರ್ಜನ್ಯಕ್ಕೊಳಗಾದ ದಲಿತರಿಗೆ ನ್ಯಾಯದೊರಕಿಸಿಕೊಡಲು ತಮ್ಮ ಅಧಿಕಾರವನ್ನು ತ್ಯಾಗಮಾಡಲು ಸಿದ್ಧರಾದರು. ಅಂಬೇಡ್ಕರ್‌ವಾದಿಯಾದ ಪ್ರಸಾದ್ ಅವರು ಸ್ವಾರ್ಥಕ್ಕಿಂತ ದಲಿತ ಜನಾಂಗಕ್ಕಾದ ಅನ್ಯಾಯವನ್ನು ಪ್ರತಿಭಟಿಸಿದ್ದರಿಂದ ಅವರಿಗೆ ಮುಂದಿನ 1996 ಚುನಾವಣೆಯಲ್ಲಿ ಟಿಕೆಟ್ ತಪ್ಪಿತು. ಪ್ರಸಾದ್ ಅವರು ವಿಚಲಿತರಾಗದೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ 1,70,000 ಕ್ಕೂ ಹೆಚ್ಚು ಮತಗಳನ್ನು ಪಡೆದು ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಿದರು.

ಜನಾಂಗೀಯ ಸಾಮರಸ್ಯಕ್ಕೆ ಒತ್ತು

1998ರಲ್ಲಿ ಮತ್ತೆ ಕಾಂಗ್ರೆಸ್‌ನಿಂದ ಸ್ಪರ್ಧಿಸಿದರಾದರೂ ಆಗ ಪಕ್ಷದಲ್ಲಿದ್ದ ಗುಂಪುಗಾರಿಕೆಯಿಂದ ಸೋತರು. ಆದರೆ 1999ರಲ್ಲಿ ಸಂಯುಕ್ತ ಜನತಾದಳದಿಂದ ಸ್ಪರ್ಧಿಸಿ ಕೇಂದ್ರದಲ್ಲಿ ಸಚಿವರಾದರು. ನೇರ ನಡೆನುಡಿಯ ಪ್ರಸಾದ್ ಅವರು ಸಂವಿಧಾನ ಪರಾಮರ್ಶೆ ವಿರುದ್ಧ ದೇಶಾದ್ಯಂತ ದಲಿತರು ಚಳವಳಿ ನಡೆಸುತ್ತಿದ್ದರೂ ಪರಾಮರ್ಶೆ ಆಗಬೇಕು ಎಂದು ಹೇಳಿ ಸಮರ್ಥವಾದ ಕಾರಣಗಳನ್ನು ಕೊಡುತ್ತಿದ್ದರು. ಹಾಗೆಯೇ ದಕ್ಷಿಣ ಆಫ್ರಿಕಾದ ಡರ್ಬನ್ ವಿಶ್ವಸಮ್ಮೇಳನದಲ್ಲಿ ಜನಾಂಗೀಯವಾದದ ಜೊತೆಗೆ ಜಾತಿಸ್ವರೂಪದ ಸಾಮಾಜಿಕ ತಾರತಮ್ಯವನ್ನೂ ಸೇರಿಸಬೇಕೆಂದು ತಮ್ಮ ಪ್ರಧಾನಿಗೇ ಪತ್ರ ಬರೆದು ಒತ್ತಾಯಿಸಿದ್ದರು. ಸಂಸದರಾಗಿ, ಕೇಂದ್ರ ಸಚಿವರಾಗಿ ಅಸ್ಪೃಶ್ಯತೆ, ಭ್ರಷ್ಟಾಚಾರ, ಅನಾರೋಗ್ಯ, ಅನಕ್ಷರತೆ, ದಾರಿದ್ರ್ಯ ದೌರ್ಜನ್ಯ ಅಸಮಾನತೆಗಳ ವಿರುದ್ಧ ಹೋರಾಟ ಮಾಡಿದ ಅವರು ಮಾನವೀಯ ಅಂತಃಕರಣವನ್ನು ಹೊಂದಿದವರಾಗಿದ್ದಾರೆ.

2004ರಲ್ಲಿ ನಡೆದ ಚುನಾವಣೆಯಲ್ಲಿ ಜೆ.ಡಿ.ಎಸ್. ಪಕ್ಷದಿಂದ ತಮ್ಮ ಬೆಂಬಲಿಗರಿಗೆ ಟಿಕೆಟ್ ಕೊಡಿಸಿ ಜಯತಂದುಕೊಡುವುದರ ಮೂಲಕ ಕಿಂಗ್‌ಮೇಕರ್ ಆದರು. ಆ ಸಂದರ್ಭದಲ್ಲಿ ಪ್ರಸಾದ್ ಅವರಿಗೆ ಉತ್ತಮ ಅಧಿಕಾರಗಳನ್ನು ನೀಡಲು ಜೆ.ಡಿ.ಎಸ್. ವರಿಷ್ಠರು ಸಿದ್ಧರಿದ್ದರೂ ಪ್ರಸಾದ್ ಒಪ್ಪಲಿಲ್ಲ, ಅಧಿಕಾರ ಇಲ್ಲದಿದ್ದರೂ ತಮ್ಮ ಬಳಿ ಸಹಾಯಕ್ಕಾಗಿ ಬರುವ ಜನರ ಕಷ್ಟಸುಖಗಳಿಗೆ ಸ್ಪಂದಿಸಲು ತಮ್ಮ ಗೃಹಕಚೇರಿಯಲ್ಲಿ ಎಂದಿನಂತೆ ಕಾರ್ಯನಿರ್ವಹಿಸಿದರು.

ಸೂಕ್ಷ್ಮಸಂವೇದನೆಯ ರಾಜಕಾರಣಿ

ಸರ್ವಜನಾಂಗದವರನ್ನೂ ಸಮಾನ ಮನೋಭಾವದಿಂದ ಕಾಣುತ್ತಾ ದಲಿತರಿಗೆ ಅನ್ಯಾಯವಾದಾಗ ಸಿಡಿದೇಳುವ, ಯಾವ ಮುಲಾಜಿಗೂ ರಾಜಿಯಾಗದ ಯಶಸ್ವಿ ನಾಯಕರಾಗಿದ್ದಾರೆ. ಪ್ರಸಾದ್ ಅವರು ಎಂದೂ ಸೇಡಿನ ರಾಜಕಾರಣ ಮಾಡಿದವರಲ್ಲ ಮತ್ತು ಯಾರ ಮನಸ್ಸನ್ನೂ ನೋಯಿಸಿದವರಲ್ಲ. ಇವರು ಮೂಢನಂಬಿಕೆ ಮತ್ತು ಸಂಪ್ರದಾಯಗಳನ್ನು ವಿರೋಧಿಸುತ್ತಾ ಬುದ್ಧ ದಮ್ಮದ ತತ್ವಚಿಂತನೆಗಳಿಗೆ ಒತ್ತುಕೊಟ್ಟವರು. ಮಾನವೀಯತೆ ಮತ್ತು ವೈಚಾರಿಕ ನೆಲೆಯ ಅವರ ಮಾತು ನಿಷ್ಠೂರತೆಯಿಂದ ಕೂಡಿರುತ್ತದೆ. ಸೂಕ್ಷ್ಮಸಂವೇದನೆಯ ಪ್ರಸಾದ್ ಅವರು ಬುದ್ಧ ದಮ್ಮ ಮತ್ತು ಅಂಬೇಡ್ಕರ್ ಅವರ ತತ್ವ ಚಿಂತನೆಗಳನ್ನು ಅಳವಡಿಸಿಕೊಂಡಿರುವುದರಿಂದ ಇತರ ರಾಜಕಾರಣಿಗಳಿಗಿಂತ ಭಿನ್ನರಾಗಿದ್ದಾರೆ.

ಅತ್ಯುತ್ತಮ ವಾಗ್ಮಿ, ಸಂಸದೀಯ ಪಟು

ಹಿರಿಯ ರಾಜಕೀಯ ಮುತ್ಸದ್ದಿಗಳಾದ ತುಳಸೀದಾಸ್ ದಾಸಪ್ಪ, ಕೆ.ಪುಟ್ಟಸ್ವಾಮಿ, ಬಿ.ರಾಚಯ್ಯ, ಎಂ.ಎಸ್.ಗುರುಪಾದಸ್ವಾಮಿ, ರಾಜಶೇಖರ ಮೂರ್ತಿ ಅವರಂತಹ ದಿಗ್ಗಜರನ್ನು ಕಂಡ ನಾಡಲ್ಲಿ ಐದು ಬಾರಿ ಸಂಸದರಾಗಿ, ಒಂದು ಬಾರಿ ಕೇಂದ್ರ ಸಚಿವರಾಗಿ, ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷರಾಗಿದ್ದವರು ಪ್ರಸಾದ್. ಹಾಲಿ ಕರ್ನಾಟಕ ಸರ್ಕಾರದ ಕಂದಾಯ ಸಚಿವರಾಗಿರುವ ಪ್ರಸಾದ್ ಅವರು ಅತ್ಯುತ್ತಮ ವಾಗ್ಮಿ, ಉತ್ತಮ ಸಂಸದೀಯ ಪಟು. ಪ್ರಸಾದ್ ಅವರು 'ಕಚ್ಚಿ-ಕೈ-ಬಾಯಿಗಳು ಇಚ್ಛೆಯಲಿ ಇದ್ದಿಹರೆ ಅಚ್ಯುತನಪ್ಪ ಅಜನಪ್ಪ ಲೋಕದಲ್ಲಿ ನಿಶ್ಚಿಂತನಪ್ಪ' ಎಂಬಂತೆ ಭ್ರಷ್ಟಾಚಾರದ ಕೂಪಕ್ಕೆ ಸಿಲುಕದೆ ಇಂದಿಗೂ ತಮ್ಮ ಮೇರು ವರ್ಚಸ್ಸನ್ನು ಉಳಿಸಿಕೊಂಡು ಬಂದಿದ್ದಾರೆ. ಸ್ವಾಭಿಮಾನಕ್ಕೆ ಧಕ್ಕೆ ಬರುವ ಯಾವುದೇ ಸಂದರ್ಭದಲ್ಲೂ ಯಾರಿಗೂ ತಲೆಬಾಗದ, ಸ್ವಾಭಿಮಾನವನ್ನು ಬಿಟ್ಟುಕೊಡದ ವಿಶಿಷ್ಟ ವ್ಯಕ್ತಿತ್ವವನ್ನು ಹೊಂದಿದ್ದಾರೆ.


ರಾಷ್ಟ್ರ ರಾಜಕಾರಣದಿಂದ ರಾಜ್ಯ ರಾಜಕಾರಣದತ್ತ ಒಲವು ತೋರಿದ ಪ್ರಸಾದ್ ಅವರು ನಂಜನಗೂಡು ವಿಧಾನಸಭಾ ಕ್ಷೇತ್ರ ಪ್ರಪ್ರಥಮ ಬಾರಿಗೆ ಮೀಸಲು ಕ್ಷೇತ್ರವಾದರೂ ವಿಚಲಿತರಾಗದೇ 2008 ರಲ್ಲಿ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಿ ಶಾಸಕರಾದರು. ಅವರ ಮೊದಲ ಆದ್ಯತೆ ಕ್ಷೇತ್ರದಲ್ಲಿ ಜನತೆ ಶಾಂತಿ ಸಹಬಾಳ್ವೆಯಿಂದ ನೆಲೆಸುವುದು. ವಿಧಾನಸಭಾ ಅಧಿವೇಶನದಲ್ಲಿ ಪ್ರಸಾದ್ ವಿಚಾರ ಮಂಡಿಸುವಂತಹ ಸಂದರ್ಭದಲ್ಲಿ ಇಡೀ ಸದನವೇ ಗಂಭೀರವಾಗಿ ಗಮನಿಸುತ್ತಿರುತ್ತದೆ. ಗೋಹತ್ಯಾ ಕಾಯಿದೆ, ಲೋಕಾಯುಕ್ತರ ರಾಜೀನಾಮೆ ಮತ್ತು ನೇಮಕ, ಅಕ್ರಮ ಗಣಿಗಾರಿಕೆ, ಸಿಬಿಐ ಬಗ್ಗೆ ಬಿ.ಜೆ.ಪಿ ಅನುಮಾನ ವ್ಯಕ್ತಪಡಿಸಿದ ಬಗ್ಗೆ, ಮಡೆಸ್ನಾನ ನಿಷೇಧದ ಬಗ್ಗೆ ಸದನದಲ್ಲಿ ಸೈದ್ಧಾಂತಿಕ ನೆಲೆಯಲ್ಲಿ ವಿಶ್ಲೇಷಣೆ ಮಾಡಿದ ರೀತಿ ಆಡಳಿತ ಪಕ್ಷವನ್ನು ನಾಚಿಸುವಂತಿತ್ತು. ಅವರು ಮಂಡಿಸುವ ವಿಚಾರಗಳು ವೈಯಕ್ತಿಕ ಸೇಡಿನಿಂದ ಕೂಡಿರದೆ ಇಡೀ ನಾಡಿನ ವೈಚಾರಿಕತೆಯ ವಾಸ್ತವಿಕತೆಗೆ ಸಂಬಂಧಿಸಿದವುಗಳಾಗಿರುತ್ತವೆ. ಸದನದ ಹೊರಗೂ ಸಹ ಶೈಕ್ಷಣಿಕ, ಆರ್ಥಿಕ, ರಾಜಕೀಯ, ಧಾರ್ಮಿಕ, ವೈಜ್ಞಾನಿಕ ಕ್ಷೇತ್ರಗಳ ಯಾವುದೇ ಸಭೆ ಸಮಾರಂಭಗಳ ಔಚಿತ್ಯ ಅರಿತು ವಿಚಾರಮಂಡನೆ ಮಾಡುವುದು ಅವರ ಬೌದ್ಧಿಕ ಪಕ್ವತೆಯ ದ್ಯೋತಕವಾಗಿದೆ.

ಪಿಂಚಣಿ ಅದಾಲತ್

ಇಂತಹ ಹಿನ್ನೆಲೆ ಹೊಂದಿರುವ ಪ್ರಸಾದ್ ಅವರು 2013ರ ವಿಧಾನಸಭಾ ಚುನಾವಣೆಯಲ್ಲಿಯೂ ಅತ್ಯಧಿಕ ಮತಗಳಿಂದ ಎರಡನೇ ಬಾರಿ ಶಾಸಕರಾಗಿ ಆಯ್ಕೆಯಾಗಿ, ಕಂದಾಯ ಸಚಿವರೂ ಆಗಿ, ಮೈಸೂರು ಜಿಲ್ಲೆಯ ಉಸ್ತುವಾರಿ ಸಚಿವರಾಗಿಯೂ ಕಾರ್ಯ ನಿರ್ವಹಿಸುತ್ತಿರುವುದು ಸಂತಸ ತರುವ ವಿಚಾರವಾಗಿದೆ. ಕಂದಾಯ ಸಚಿವರಾಗಿ ಅಧಿಕಾರ ವಹಿಸಿಕೊಂಡ ಆರಂಭದಲ್ಲಿಯೇ ಗ್ರಾಮೀಣ ಜನತೆಯ ಜೀವನಕ್ಕೆ ಅವಶ್ಯಕವಾಗಿ ಬೇಕಾಗಿದ್ದಂತಹ 'ಪಿಂಚಣಿ ಅದಾಲತ್' ಎಂಬ ಮಹತ್ವದ ಯೋಜನೆಯನ್ನು ಜಾರಿಗೆ ತಂದದ್ದು ಅವರಲ್ಲಿರುವ ರಾಜಕೀಯ ಪ್ರಜ್ಞೆ ಮತ್ತು ಸಾಮಾಜಿಕ ಕಳಕಳಿಗೆ ಹಿಡಿದ ಕನ್ನಡಿಯಾಗಿದೆ.

ಸಂಯಮ, ಸಹಕಾರ, ಸಮಯಪ್ರಜ್ಞೆ

ಕಂದಾಯ ಸಚಿವರಾದ ನಂತರ ನಂಜನಗೂಡು ಕ್ಷೇತ್ರದ ಜನತೆಗೆ ಕೃತಜ್ಞತೆ ಅರ್ಪಿಸುವ ಸಂದರ್ಭದಲ್ಲಿ ಕ್ಷೇತ್ರದ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಿ, ಮಾದರಿ ಕ್ಷೇತ್ರವನ್ನಾಗಿ ರೂಪಿಸಿ ಜನತೆ ನೆಮ್ಮದಿಯಿಂದ ಬದುಕುವಂತೆ ಮಾಡುವುದಕ್ಕಾಗಿ ತಾವು ಈ ಕ್ಷೇತ್ರದಲ್ಲಿ ಸ್ಪರ್ಧಿಸಬೇಕಾಯಿತು ಎಂದು ಹೇಳಿರುವುದು ಆ ಕ್ಷೇತ್ರದಲ್ಲಿನ ವಾಸ್ತವಿಕತೆಯನ್ನು ಎತ್ತಿತೋರಿಸುತ್ತದೆ. ಹಾಗೆಯೇ ಮೈಸೂರಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಕಚೇರಿ ಉದ್ಘಾಟನೆಯ ಸಂದರ್ಭದಲ್ಲಿ ಎಲ್ಲಾ ಪಕ್ಷದ ಚುನಾಯಿತ ಪ್ರತಿನಿಧಿಗಳನ್ನು ಆಹ್ವಾನಿಸಿ ಮಾತನಾಡಿದ ಅವರು 'ಇದು ಕೇವಲ ಕಾಂಗ್ರೆಸ್ ಪಕ್ಷದ ಕಚೇರಿಯಲ್ಲ, ಇದು ಎಲ್ಲಾ ಜನರಿಗೂ ಸೇರಿರುವ ಸರ್ಕಾರದ ಕಚೇರಿ. ಪಕ್ಷಭೇದ ಮರೆತು ಸರ್ವರೂ ತಮ್ಮ ಕೆಲಸ ಕಾರ್ಯಗಳಿಗೆ ನೇರವಾಗುವಂತಹ ಸಹಾಯವನ್ನು ಪಡೆದುಕೊಳ್ಳಬಹುದು' ಎಂದು ಹೇಳಿದ್ದು ಅವರಲ್ಲಿರುವ ವಿಶಾಲವಾದ ಮನಸ್ಥಿತಿಯನ್ನು ತೋರುತ್ತದೆ. ಜೊತೆಗೆ ಅವರು 'ನನ್ನ ಬೆಂಬಲಿಗರು, ಕಾಂಗ್ರೆಸ್ ಕಾರ್ಯಕರ್ತರು ಸರ್ಕಾರಿ ಕಚೇರಿಗಳನ್ನು ಮತ್ತು ಅಧಿಕಾರಿಗಳನ್ನು ದುರುಪಯೋಗಪಡಿಸಿಕೊಳ್ಳಬಾರದು' ಎಂದು ಎಚ್ಚರಿಕೆ ನೀಡಿದ್ದು ಅವರು ಇತರ ರಾಜಕಾರಣಿಗಳಿಗಿಂತ ಭಿನ್ನ ಎಂಬುದನ್ನು ತೋರಿಸುತ್ತದೆ.



ಅಂಬೇಡ್ಕರ್ ಮತ್ತು ಬೌದ್ಧ ದಮ್ಮದ ಅನುಯಾಯಿಗಳಾದ ಇವರು ಮೈಸೂರಿನಲ್ಲಿ ಐತಿಹಾಸಿಕವಾದ 'ಬುದ್ಧನೆಡೆಗೆ ಮರಳಿ ಮನೆಗೆ' ಕಾರ್ಯಕ್ರಮವನ್ನು ಸಂಘಟಿಸಿ ದಲಿತರಲ್ಲಿ ಜಾಗೃತಿ ಮೂಡಿಸಿದ್ದಾರೆ. ಹಾಗೆಯೇ ತಮ್ಮ ಹುಟ್ಟುಹಬ್ಬ, ವಿವಾಹ ವಾರ್ಷಿಕೋತ್ಸವ ಮುಂತಾದ ಸಮಾರಂಭಗಳನ್ನು ಅಸಹಾಯಕರಿಗೆ ಸಹಾಯಕವಾಗುವ ರೀತಿಯಲ್ಲಿ ಒಡನಾಡಿ ಮತ್ತು ವೃದ್ಧಾಶ್ರಮಗಳಲ್ಲಿ ಸರಳವಾಗಿ ಆಚರಿಸಿಕೊಳ್ಳುತ್ತಿರುವುದು ಅವರಲ್ಲಿರುವ ಮಾನವೀಯ ಗುಣಗಳಿಗೆ ಹಿಡಿದ ಕನ್ನಡಿಯಾಗಿದೆ.

ಇಲ್ಲಿಯವರೆಗೆ ಅವರು ಒಟ್ಟು 12 ಚುನಾವಣೆಗಳನ್ನು ಎದುರಿಸಿದ್ದಾರೆ. ಆದರೆ ಯಾವುದೇ ಚುನಾವಣೆಯಲ್ಲೂ ಡಾ.ಅಂಬೇಡ್ಕರ್ ಹೆಸರನ್ನು, ದಲಿತ ಸಂಘಟನೆಗಳನ್ನು, ವಿದ್ಯಾರ್ಥಿಗಳನ್ನು ದುರ್ಬಳಕೆ ಮಾಡಿಕೊಂಡಿಲ್ಲ, ಇಂದಿಗೂ ಶುದ್ಧಹಸ್ತರಾಗಿ, ಸಚ್ಚಾರಿತ್ರ್ಯರಾಗಿ, ಉತ್ತಮ ಸಂಘಟಕರಾಗಿ ಎಲ್ಲಕ್ಕಿಂತಲೂ ಮಿಗಿಲಾಗಿ ಮಾನವೀಯ ಗುಣಗಳುಳ್ಳ ಸ್ನೇಹಜೀವಿಯಾಗಿದ್ದಾರೆ. ಅಹಂಕಾರವಿಲ್ಲದ ಸಂಯಮದ ಹಾದಿಯಲ್ಲಿ ಯಶಸ್ಸುಕಂಡ ನಾಯಕ ಎನಿಸಿ ಜಾತ್ಯತೀತ ಧೋರಣೆಯಿಂದ ಜನಮನ ಗೆದ್ದವರಾಗಿದ್ದಾರೆ.


ವೈಚಾರಿಕವಾಗಿ, ಮಾನವೀಯ ನೆಲೆಯಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸುವ ಜಿಲ್ಲಾ ಅತ್ಯುತ್ತಮ ಸಂಘ ಪ್ರಶಸ್ತಿ ಪಡೆದ ಚಾಮರಾಜನಗರದ ರಂಗವಾಹಿನಿ (ರಿ.) ಸಂಸ್ಥೆಯು 2008 ರಲ್ಲಿ ಪ್ರಸಾದ್ ಅವರ 60ನೇ ವರ್ಷದ ಹುಟ್ಟುಹಬ್ಬವನ್ನು "ದಲಿತ ರಾಜಕಾರಣದ ಹೆಗ್ಗುರುತು" ವಿಚಾರಸಂಕಿರಣವನ್ನು ಆಯೋಜಿಸುವ ಮೂಲಕ ಆಚರಿಸಿತ್ತು, ಹಾಗೆಯೇ 2012 ರಲ್ಲಿ ಪ್ರಗತಿಪರ ಚಿಂತಕರಾದ ಪ್ರೊ.ಬರಗೂರು ರಾಮಚಂದ್ರಪ್ಪ ಅವರಿಂದ "ಸ್ವಾಭಿಮಾನಿ ಚಕ್ರವರ್ತಿ" ಬಿರುದನ್ನು ಪ್ರಸಾದರಿಗೆ ಪ್ರದಾನ ಮಾಡುವ ಮೂಲಕ ಅವರ 64ನೇ ಜನ್ಮ ದಿನವನ್ನು ಆಚರಿಸಿತ್ತು. ಪ್ರಸ್ತುತ ರಂಗವಾಹಿನಿ ಸಂಸ್ಥೆಯ ಅಧ್ಯಕ್ಷರಾದ ಜಾನಪದ ಗಾಯಕ, ರಂಗಕರ್ಮಿ, ಕಲಾವಿದರೂ ಆದ ಸಿ.ಎಂ. ನರಸಿಂಹಮೂರ್ತಿ ಮತ್ತು ಸಂಚಾಲಕರಾದ ಜಿ.ಬಸವರಾಜು ದೇವೀರಮ್ಮನ ಹಳ್ಳಿ ಅವರು ಪ್ರಸಾದ್ ಅವರ 65ನೇ ಹುಟ್ಟುಹಬ್ಬದ ಅಂಗವಾಗಿ "ದಲಿತ ರಾಜಕಾರಣದ ಬೆಳಕು" ಶೀರ್ಷಿಕೆಯಲ್ಲಿ ಮಾತು-ಮಂಥನ-ಅಭಿನಂದನೆ ಕಾರ್ಯಕ್ರಮವನ್ನು ಆಗಸ್ಟ್ 31ರಂದು ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದಾರೆ. ಕಾರ್ಯಕ್ರಮದಲ್ಲಿ ಚಿತ್ರದುರ್ಗದ ಬೃಹನ್ಮಠದ ಡಾ.ಶಿವಮೂರ್ತಿ ಮುರುಘಾ ಶರಣರು, ಆಂದೋಲನ ದಿನಪತ್ರಿಕೆಯ ಸಂಪಾದಕ ರಾಜಶೇಖರ ಕೋಟಿ, ಸಾಹಿತಿ ಡಾ.ಬಂಜಗೆರೆ ಜಯಪ್ರಕಾಶ್, ಚಾಮರಾಜನಗರದ ಸಂಸದ ಆರ್. ಧ್ರುವನಾರಾಯಣ್, ಚಾಮರಾಜನಗರದ ಶಾಸಕ ಪುಟ್ಟರಂಗ ಶೆಟ್ಟಿ, ಹನೂರು ಶಾಸಕ ಆರ್.ನರೇಂದ್ರ, ಕೊಳ್ಳೇಗಾಲದ ಶಾಸಕ ಎಸ್.ಜಯಣ್ಣ ಅವರು ಭಾಗವಹಿಸಲಿದ್ದಾರೆ.

■ ಡಾ.ಮುಳ್ಳೂರು ನಂಜುಂಡಸ್ವಾಮಿ

ಕೊಳೆತು ನಾರುವ ಕೆಪಿಎಸ್‌ಸಿ ಹುಣ್ಣಿಗೆ ಕನ್ನಡಿ ಬೇಕಂತೆ..!

ವಿಧಾನಸೌಧದ ಆಗುಹೋಗುಗಳ ತರುವಾಯ ಈಗ ರಾಜ್ಯದಲ್ಲಿ ಹೆಚ್ಚು ಚರ್ಚೆಯಾಗುವ ವಿಷಯ ಅಂದರೆ ಉದ್ಯೋಗಸೌಧ ಅಲಿಯಾಸ್ ಕೆ.ಪಿ.ಎಸ್.ಸಿ.ಯ ಕರಾಳ ಕಲಾಪಗಳು! ಕನಿಷ್ಠ ದಿನಕ್ಕೆ ಒಂದಾದರು ಆಯೋಗದ ಫ್ಲ್ಯಾಶ್‌ನ್ಯೂಸ್ ಹೊರಬೀಳುತ್ತಲೇ ಇರುತ್ತದೆ!!

ಅಷ್ಟಾದರೂ ಕೆಪಿಎಸ್‌ಸಿಗಾಗಲಿ, ಅದನ್ನು ನಿಯಂತ್ರಿಸುತ್ತಿರುವ ಸದಸ್ಯ ಮಂಡಳಿಗಾಗಲಿ ಇನ್ನೂ ನಾಚಿಕೆ ಮೈಗಂಟಿದಂತಿಲ್ಲ. 1998, 99, 2004 ಅಷ್ಟೇ ಏಕೆ 2011ರ ಪ್ರೊಬೆಷನರಿ ಆಫೀಸರ್‌ಗಳ ನೇಮಕಾತಿಯಲ್ಲಿ ನಡೆದ ಭಾರೀ ಹಗರಣಗಳು ತನಿಖೆಯಿಂದ ಸಾಬೀತಾಗಿದ್ದರೂ ತಮ್ಮಿಂದೇನೂ ಪ್ರಮಾದವೇ ನಡೆದಿಲ್ಲವೆನ್ನುವಷ್ಟು ಸಲೀಸಾಗಿ ಆಯೋಗದ ಮಂದಿ ವರ್ತಿಸುತ್ತಿದ್ದಾರೆ. ಮೊದಲ ಮೂರು ಅವಧಿಯ ನೇಮಕ ಹಗರಣಗಳಿಗೆ ಸಂಬಂಧಿಸಿದಂತೆ ಖುದ್ದು ಸಿ.ಐ.ಡಿ.ಯೇ ತನಿಖೆ ನಡೆಸಿ 'ಉದ್ಯೋಗ ಸೌಧ'ದ ಅಪರಾ-ತಪರಾಗಳನ್ನೆಲ್ಲ ಒಂದೊಂದಾಗಿ ಬೆತ್ತಲುಗೊಳಿಸಿದೆ. ಅವುಗಳ ರೂವಾರಿ ಡಾ.ಎಚ್.ಎನ್. ಕೃಷ್ಣನಿಗೆ ಶ್ರೀಕೃಷ್ಣನ ಜನ್ಮಸ್ಥಾನದ ದರ್ಶನ ಮಾಡಿ ಜಾಮೀನು ಮೇಲೆ ಹೊರಬಂದಾಗಿದೆ. ಆದರೆ ಭ್ರಷ್ಟಾಚಾರದ ಲಾಭ ಪಡೆದು ಕೆಲಸ ಗಿಟ್ಟಿಸಿಕೊಂಡ ಅಭ್ಯರ್ಥಿಗಳ ಮೇಲಾಗಲಿ, ಈ ಕರಾಳ ಕಲಾಪದಲ್ಲಿ ಭಾಗಿಯಾದ ಇನ್ನಿತರೆ ಅಧಿಕಾರಿ-ಸದಸ್ಯರ ಮೇಲಾಗಲಿ



ಸೂಕ್ತ ಕ್ರಮ ತೆಗೆದುಕೊಳ್ಳುವಲ್ಲಿ ಸರ್ಕಾರಕ್ಕೆ ಇದುವರೆವಿಗೂ ಸಾಧ್ಯವಾಗಿಲ್ಲ.

ಕ್ರಮ ಕೈಗೊಳ್ಳಬೇಕಾದ ಸರ್ಕಾರ ನಮಗೆ ಕೆಪಿಎಸ್ಸಿಯಿಂದ ಇನ್ನೂ ವರದಿ ಬಂದಿಲ್ಲ ಎಂದು ನೆಪ ಹೇಳುತ್ತಿದ್ದರೆ, ಇತ್ತ ಆಯೋಗದವರು ವರದಿ ನೀಡುವಂತೆ ಸರ್ಕಾರ ನಮ್ಮನ್ನೇನು ಕೇಳಿಲ್ಲ, ಹಾಗಾಗಿ ನಾವು ಮಾಹಿತಿ ಕೊಟ್ಟಿಲ್ಲ ಅಂತ ಸಬೂಬು ಸೃಷ್ಟಿಸುತ್ತಿದ್ದಾರೆ. ಸಾರ್ವಜನಿಕರು, ಮಾಧ್ಯಮಗಳ ಮುಂದಿರಲಿ ಸ್ವತಃ ಹೈಕೋರ್ಟ್‌ನ ಮುಂದೆಯೂ ಇಂತಹ ನುಣುಚುವಾದ ಮಂಡಿಸಿದ ಆಯೋಗ ಮೊನ್ನೆ ನ್ಯಾಯಾಧೀಶರಿಂದ ಛೀಮಾರಿ ಹಾಕಿಸಿಕೊಂಡಿದೆ. ಶೀಘ್ರವೇ ಸರ್ಕಾರಕ್ಕೆ ಭ್ರಷ್ಟ ಅಭ್ಯರ್ಥಿಗಳ ವಿವರವನ್ನು ಕಳುಹಿಸಿ ಕ್ರಮಕ್ಕೆ ಮುಂದಾಗಬೇಕೆಂದು ಹೈಕೋರ್ಟ್ ತಾಕೀತು ಮಾಡಿದೆ. ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳಲು ಲೋಕಸೇವಾ ಆಯೋಗ ಅದ್ಯಾವ ಹೊಸ ರಾಗ ಹಾಡಲಿದೆಯೋ ಕಾದು ನೋಡಬೇಕಿದೆ.

ಕೃಷ್ಣಾವತಾರದ ಫಜೀತಿಗಳು

ಡಾ. ಎಚ್.ಎನ್.ಕೃಷ್ಣ ಕೆಪಿಎಸ್‌ಸಿಗೆ ಮಸಿ ಅಂಟಿಸಿದ ಮೊದಲ ಖ್ಯಾತಿ ಈತನಿಗೇ ಸಲ್ಲಬೇಕು. 1996ರಿಂದ 2001ರವರೆಗೆ ಆಯೋಗದ ಸದಸ್ಯನಾಗಿದ್ದ ಈತ 2001ರಲ್ಲಿ ಅಧ್ಯಕ್ಷ ಗಾದಿಗೆ ವಕ್ಕರಿಸಿದ್ದ. 2007ರಲ್ಲಿ ತನ್ನ ಅಧಿಕಾರಾವಧಿ ಮುಗಿಯುವ ವೇಳೆಗಾಗಲಿ ಕೃಷ್ಣ ಸೃಷ್ಟಿಸಿದ ಭಾನಗಡಿಗಳು ಒಂದೆರಡಲ್ಲ. 1998ರಲ್ಲಿ 391 ಮತ್ತು 1999ರಲ್ಲಿ 191 ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿತ್ತಾದರೂ ಅವುಗಳಿಗೆ ಸಂದರ್ಶನ ನಡೆದದ್ದು ಈ ಕೃಷ್ಣನ ಅಧ್ಯಕ್ಷಾವಧಿಯಲ್ಲೆ. ಹಾಗಾಗಿ ನೇಮಕಾತಿಯ ನಿಯಮ, ನಿಯತ್ತುಗಳನ್ನೆಲ್ಲ ಗಾಳಿಗೆ ತೂರಿ ತನಗೆ ಬೇಕಾದವರಿಗೆ, ತನ್ನೊಂದಿಗೆ ವ್ಯವಹಾರ ಕುದುರಿಸಿಕೊಂಡವರಿಗೆ ಕೆಲಸ ಸಿಗುವಂತೆ ಮಾಡಲು ಇನ್ನಿಲ್ಲದ ಕಣ್ಣಾಮುಚ್ಚಾಲೆ ಆಡಿದ್ದ. ಎಂ.ಬಿ.ಬಣಕಾರ್, ಕೆ. ನರಸಿಂಹ, ಪಿ.ಗೋಪಿಕೃಷ್ಣ ಮೊದಲಾದ ಭ್ರಷ್ಟ ಅಧಿಕಾರಿಗಳ ಟೀಮ್ ಕಟ್ಟಿಕೊಂಡಿದ್ದ ಡಾಕ್ಟರ್ ಕೃಷ್ಣ ಉದ್ಯೋಗ ಸೌಧಕ್ಕೆ ಭ್ರಷ್ಟಾಚಾರದ ಬೇಸ್ ಅಡರಿಕೊಳ್ಳುವಂತೆ ಮಾಡಿದ್ದ. ಅಷ್ಟರಿಂದಾಗಿ ನೂರಾರು ಪ್ರತಿಭಾವಂತ ಅಭ್ಯರ್ಥಿಗಳು ಅವಕಾಶ ವಂಚಿತರಾಗಿದ್ದರೆ, ಅಸಮರ್ಥರೆಲ್ಲ ಆಡಳಿತ ಯಂತ್ರದೊಳಕ್ಕೆ ತೂರಿ ಬಂದಿದ್ದರು. ಪ್ರವರ್ಗಗಳ ತಿದ್ದುವಿಕೆ, ಇಂಟರ್‌ವ್ಯೂ ಅಂಕಗಳ ಗೋಲ್‌ಮಾಲ್, ಮರು ಎಣಿಕೆಯ ಮ್ಯಾಜಿಕ್, ಕೋರ್ಟ್‌ಗೆ ತಪ್ಪು ಮಾಹಿತಿ ನೀಡುವುದು,



ಮೆರಿಟ್ ಲಿಸ್ಟ್‌ನಲ್ಲಿ ಹೆಸರು ಇಲ್ಲದಂತವರಿಗೇ ಅಪಾಯಿಂಟ್‌ಮೆಂಟ್ ಆರ್ಡರ್ ಕೊಡುವುದು ಹೀಗೆ ಕೃಷ್ಣ ತನ್ನ ವಿಶ್ವರೂಪ ತೋರಿಸಿದ್ದ.

ಪರಮ ಸ್ತ್ರೀಲೋಲನಾದ ಡಾಕ್ಟರ್ ಕೃಷ್ಣನಿಗೆ ಹಣದ ಹೊರತಾಗಿ ಮತ್ತೊಂದು ಸ್ಟ್ರಾಟಜಿಯೂ ಇತ್ತು, ತನ್ನ ಜಾತಿಯವರೇ ಆದ ಒಕ್ಕಲಿಗ ಸಮುದಾಯದವರನ್ನು ಸಾಧ್ಯವಾದಷ್ಟೂ ಆಡಳಿತ ಯಂತ್ರದೊಳಕ್ಕೆ ತುಂಬುವುದು. ಇದರ ಹಿಂದೆ ರಾಜಕಾರಣ ದೂರದೃಷ್ಟಿತ್ವದ ಕೆಲವರ ಪ್ರಭಾವ ಇದ್ದರೂ ಇರಬಹುದು. ಎಚ್.ಎನ್.ಕೃಷ್ಣನ ಅಧಿಕಾರಾವಧಿಯ ಮೂರು ನೇಮಕಾತಿಗಳ ಅಂಕಿ-ಅಂಶ ನೋಡಿದರೆ ಇದು ಸಾಬೀತಾಗುತ್ತದೆ. ಗೆಜೆಟೆಡ್ ಪ್ರೊಬೆಷನರ್ಸ್ ನೇಮಕಾತಿಗಳಲ್ಲಿ ಸಾಮಾನ್ಯವಾಗಿ ಒಬ್ಬ ಅಭ್ಯರ್ಥಿ ತನ್ನ ಕೆಟಗರಿ ಅಡಿಯಲ್ಲಿ ಮೀಸಲಾತಿ ಬಯಸಿ ಅರ್ಜಿ ಸಲ್ಲಿಸಿದ್ದರೂ ಆತ ಹೆಚ್ಚು ಮೆರಿಟ್ ಗಳಿಸಿದರೆ ಜನರಲ್ ಮೆರಿಟ್‌ನಲ್ಲೇ ಹುದ್ದೆ ಆಯ್ಕೆ ಮಾಡಿಕೊಳ್ಳಲು ಮೊದಲು ಅವಕಾಶ ಕಲ್ಪಿಸಲಾಗುತ್ತದೆ. ಆ ಮೂಲಕ ಅದೇ ಪ್ರವರ್ಗದ ಕಡಿಮೆ ಅಂಕ ತೆಗೆದುಕೊಂಡವರಿಗೂ ಕೆಟಗರಿಯ ಹುದ್ದೆಗಳು ಹಾಗೇ ಉಳಿದುಕೊಳ್ಳುವಂತೆ ನೋಡಿಕೊಳ್ಳುವ ಸಾಮಾಜಿಕ ಸಮಾನತೆಯ ಕಾಳಜಿ ಈ ವ್ಯವಸ್ಥೆಯ ಹಿಂದಿದೆ. ಆದರೆ ಕೃಷ್ಣನ ಪೀರಿಯಡ್‌ನಲ್ಲಿ ನಡೆದ ನೇಮಕಾತಿಗಳಲ್ಲಿ ಹೀಗೆ ಪ್ರವರ್ಗದ ಅಡಿಯಲ್ಲಿದ್ದರೂ ಸಾಮಾನ್ಯ ಕೆಟಗರಿಯ ಹುದ್ದೆ ಗಿಟ್ಟಿಸಿಕೊಂಡವರಲ್ಲಿ 3ಎ (ಒಕ್ಕಲಿಗ ಸಮುದಾಯ ಇದೇ ಕೆಟಗರಿಗೆ ಸೇರುತ್ತದೆ) ಪ್ರವರ್ಗದವರೇ ಹೆಚ್ಚು. ಇದರ ಪ್ರಮಾಣ ಎಷ್ಟಿದೆಯೆಂದರೆ ಸಾಮಾನ್ಯ ವರ್ಗಕ್ಕೆ ಮೀಸಲಾದ ಹುದ್ದೆಗಳಿಗೆ ಸಾಮಾನ್ಯ ಪ್ರವರ್ಗದವರು ಆಯ್ಕೆಯಾದದ್ದಕ್ಕಿಂತಲೂ 3ಎ ಪ್ರವರ್ಗದವರೇ ಹೆಚ್ಚಾಗಿ ಉದ್ಯೋಗ ಗಿಟ್ಟಿಸಿಕೊಂಡಿದ್ದಾರೆ. ಅಂದಹಾಗೆ ಇವರಿಗೆಲ್ಲ ಸಂದರ್ಶನದಲ್ಲಿ 200 ಅಂಕಕ್ಕೆ 150ಕ್ಕಿಂತ ಹೆಚ್ಚಿನ ಅಂಕ ನೀಡಲಾಗಿತ್ತೆನ್ನುವುದನ್ನು ಒತ್ತಿ ಹೇಳುವ ಅಗತ್ಯವಿಲ್ಲ. 1998ರ ಬ್ಯಾಚ್‌ನಲ್ಲಿ ಸಾಮಾನ್ಯ ಪ್ರವರ್ಗಕ್ಕೆ 187 ಹುದ್ದೆಗಳು ಮೀಸಲಾಗಿದ್ದರೂ ಅದರಲ್ಲಿ 74 ಹುದ್ದೆಗಳಿಗೆ ಅಂದರೆ ಮೂರನೇ ಒಂದು ಬಾಗದಷ್ಟು ಹುದ್ದೆಗಳಿಗೆ ಒಕ್ಕಲಿಗ ಅಭ್ಯರ್ಥಿಗಳೇ ಆಯ್ಕೆಯಾಗಿದ್ದಾರೆ. ಇನ್ನು 1999ರ ಬ್ಯಾಚ್‌ನಲ್ಲಿ ಸಾಮಾನ್ಯ ಪ್ರವರ್ಗಕ್ಕೆ 91 ಹುದ್ದೆಗಳು ಮೀಸಲಿದ್ದರೂ 42 ಹುದ್ದೆಗಳು ಡಾ.ಕೃಷ್ಣನ ಕುಲಬಾಂಧವರಿಗೇ ಲಭಿಸಿವೆ. 2004ರಲ್ಲೂ ಇದು ಪುನರಾವರ್ತಿತ. ಆ ಬಾರಿ ಸಾಮಾನ್ಯ ವರ್ಗಕ್ಕೆ ಎತ್ತಿಟ್ಟಿದ್ದ 75 ಹುದ್ದೆಗಳಿಗೆ 55 ಜನ ಒಕ್ಕಲಿಗ ಅಭ್ಯರ್ಥಿಗಳೇ ಆಯ್ಕೆಯಾಗಿದ್ದರು. ಅಂದರೆ 2/3ರಷ್ಟು ಹುದ್ದೆಗಳು ಬಿಕರಿಯಾಗಿದ್ದವು.

Recruitment to Group `A` and Group `B` Posts (Gazetted Probationers) - 1998, 1999 and 2004 into Karnataka State Civil Services

Investigation Ordered by the
Hon'ble High Court of Karnataka

Vidhana Soudha Police Station Cr.No.46/2011
U/s. 417, 418, 465, 466, 468, 471, 506 & 120(B) IPC
of Bangalore City
(Vide Writ Petition No. 11550/2008 and No. 9098/2009
Dated: 16-12-2010 and
Review Petition No. 39/2011 Dated: 03-03-2011)

ಸಿಐಡಿ ಸಲ್ಲಿಸಿದ ತನಿಖಾ ವರದಿಯ ಪ್ರತಿ

Investigation conducted by
Criminal Investigation Department (CID)
Bangalore

ಜಾತಿಪತ್ರಗಳೇ ಬೋಗಸ್


ಶಾಂತಲಾ (ನೋಂದಣಿ ಸಂಖ್ಯೆ 307449) ಎಂಬಾಕೆ ತನ್ನ ಎಸ್ಸಿ ಕೋಟಾದಡಿ ಅರ್ಜಿ ಸಲ್ಲಿಸಿದ್ದಳು. ಮುಖ್ಯ ಪರೀಕ್ಷೆ ಬರೆಯುವಾಗಲೂ ಆಕೆಯ ಎಲ್ಲಾ ದಾಖಲೆಗಳು ಎಸ್ಸಿ ಕೋಟಾದಲ್ಲೇ ಇದ್ದವು. ಆದರೆ ಸಂದರ್ಶನದ ವೇಳೆಗಾಗಲೇ ಆಕೆಯನ್ನು ದಿಢೀರ್ ಅಂತ 3ಎ ಕೆಟಗರಿಗೆ ಎಸೆದು ಉದ್ಯೋಗ ತಪ್ಪಿಸಲಾಗಿತ್ತು.

ದುಡ್ಡಿನ ಡೀಲ್ ಕುದುರಿಸಿಕೊಳ್ಳದವರಿಗೆ ಕೆಪಿಎಸ್‌ಸಿ ಆವರಣದಲ್ಲಿ ಎಂತೆಂಥ ಗ್ರಹಚಾರ ಕಾದಿರುತ್ತದೆ ಎನ್ನುವುದಕ್ಕೆ ಇಲ್ಲಿ ಮತ್ತೊಂದೆರಡು ಸ್ಯಾಂಪಲ್‌ಗಳಿವೆ. ಮೀರಾ ರಾಚಪ್ಪ ಆಲೂರ್ ಎಂಬ ಅಭ್ಯರ್ಥಿ 1998ರ ಬ್ಯಾಚ್‌ನಲ್ಲಿ ಅರ್ಜಿ ಸಲ್ಲಿಸಿ 3ಬಿ ಕೆಟಗರಿಯಡಿ ತಹಶೀಲ್ದಾರ್ ಹುದ್ದೆಗೆ ಆಯ್ಕೆಯಾಗಿದ್ದರು. ಆದರೆ ನೇಮಕಾತಿಯಲ್ಲಿ ಅವ್ಯವಹಾರ ನಡೆದಿರುವ ದೂರುಗಳು ಕೇಳಿಬಂದಾಗ ಹೈಕೋರ್ಟ್ ಹೊಸದಾಗಿ ಮೌಲ್ಯಮಾಪನ ಮಾಡಿ ಸಂದರ್ಶನ ನಡೆಸುವಂತೆ ಆದೇಶಿಸಿತ್ತು. ಎರಡನೇ ಬಾರಿ ಸಂದರ್ಶನಕ್ಕೆ ಹಾಜರಾದಾಗ ಆಕೆ ಜಾತಿ ಪ್ರಮಾಣಪತ್ರವನ್ನು ಹಾಜರುಪಡಿಸಲಿಲ್ಲ ಅಂತ ಪ್ರವರ್ಗದ ಬದಲಿಗೆ ಸಾಮಾನ್ಯ ಮೀಸಲಾತಿಗೆ ತಳ್ಳಲಾಗಿತ್ತು. ಹಾಗಾಗಿ ಆಕೆ ವಿಧಿಯಿಲ್ಲದೆ ಕಮರ್ಷಿಯಲ್ ಟ್ಯಾಕ್ಸ್ ಇಲಾಖೆಯ ಅಸಿಸ್ಟೆಂಟ್ ಕಮೀಷನರ್ ಹುದ್ದೆ ಆಯ್ದುಕೊಳ್ಳಬೇಕಾಗಿ ಬಂದಿತ್ತು. ಮೊದಲನೇ ಬಾರಿ ಆಯ್ಕೆ ನಡೆದಾಗಲೆ ಆಕೆ ಜಾತಿಪತ್ರ ಸಲ್ಲಿಸಿ ಅದನ್ನು ಆಯೋಗ ಅನುಮೋದಿಸಿದ್ದರೂ ಮತ್ತು ಆ ಕಾರಣಕ್ಕಲ್ಲದೆ ಬೇರೆ ಕಾರಣಕ್ಕೆ ಮರು ಸಂದರ್ಶನ ನಡೆದಿದ್ದರೂ ಆಕೆಯನ್ನು ಬಲಿಪಶು ಮಾಡಲಾಗಿದೆ ಎಂತಲೇ ಸಿಐಡಿ ವರದಿ ಸಲ್ಲಿಸಿದೆ. ನಟೇಶ್ (ನೋಂ.ಸಂ. 100531) ಎಂಬುವವರಿಗೂ ಇದೇರೀತಿ ಮಾಡಲಾಗಿದೆ. 3ಬಿ ಕೆಟಗರಿಗೆ ಸೇರುವ ಆತ ಸಂದರ್ಶನಕ್ಕೆಂದು ಹಾಜರಾಗುವಾಗ ಮೂಲ ದಾಖಲಾತಿಗಳೆಲ್ಲ ಕಳುವಾಗಿದ್ದವು. ಈ ಕುರಿತು ಪೊಲೀಸ್ ಕಂಪ್ಲೇಂಟನ್ನೂ ಕೊಟ್ಟಿದ್ದ ಆತ ಆಯೋಗಕ್ಕೆ Acknowledgement ಅನ್ನೂ ಒದಗಿಸಿ ಮತ್ತೊಂದು ಪ್ರತಿ ಒದಗಿಸಲು ಸಮಯಾವಕಾಶ ಕೋರಿದ್ದ. ಅದಕ್ಕೆ ಅವಕಾಶವಿದ್ದರೂ ಆತನ ಮನವಿ ತಿರಸ್ಕರಿಸಿದ್ದ ಆಯೋಗ ಜನರಲ್ ಮೆರಿಟ್‌ಗೆ ತಳ್ಳಲಾಗಿತ್ತು. ಕೃಷ್ಣನ ಕರಾಮತ್ತು ಎಂತದ್ದೆಂದರೆ, ಇತರೆ ಅಭ್ಯರ್ಥಿಗಳ ವಿಷಯದಲ್ಲಿ ಇಷ್ಟೆಲ್ಲಾ ಕರಾರುವಾಕ್ಕಾಗಿ ನಡೆದುಕೊಂಡ ಆಯೋಗ 3ಎ ಕೆಟಗರಿಗೆ ಸೇರುವ ಬಿ.ಆರ್.ರೂಪಾ (ನೋ.ಸಂ.413677) ಸಂದರ್ಶನದ ವೇಳೆ ಜಾತಿ ಪ್ರಮಾಣಪತ್ರ ಸಲ್ಲಿಸಲು ವಿಫಲವಾಗಿದ್ದರೂ ಅದೇ ಪ್ರವರ್ಗದಡಿ ಆಕೆ ತಹಸೀಲ್ದಾರ್ ಹುದ್ದೆ ಆಯ್ಕೆ ಮಾಡಿಕೊಳ್ಳಲು ಅನುವು ಮಾಡಿಕೊಟ್ಟಿತ್ತು.

ಒತ್ತಾಯದಲ್ಲಿ ಸಹಿ ಹಾಕಿಸಿಕೊಂಡಿದ್ದರು

ಅಲ್ಲಾಭಕ್ಷ್ (ನೋಂ.ಸಂ. 111904) ಎಂಬ ಮತ್ತೊಬ್ಬ ಅಭ್ಯರ್ಥಿಯ ಜೊತೆ ಆಯೋಗದ ಅಯೋಗ್ಯ ಟೀಮು ನಡೆದುಕೊಂಡ ರೀತಿ ಮಾತ್ರ ಮೇಲಿನ ಎಲ್ಲಾ ಪ್ರಮಾದಗಳಿಗಿಂತ ಹೇಯವಾಗಿದೆ. 26.12.2005ರಂದು ಸಂದರ್ಶನಕ್ಕೆಂದು ಅಲ್ಲಾಭಕ್ಷ್ ಉದ್ಯೋಗಸೌಧದ ಆವರಣ ಪ್ರವೇಶಿಸಿದಾಗ ಒಂದಷ್ಟು ಅಪರಿಚಿತರು ಆತನ[...] ಸುತ್ತುವರಿದು 'ನಿನಗೆ ಈಗಾಗಲೇ ಗ್ರೇಡ್-1 ಕೆಲಸವಿ[...] ಮತ್ತ್ಯಾಕೆ ಸಂದರ್ಶನಕ್ಕೆ ಬರುತ್ತಿದ್ದೀಯಾ? ಸುಮ್ಮನೇ ವಾಪಾ[...] ಹೋಗು' ಎಂದು ಬೆದರಿಕೆ ಹಾಕಿದ್ದರು. ಆದರೂ ಅ[...] ಡಾಕ್ಟರ್ ಕೃಷ್ಣನ ಮುಂದೆ ಸಂದರ್ಶನಕ್ಕೆಂದು ಆಸೀನನಾ[...] ಆಗ ಸ್ವತಃ ಡೀಲ್‌ಗಿಳಿದ ಕೃಷ್ಣ 'ನೀನು ಈಗಾಗಲೇ ಕ್ಲಾಸ್-[...] ಕೆಲಸದಲ್ಲಿದ್ದೀಯ. ನಿನಗೆ ಮತ್ತೊಮ್ಮೆ ಕೆಲಸ ಕೊಡಲ[...] ಬರೋದಿಲ್ಲ' ಎಂದವನೆ ಅಟೆಂಡೆನ್ಸ್ ಶೀಟ್ ಮುಂದಿಟ[...] ಇದಕ್ಕೆ ಸಹಿ ಮಾಡಿ ಹೋಗು ಅಂದಿದ್ದ. ಅದಕ್ಕೆ ಅಲ್ಲಾಭ[...] ಒಪ್ಪದಿದ್ದಾಗ ಬೆದರಿಸಿ ಆತನಿಂದ ಖಾಲಿಯಿದ್ದ ಅಟೆಂಡೆ[...] ಶೀಟ್‌ಗೆ ಸಹಿ ಮಾಡಿಸಿಕೊಳ್ಳಲಾಗಿತ್ತು.

ಒಂದು ಉದ್ಯೋಗದಲ್ಲಿದ್ದವರು ಮತ್ತೊಂದ[...] ಉದ್ಯೋಗಕ್ಕೆ ಅರ್ಜಿ ಸಲ್ಲಿಸಬಾರದೆನ್ನುವ ಯಾ[...] ನಿಯಮವೂ ಇಲ್ಲ. ಈ ಕಾರಣಕ್ಕೆ ಅಲ್ಲಾಭಕ್ಷ್‌ನಿಗೆ ಉದ್ಯೋ[...] ನಿರಾಕರಿಸಲಾಗಿದೆ ಎಂದು ಅಧಿಕೃತವಾಗಿ ಸಾರುವಂತಿರಲಿ[...] ಇದು ಕೆಪಿಎಸ್ಸಿ ಕೃಷ್ಣನಿಗೂ ಗೊತ್ತಿತ್ತು. ಹಾಗಾಗಿಯೇ ಖಾ[...] ಶೀಟ್ ಮೇಲೆ ಆತನ ಸಹಿ ಮಾಡಿಸಿಕೊಳ್ಳಲಾಗಿತ್ತು. ಆನಂ[...] ತಿಳಿದುಬಂದ ಪ್ರಕಾರ ಅಲ್ಲಾಭಕ್ಷ್ ಸಹಿ ಮಾಡಿದ್ದ ಖಾ[...] ಶೀಟ್‌ನಲ್ಲಿ 'ನಾನು ಎಸ್.ಎಸ್.ಎಲ್.ಸಿ ಮೂಲ ಅಂಕಪ[...] ಮತ್ತು 2ಬಿ ಜಾತಿ ಪ್ರಮಾಣಪತ್ರ ಹಾಜರುಪಡಿಸ[...]



ಸಾಧ್ಯವಾಗಿಲ್ಲ' ಎಂದು ಬರೆದುಕೊಂಡಿದ್ದರು. ಕೆ[...] ಅಲ್ಲಾಭಕ್ಷ್‌ನ ಸಹಿ ಇದ್ದುದರಿಂದ ಅದನ್ನು ಆತ[...] ಬರೆದುಕೊಟ್ಟಿದ್ದ, ಹಾಗಾಗಿ ಹುದ್ದೆ ನಿರಾಕರಿಸಲಾಗಿ[...] ಎಂಬುದು ಕೃಷ್ಣ ಮತ್ತವನ ಟೀಮಿನ ವಾದ. ಆಮೇ[...] ಆ ಹುದ್ದೆಯನ್ನು ಭಾರೀ ಬೆಲೆಗೆ ಮಾರಿಕೊಂಡಿದ್ದರೆಂಬುದ[...] ಬಿಡಿಸಿ ಹೇಳಯುವ ಅಗತ್ಯವಿಲ್ಲ ಅಲ್ಲವೆ?

ಇನ್ನು ಕೋರ್ಟ್‌ಗೆ ಮಾಹಿತಿ ನೀಡುವಾಗಲ[...] ಆಯೋಗ ಡಬಲ್ ಗೇಮ್ ಆಡಿತ್ತು. 'ರ್‍ಯಾಂಡ[...] ಪಿಕ್-ಅಪ್' ಆಧಾರದಲ್ಲಿ ಸ್ಕೇಲಿಂಗ್ ಮಾದರಿಯ ಮ[...] ಎಣಿಕೆ ಮಾಡುವಂತೆ ಕೋರ್ಟ್ ನಿರ್ದೇಶನ ನೀಡ[...] ನಂತರ ಮೊದಲಿದ್ದ ಅಂಕಗಳಿಗೂ, ಮರು ಎಣಿಕೆ[...] ಅಂಕಗಳಿಗೂ ಸರಾಸರಿ 20 ಅಥವಾ ಅದಕ್ಕಿಂತ ಹೆ[...] ವ್ಯತ್ಯಾಸ ಎಷ್ಟು ಜನರಿಗೆ ಬಂದಿದೆ ಎಂದು ಕೋರ್ಟ[...] ಪ್ರಶ್ನಿಸಿದಾಗ ಕೇವಲ 661 ಅಭ್ಯರ್ಥಿಗಳ ಉತ್ತರ ಪತ್ರಿಕೆಗ[...] ಇಂತಹ ವ್ಯತ್ಯಾಸಕ್ಕೆ ತುತ್ತಾಗಿವೆ ಎಂದು ಆಯೋ[...] ಉತ್ತರಿಸಿತ್ತು. ಆದರೆ ಎಷ್ಟು ಪತ್ರಿಕೆಗಳನ್ನು ರ್‍ಯಾಂಡ[...] ಸ್ಯಾಂಪಲ್ ಅಡಿಯಲ್ಲಿ ಮರುಮೌಲ್ಯ ಮಾಪನ[...] ಒಳಪಡಿಸಲಾಗಿತ್ತು ಎಂಬುದನ್ನೇ ಆಯೋಗ ಹೇಳಿರಲಿ[...] ಸುಮಾರು 12,000 ಅಭ್ಯರ್ಥಿಗಳು ಮುಖ್ಯ ಪರಿ[...] ಬರೆದಿದ್ದರಿಂದ ಅವುಗಳ ಮುಂದೆ 661 ಭಾ[...] ವ್ಯತ್ಯಯವೇನಲ್ಲ ಎಂಬಂತೆಯೇ ಕಾಣಿಸುತ್ತೆ. ಅಸಲಿಗೆ ಮ[...] ಮೌಲ್ಯಮಾಪನ ಮಾಡಿದ್ದು ಒಂದು ಇಲ್ಲವೇ ಒಂದೂ[...] ಸಾವಿರ ಪತ್ರಿಕೆಗಳನ್ನು ಮಾತ್ರ! ಕೋರ್ಟ್ ನಿಯಮ ಪಾಲಿ[...] ಕಾರಣಕ್ಕೆ ಆಯೋಗದ ಅಂದಿನ ಸೆಕ್ರಟರಿ ಎ.ಕೆ. ಮೋನ[...] ಮೇಲೂ ಕೇಸು ದಾಖಲಾಗಿದೆ.

ಇವು ಕೆಲ ಸ್ಯಾಂಪಲ್‌ಗಳು ಮಾತ್ರ. ಉನ್ನತ ಹುದ್ದೆ[...] ನೇಮಕಾತಿಯನ್ನು ಉದ್ದಿಮೆ ಮಾಡಿಕೊಂಡ ಆಯೋ[...] ಭ್ರಷ್ಟರ ಅಯೋಗ್ಯತೆಗೆ ಇಂತಹ ನೂರಾರು ಸಾಕ್ಷಿಗ[...] ಪುರಾವೆ ಸಮೇತ ಸಿಕ್ಕಿಬಿದ್ದಿವೆ. ಅಂಗೈಯಲ್ಲೇ ಹುಣ್ಣಿದ್ದ[...] ಕಿತ್ತೆಸೆಯಲು ಸರ್ಕಾರಗಳು, ಅಧಿಕಾರಸ್ಥರು ಮೀನಮೇ[...] ಎಣಿಸುತ್ತಿರುವುದು ವಿಪರ್ಯಾಸ. ಅಕ್ಕಪಕ್ಕದಲ್ಲೇ ಅ[...] ಕೊಂಡಂತಿರುವ ವಿಧಾನಸೌಧಕ್ಕೂ, ಉದ್ಯೋಗ ಸೌಧಕ[...] ಮಾಹಿತಿಯ ರವಾನಿಕೆಯ ಕೊರತೆ ಇದೆ, ಆ ಕಾರಣ[...] ತಪ್ಪಿತಸ್ಥರು ದಿನದಿಂದ ದಿನಕ್ಕೆ ಬಚಾವಾಗುತ್ತಲೇ ಇದ[...] ಎನ್ನುವುದು ಹಾಸ್ಯಾಸ್ಪದವಲ್ಲದೆ ಇನ್ನೇನು... ಕೋಟ[...] ಛಾರ್ಜಿಸಿರುವುದಕ್ಕೂ ಅರ್ಥವಿದೆಯಲ್ಲವೆ.

■ ವರದಿಗಾ[...]






ಬೇಲೆಕೇರಿ ಬಂದರು ಭಾನಗಡಿ

ಮಾಫಿ ಸಾಕ್ಷಿಯಾಗಲು ಕಳ್ಳ ಅಧಿಕಾರಿಗಳು ರೆಡಿ!

ಬೇಲೆಕೇರಿ ಬಂದರಿನಲ್ಲಾದ ಕೋಟ್ಯಾಂತರ ರೂ. ಅದಿರು ಅವ್ಯವಹಾರ ಮತ್ತು ಅದಿರು ಕಳ್ಳ ಸಾಗಾಣಿಕೆ ಪ್ರಕರಣದ ಸಿಬಿಐ ತನಿಖೆ ತಾರ್ಕಿಕ ಅಂತ್ಯ ತಲುಪುತ್ತಿದೆ! ಅರ್ಥಾತ್ ಜೈಲು ಪಾಲಾಗಿರುವ ಜನಾರ್ದನ ರೆಡ್ಡಿಯೇ ಬೇಲೆಕೇರಿ ಬಂದರಿನಲ್ಲಾದ ಅಷ್ಟೂ ಅಕ್ರಮ ದಂಧೆಗಳ ಕಿಂಗ್ ಪಿನ್ ಎಂಬುದು ಸಾಕ್ಷ್ಯಾಧಾರ ಸಮೇತ ಸಾಬೀತಾಗುತ್ತಿದೆ. ಅದಿರು ಮಾಫಿಯಾ ಡಾನ್ ಜನಾರ್ದನ್ ರೆಡ್ಡಿ ಬಳಗ ಬೇಲೇಕೇರಿ ಬಂದರನ್ನು ಕೇಂದ್ರವಾಗಿಟ್ಟುಕೊಂಡು ಮಾಡಿದ ಖತರ್‌ನಾಕ್ ಕಾರ್ಯಾಚರಣೆಯ ಕರಾಳಕತೆಗಳು ಸಿಬಿಐ ಎದುರು ಒಂದೊಂದಾಗಿ ತೆರೆದುಕೊಳ್ಳುತ್ತಿದೆ. ಅದಿರು ಕಳ್ಳತನ ಮತ್ತು ಅಕ್ರಮ ಸಾಗಾಣಿಕೆ ತಡೆಯದಂತೆ ಅರಣ್ಯ-ಬಂದರು ಮತ್ತಿತರ ಅಧಿಕಾರಿಗಳನ್ನು ಹೆದರಿಸಿ-ಬೆದರಿಸಿ ಗಣಿ ಆದಿಪತ್ಯದ ಮಂತ್ರಿಗಳಾಗಿದ್ದ ತ್ರಿಮೂರ್ತಿಗಳು ಮತ್ತು ಶಾಸಕರಾಗಿದ್ದ ದ್ವಿಮೂರ್ತಿಗಳು ಪಳಗಿಸಿಕೊಂಡಿದ್ದರು ಎಂಬುದನ್ನು ಸಾಕ್ಷಿಸಮೇತ ನ್ಯಾಯಾಲಯದಲ್ಲಿ ಹೇಳಲು 'ಬಂಧಿತ ಅಧಿಕಾರಿಗಳು' ಸಿದ್ಧರಾಗಿದ್ದಾರೆ. ಅಲ್ಲಿಗೆ ಜನಾರ್ದನ ರೆಡ್ಡಿಯೇ ಮಹಾ ಕಳ್ಳನೆಂಬುದು ಖಾತ್ರಿಯಾದಂತಾಗಿದೆ...

ಲೋಕಾಯುಕ್ತರ ನಿರ್ದೇಶನದಂತೆ 20.03.2010 ರಂದು ಅರಣ್ಯ ಇಲಾಖಾಧಿಕಾರಿಗಳು ಬೇಲೆಕೇರಿ ಬಂದರಿನಲ್ಲಿ ದಾಸ್ತಾನು ಮಾಡಲಾಗಿದ್ದ 8,05,991 ಮೆಟ್ರಿಕ್ ಟನ್ ಕಬ್ಬಿಣದ ಅದಿರನ್ನು ಜಪ್ತು ಮಾಡಿದ್ದರು. ಇದರಲ್ಲಿ 50.79 ಲಕ್ಷ ಮೆಟ್ರಿಕ್ ಟನ್ ಅದಿರನ್ನು ಹಾಡುಹಗಲೇ ಕದ್ದು ವಿದೇಶಕ್ಕೆ ಅದಿರು ಮಾಫಿಯಾ ಗ್ಯಾಂಗ್ ಸಾಗಿಸಿತ್ತು. ಈ ಕಳ್ಳತನದ ತನಿಖೆಗೆ ಸುಪ್ರೀಂ ಕೋರ್ಟ್ ಉನ್ನತಾಧಿಕಾರಿ ಸಮಿತಿಯನ್ನು ನೇಮಿಸಿತ್ತು. ಈ ಸಿಇಸಿ ನೀಡಿದ ವರದಿಯನ್ನು ಆಧರಿಸಿ ಸರ್ವೋಚ್ಚ ನ್ಯಾಯಾಲಯ ಸಮಗ್ರ ತನಿಖೆ ನಡೆಸುವಂತೆ ಸಿಬಿಐಗೆ ನಿರ್ದೇಶನ ನೀಡಿತ್ತು. ಈ ತನಿಖೆ ಈಗ ಸಿಬಿಐ ಬಿರುಸಾಗಿಸಿಕೊಂಡಿದೆ. ಕಳೆದ 19ರಂದು ಸಿಬಿಐನವರು ಬೇಲೆಕೇರಿ ಬಂದರು ಒಳಪಡುವ ಕಾರವಾರ ಅರಣ್ಯ ವಲಯದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನಾಗರಾಜ ಹಿತ್ತಲಮಕ್ಕಿ; ಮಾಸ್ತಿ ಕಟ್ಟೆ ಆರ್‌ಎಫ್‌ಓ ಸಿ.ಜಿ. ನಾಯ್ಕ್ ಮತ್ತು ಬೇಲೆಕೇರಿ ಬಂದರು ಸಂರಕ್ಷಣಾಧಿಕಾರಿ (ಪಿಸಿ) ಆಗಿದ್ದ ಕ್ಯಾಪ್ಟನ್ ಸಿ. ಸ್ವಾಮಿಯನ್ನು ಬೆಂಗಳೂರಿಗೆ ಕರೆಸಿಕೊಂಡಿದ್ದರು.




ಈ ಮೂವರೂ ರೆಡ್ಡಿ ಬಳಗದ ಅದಿರು ಅವ್ಯವಹಾರಕ್ಕೆ ಅನಿವಾರ್ಯನಿಂದ ಸಹಕರಿಸುತ್ತ ಯಥಾಶಕ್ತಿ ಅಕ್ರಮ ಆದಾಯ ಸಂಗ್ರಹಿಸುತ್ತ ಬಂದಿದ್ದರು. ಇವರನ್ನು ಸಿಬಿಐ ಸುದೀರ್ಘ ವಿಚಾರಣೆಗೆ ಒಳಪಡಿಸಿದಾಗ ಬಂಧಿಸುವುದು ಅನಿವಾರ್ಯವಾಗಿಹೋಯ್ತು. ಇವರಲ್ಲಿ ಕ್ಯಾ. ಸ್ವಾಮಿ ಎಂಬ ಬಂದರು ಅಧಿಕಾರಿಯಂತೂ ರೆಡ್ಡಿ ಗ್ಯಾಂಗಿನ ಸೈಲ್- ಆದಾನಿ ಮತ್ತಿತರ ಅದಿರು ಕಳ್ಳ ಸಾಗಾಣಿಕೆದಾರರ ಕೈಗೊಂಬೆಯಂತಾಗಿ ಮಾಡಿದ ಪಾಪಕ್ಕೆ ಬರೋಬ್ಬರಿ ಒಂದು ವರ್ಷ ಜೈಲಲ್ಲಿ ಉಳಿದು ಬಂದಾತ. ಸಿಐಡಿ ತನಿಖೆಯಲ್ಲಿ ತರತರದ ಪ್ರಭಾವ ಬಳಸಿ ಎಸಿಎಫ್ ನಾಗರಾಜ್ ಹಿತ್ತಲಮಕ್ಕಿ ಎಂಬ ಬಕಾಸುರ ಬಚಾವಾಗಿದ್ದರೆ ಅಸಹಾಯಕ ಸ್ವಾಮಿ ಬಲಿ ಪಶುವಾಗಿದ್ದರು. ಈಗ ರೆಡ್ಡಿಗೆ ಸಹಕರಿಸಿದ ಅಧಿಕಾರಿಗಳು ಒಬ್ಬೊಬ್ಬರಾಗಿ ಸಿಬಿಐ ಬಿಡಾರಕ್ಕೆ ಬೀಳುತ್ತಿದ್ದಾರೆ.

ಅಂದು ಜನಾರ್ದನ ರೆಡ್ಡಿ ಪಡೆಯ ಸ್ವಸ್ತಿಕ್ ನಾಗರಾಜ್, ಕಾರಾಪುಡಿ ಮಹೇಶ್‌ನಂಥ ಪಂಟರುಗಳು ಬಿಸಾಕುತ್ತಿದ್ದ ಬಿಸ್ಕತ್‌ಗೆ ಬಾಯಿ ತೆರೆದು ಸರ್ಕಾರಿ ಸ್ವತ್ತನ್ನು ಲೂಟಿಗೆ ಅವಕಾಶ ಕೊಟ್ಟದ್ದಕ್ಕೆ, ಇಂದು ಎಸಿಎಫ್ ಹಿತ್ತಲಮಕ್ಕಿ, ಆರ್‌ಎಫ್‌ಓ ನಾಯಕ್, ಮತ್ತು ಪಿಸಿ ಸ್ವಾಮಿ ಕಂಬಿ ಎಣಿಸಬೇಕಾಗಿ ಬಂದಿದೆ. ಇದರಿಂದ ಕಂಗಾಲಾಗಿರುವ ಈ ಭ್ರಷ್ಟ ಅಧಿಕಾರಿತ್ರಯರು ಬಚಾವಾಗಲು ಸಿಬಿಐ ಅಧಿಕಾರಿಗಳ ಕಾಲಿಗೆ ಬಿದ್ದು ಅಂಗಲಾಚುತ್ತಿದ್ದಾರೆ. "ರೆಡ್ಡಿ ಬಳಗದ ಮೋಸ-ವಂಚನೆ-ದಗಾ-ದಗಲುಬಾಜಿ ಸಾಕ್ಷಿ-ಆಧಾರ ಸಮೇತ ನ್ಯಾಯಾಲಯದಲ್ಲಿ ಬೇಕಿದ್ದರೂ ಹೇಳುತ್ತೇವೆ... ನಮ್ಮನ್ನು ಕಾಪಾಡಿ" ಎಂದು ಗೋಗರೆಯುತ್ತಿದ್ದಾರೆ. ತಮ್ಮನ್ನು ಅಪ್ರೂವರ್ (ಮಾಫಿ ಸಾಕ್ಷಿ) ಆಗಿ ಪರಿಗಣಿಸಿ ಪುಣ್ಯ ಕಟ್ಟಿಕೊಳ್ಳುವಂತೆ ಸಿಬಿಐನವರಲ್ಲಿ ಬೇಡಿಕೊಳ್ಳುತ್ತಿರುವುದು ಕರುಣಾಜನಕವಾಗಿದೆಯಾದರೂ ಉಪ್ಪು ತಿಂದೋರು ನೀರು ಕುಡಿಯಲೇಬೇಕೆಂಬ ಪಾಠದಂತಿದೆ!!

ಗಣಿ ಸಾಮ್ರಾಜ್ಯದ ಮಂತ್ರಿಗಳಾಗಿದ್ದ ಜನಾರ್ದನ ರೆಡ್ಡಿ-ಕರುಣಾಕರ ರೆಡ್ಡಿ ಮತ್ತು ರಾಮುಲು ಹಾಗು ಶಾಸಕರಾಗಿದ್ದ ಸೋಮಶೇಖರ ರೆಡ್ಡಿ ಮತ್ತು ಸುಧಾಕರ ಬಾಬುಗಳು ಅದಿರು ಅವ್ಯವಹಾರಕ್ಕೆ ಅಡ್ಡಿಪಡಿಸದಂತೆ ಅದ್ಯಾವ ಪರಿ ಒತ್ತಡ-ಹಿಂಸೆ ನೀಡುತ್ತಿದ್ದರೆಂಬುದನ್ನು ಬಂಧಿತ ಅಧಿಕಾರಿಗಳು ಸಿಬಿಐ ಎದುರು ಹೇಳಿಕೊಂಡಿದ್ದಾರಂತೆ. ಈ ಅಧಿಕಾರಸ್ಥರ ಅಂದಿನ ಬೆದರಿಕೆಗೆ ಅಂಜಿ ತಾವು ಬೇಲೆಕೇರಿ ಬಂದರಿಂದ ಆರು ಲಕ್ಷ ಮೆಟ್ರಿಕ್ ಟನ್ ಅದಿರು ಕಳ್ಳತನಕ್ಕೆ ಹಾಗು 50 ಲಕ್ಷ ಮೆಟ್ರಿಕ್ ಟನ್ ಅದಿರನ್ನು ಕಳ್ಳ ಸಾಗಾಣಿಕೆ ಮಾಡಲು ನೆರವಾಗಬೇಕಾಗಿ ಬಂತೆಂದು ಹಿತ್ತಲಮಕ್ಕಿ, ನಾಯ್ಕ್, ಸ್ವಾಮಿ ಎಳೆಎಳೆಯಾಗಿ ವಿವರಿಸಿದ್ದಾರಂತೆ. ತಮ್ಮ ತಪ್ಪು ಒಪ್ಪಿಕೊಂಡಿರುವ ಸದ್ರಿ ಅಧಿಕಾರಿಗಳು ಅಕ್ರಮಕ್ಕೆ ಒತ್ತಡ ಹಾಕಿದ ಮಂತ್ರಿ-ಶಾಸಕರ ವಿರುದ್ಧ ಕೋರ್ಟ್‌ನಲ್ಲಿ ಸಾಕ್ಷಿ ಹೇಳುವುದಾಗಿಯೂ ಹೇಳಿದ್ದಾರೆ. ಅದಿರು ಗಣರಾಜ್ಯದ ಮಂತ್ರಿ-ಶಾಸಕರಾಗಿದ್ದ ಪಂಚ ಪಾಪಿಗಳ ಪಾತಕದ ಬಗ್ಗೆ ಈ ಅಧಿಕಾರಿಗಳಲ್ಲಿ ರಾಶಿ-ರಾಶಿ ಸಾಕ್ಷ್ಯಾಧಾರಗಳೂ ಇದೆ. ಇದೆಲ್ಲ ಪಡೆದುಕೊಂಡಿರುವ ಸಿಬಿಐನವರು ಕೋರ್ಟಿಗೆ ಸಲ್ಲಿಸಲು ಸಿದ್ಧತೆ ನಡೆಸುತ್ತಿದ್ದಾರೆ. ಹಾಗಂತ ಬಂಧಿತ ಭ್ರಷ್ಟ ಅಧಿಕಾರಿಗಳನ್ನು ಮಾಫಿ ಸಾಕ್ಷಿಯಾಗಿ ಮಾಡುವ ಬಗ್ಗೆ ಸಿಬಿಐ ಸದ್ಯಕ್ಕೇನೂ ಒಪ್ಪಿಲ್ಲ.

ತುಂಬ ಮಹತ್ವದ ಸಂಗತಿಯೆಂದರೆ, ಬಂಧಿತ ಮೂವರು ಅಧಿಕಾರಿಗಳು ರೆಡ್ಡಿ ಬಳಗದ ಹಫ್ತಾ ವಸೂಲಿಯ ಹಿಕ ಮತ್ತು ಬಹಿರಂಗಪಡಿಸಿದ್ದಾರೆ! ಬಳ್ಳಾರಿಯ ಆಸುಪಾಸಿನಲ್ಲಿ ಗಣಿಗಾರಿಕೆಯಲ್ಲಿ ತೊಡಗಿದ ಹಲವು ಕಂಪನಿಗಳಿಂದ ಜನಾರ್ದನ ರೆಡ್ಡಿ ರಿಪಬ್ಲಿಕ್ ಅನುಚಾನಾಗಿ ಹಫ್ತಾ ಪಡೆಯುತ್ತಿದ್ದದ್ದು ಕುತೂಹಲಕರವಾಗಿದೆ. ಅದಿರು ಕಂಪನಿ ದಣಿಗಳು ತಮ್ಮ ಅಕ್ರಮ ಅದಿರು ಸಾಗಾಣಿಕೆಗೆ ಅಧಿಕಾರಿಗಳಿಂದ ಮತ್ತು ರೆಡ್ಡಿಯ ರೌಡಿಗಳಿಂದ ಅಡ್ಡಿ-ಆತಂಕ ಬರಬಾರದೆಂದು ಅದಿರನ್ನು ಹಫ್ತಾ ರೂಪದಲ್ಲಿ ಡಾನ್‌ನ ಎಎಂಸಿ ಕಂಪನಿಗೆ ಕೊಡುತ್ತಿದ್ದರು. ಕಂಪನಿಗಳ ಅಕ್ರಮ ಅದಿರು ವ್ಯವಹಾರದ ದೌರ್ಬಲ್ಯ ರೆಡ್ಡಿಗೆ ಹಫ್ತಾ ವಸೂಲಿಗೆ ಅಸ್ತ್ರವಾಗಿತ್ತು. ಒಂದು ಲಕ್ಷ ಮೆಟ್ರಿಕ್ ಟನ್ ಅದಿರು ಬಳ್ಳಾರಿ ಗಡಿಯಿಂದಾಚೆ ಹೋಗಬೇಕೆಂದಿದ್ದರೆ ರೆಡ್ಡಿ ಗ್ಯಾಂಗಿಗೆ 25 ಸಾವಿರ ಮೆಟ್ರಿಕ್ ಟನ್ ಅದಿರು ಹಫ್ತಾ ಕೊಡುವ ಪದ್ಧತಿ ಜಾರಿಯಲ್ಲಿತ್ತು. ಈ ಹಫ್ತಾ ಕಳ್ಳ ಕಂಪನಿ ದೊರೆಗಳು ರೆಡ್ಡಿಯ ಎಎಂಸಿ ಕಂಪನಿ ಹೆಸರಲ್ಲಿ ಬೇಲೇಕೇರಿ ಬಂದರಿಗೆ ತಂದು ತಲುಪಿಸಬೇಕಿತ್ತು!! ಹಾಗಂತ ಸಿಬಿಐ ವಶದಲ್ಲಿರುವ ಎಸಿಎಫ್, ಆರ್‌ಎಫ್‌ಓ ಮತ್ತು ಪಿಸಿ ರೋಚಕವಾಗಿ ವಿವರಿಸಿದ್ದಾರೆ.

ಬಳ್ಳಾರಿಯಿಂದ ಬೇಲೇಕೇರಿಗೆ ಅದಿರು ಬರುವಾಗ ರಸ್ತೆಯುದ್ದಕ್ಕೂ ನಾನಾ ನಮೂನೆಯ ಅಕ್ರಮ-ಅನ್ಯಾಯ-ದಾದಾಗಿರಿ-ದರೋಡೆ ನಡೆಯುತ್ತಿತ್ತು! ಸರ್ಕಾರಿ ಸ್ವತ್ತನ್ನು ಯಾವ ಭಯ-ಅಡ್ಡಿಗಳಿಲ್ಲದೆ ಕದಿಯುವುದು, ಸಾಗಿಸುವುದು, ಮಾರುವುದು, ರಫ್ತು ಮಾಡುವುದು ನಡೆಯುತ್ತಿತ್ತು, ಆದರೆ ಇದ್ಯಾರೂ ಕೇಳೋರು-ಹೇಳೋರು ಇರಲಿಲ್ಲ! ಸರ್ಕಾರಿ ಅಧಿಕಾರಿಗಳಿಗೆ ಗುಜರಾತಿನ ಅದಾನಿ ಎಂಟರ್‌ಪ್ರೈಸಸ್, ಕಾರವಾರ ಶಾಸಕ ಸತೀಶ್ ಸೈಲ್‌ನ ಮಲ್ಲಿಕಾರ್ಜುನಾ ಶಿಪ್ಪಿಂಗ್, ಗೋವಾದ ಸಾಲ್ಗಾಂವ್ಕರ್ ಕಂಪನಿ, ಬೆಂಗಳೂರಿನ ರಾಜಮಹಲ್ ಸಿಲ್ಕ್ ಕಂಪನಿ ಮುಂತಾದ ಅದಿರು ರಫ್ತು ಕಂಪನಿ ಖಳರು ಲಂಚ ಕೊಡುತ್ತಿದ್ದರು. ಲಾರಿಯೊಂದರಲ್ಲಿ 16 ಟನ್ ಅದಿರು ಸಾಗಿಸಲಷ್ಟೇ ಪರವಾನಗಿ ಕೊಡಲಾಗಿತ್ತು, ಆದರೆ 20-25 ಟನ್ ತನಕವೂ ಅದಿರು ಲಾರಿಗಳಲ್ಲಿ ತುಂಬಲಾಗುತ್ತಿತ್ತು. ರೆಡ್ಡಿ ರಿಪಬ್ಲಿಕ್ ಹಂಚುತ್ತಿದ್ದ ಖೋಟಾ ಪರವಾನಗಿ ಮೇಲೆಯೇ ಬಹಳಷ್ಟು ಲಾರಿಗಳು ಅದಿರು ತುಂಬಿಕೊಂಡು ಬರುತ್ತಿದ್ದವು. ಇವು ಗಳ ಮೇಲೆ ಸಾರಿಗೆ ಇಲಾಖೆಯ ವರಾಗಲಿ, ಗಣಿ-ಭೂವಿಜ್ಞಾನಿ ಇಲಾಖೆಯವರಾಗಲಿ, ಅರಣ್ಯ ಇಲಾಖೆಯ ವರಾಗಲಿ ಕೇಸ್ ಹಾಕುತ್ತಿರಲಿಲ್ಲ, ರೆಡ್ಡಿಯ ಬಳಗ ಕೊಡುತ್ತಿದ್ದ 'ರಿಸ್ಕ್ ಮನಿ' ಮುಕ್ಕಿ ಉದಾಸೀನದಿಂದ ಹಾಯಾಗಿ ಉಳಿದುಬಿಡುತ್ತಿದ್ದರು.



ಕ್ಯಾಪ್ಟನ್ ಸ್ವಾಮಿ

ಬಂದರಿಗೆ ಬಂದು ಬೀಳುತ್ತಿದ್ದ ಈ ಅದಿರು ವಿದೇಶಕ್ಕೆ ಹೋಗುವಾಗ ಬಂದರು ಅಥವಾ ಕಸ್ಟಮ್ಸ್ ಇಲಾಖೆಯ ಅಧಿಕಾರಿಗಳ ಕಣ್ಣಿಗೂ ಬೀಳುತ್ತಿರಲಿಲ್ಲ! ಅಂದರೆ ಈ ಎರಡೂ ಇಲಾಖೆಯವರೂ ತಂತಮ್ಮ ಪಾಲು ಪಡೆದು ಕಳ್ಳ ಸಾಗಾಣಿಕೆಗೆ ಅವಕಾಶ ಕೊಡುತ್ತಿದ್ದರು. ಈ ಭಾನಗಡಿಯಲ್ಲಿ ಸರಿಸುಮಾರು ಒಂದು ಸಾವಿರ ಕೋಟಿ ರೂ.ಗಳ ಅಕ್ರಮ ಅದಿರು ರಫ್ತು ನಡೆದಿದೆ. ಇದೆಲ್ಲ ರಾಜಾರೋಷವಾಗಿ ನಡೆಯುತ್ತಿದ್ದ ಬಹಿರಂಗ ರಹಸ್ಯವಾಗಿತ್ತು. ಇದನ್ನು ಸಿಇಸಿ ವರದಿಯಲ್ಲೂ ಎತ್ತಿ ಹೇಳಲಾಗಿದೆ. ಇದು ಬೇಲೇಕೇರಿ ಬಂದರಿಂದ ನಡೆದ 6 ಲಕ್ಷ ಮೆಟ್ರಿಕ್ ಟನ್ ಅದಿರಿನ ಕಳ್ಳತನದ ಕತೆಯಾದರೆ, 50 ಲಕ್ಷ ಮೆಟ್ರಿಕ್ ಟನ್ ಅದಿರು ಲೋಕಾಯುಕ್ತರ ವಶದಲ್ಲಿದ್ದಾಗಲೇ ನಾಪತ್ತೆ ಮಾಡಿದ್ದು ಮತ್ತೊಂದು ದರೋಡೆ ವೃತ್ತಾಂತ!

ಬಂದರು ಅಧಿಕಾರಿಗಳೇ ಹೇಳುವಂತೆ ಅರಣ್ಯ ಇಲಾಖೆಯವರು ಲೋಕಾಯುಕ್ತರ ಆದೇಶದಂತೆ ಮುಟ್ಟುಗೋಲು ಹಾಕಿಕೊಂಡಿದ್ದ 8,05,991 ಮೆಟ್ರಿಕ್ ಟನ್ ಅದಿರಲ್ಲಿ ಅದಾನಿ ಕಂಪನಿಯ 4,14,357,163 ಮೆಟ್ರಿಕ್ ಟನ್, ಮಲ್ಲಿಕಾರ್ಜುನಾ ಶಿಪ್ಪಿಂಗ್‌ನ 2,29,279.02 ಮೆಟ್ರಿಕ್ ಟನ್, ಸಾಲ್ಗಾಂವ್ಕರ್ ಕಂಪನಿಯ 1,08,334.10 ಮೆಟ್ರಿಕ್ ಟನ್ ಮತ್ತು ರಾಜಮಹಲ್ ಸಿಲ್ಕ್‌ನ 24,020.800 ಮೆಟ್ರಿಕ್ ಟನ್ ಅದಿರು ಸೇರಿತ್ತು. ಇದರಲ್ಲಿ ಶಾಸಕ ಸೈಲ್‌ನ ಮಲ್ಲಿಕಾರ್ಜುನ ಶಿಪ್ಪಿಂಗ್ 3.21 ಲಕ್ಷ ಮೆಟ್ರಿಕ್ ಟನ್, ಅದಾನಿಯ ಕಂಪನಿ 3.25 ಲಕ್ಷ ಮೆಟ್ರಿಕ್ ಟನ್, ಸಾಲ್ಗಾಂವ್ಕರ್ ಕಂಪನಿ 91.27 ಸಾವಿರ ಮೆಟ್ರಿಕ್ ಟನ್, ರಾಜಮಹಲ್ ಸಿಲ್ಕ್ ಕಂಪನಿ 17.39 ಸಾವಿರ ಮೆಟ್ರಿಕ್ ಟನ್ ಅದಿರನ್ನು ಕದ್ದು ವಿದೇಶಕ್ಕೆ ಕಳಿಸಿವೆ. ಇನ್ನುಳಿದ 32,170.48 ಮೆಟ್ರಿಕ್ ಟನ್ ಅದಿರನ್ನು ಗ್ರೀನ್‌ಟೆಕ್ಸ್ ಮೈನಿಂಗ್ ಕಂಪನಿ ಉಚ್ಚ ನ್ಯಾಯಾಲಯದ ಪರವಾನಗಿ ಪಡೆದು ರಫ್ತು ಮಾಡಿದೆ.

65.018 ಲಕ್ಷ ಮೆಟ್ರಿಕ್ ಟನ್ ಅದಿರನ್ನು 2009-2010ರಲ್ಲಿ ಮತ್ತು 15.845 ಲಕ್ಷ ಮೆಟ್ರಿಕ್ ಟನ್ ಅದಿರನ್ನು 2010-2011ರಲ್ಲಿ ಬೇಲೇಕೇರಿ ಬಂದರಿಂದ ಸಾಗಾಣಿಕೆ ಮಾಡಲಾಗಿತ್ತು. ಆದರೆ 2009-10ರಲ್ಲಿ 28.510 ಲಕ್ಷ ಮೆಟ್ರಿಕ್ ಟನ್ ಮತ್ತು 2010-11ರಲ್ಲಿ 4.250 ಲಕ್ಷ ಮೆಟ್ರಿಕ್ ಟನ್ ಅದಿರನ್ನಷ್ಟೇ ಬೇಲೇಕೇರಿ ಬಂದರಿಂದ ರಫ್ತು ಮಾಡಲು ಅನುಮತಿ ಕೊಡಲಾಗಿತ್ತು. ಅಂದರೆ 2009-10ರಲ್ಲಿ 36.508 ಲಕ್ಷ ಮೆಟ್ರಿಕ್ ಟನ್ ಹಾಗು 2010-11ರಲ್ಲಿ 11.594 ಲಕ್ಷ ಮೆಟ್ರಿಕ್ ಟನ್ ಅದಿರನ್ನು ಬೇಲೇಕೇರಿ ಬಂದರಿಂದ ಸ್ಮಗ್ಲಿಂಗ್ ಮಾಡಲಾಗಿದೆ! ಪ್ರತಿ ಟನ್‌ಗೆ ಕನಿಷ್ಠ 3,000 ರೂ. ಎಂದು ಲೆಕ್ಕ ಹಾಕಿದರೂ ಕಳ್ಳ ಸಾಗಾಣಿಕೆಯಾದ ಒಟ್ಟು 48.102 ಲಕ್ಷ ಮೆಟ್ರಿಕ್ ಟನ್ ಅದಿರಿನ ಬೆಲೆ 1.443 ಕೋಟಿ ರೂಪಾಯಿಗಳಾಗುತ್ತವೆ!! ಈ ವ್ಯವಸ್ಥಿತ ಕಳ್ಳ ಸಾಗಾಣಿಕೆ ಜಾಲದಲ್ಲಿ 78 ಸಾಗಾಣಿಕೆದಾರರು ಮತ್ತು 20 ಕಂಪನಿಗಳು ಜತೆಗೆ ಅನೇಕಾನೇಕ ದಲ್ಲಾಳಿಗಳು, ಅಕ್ರಮ ತನಿಖಾ ಠಾಣೆ ಮಾಡಿ ವಸೂಲಿ ಮಾಡಿದ ಲೋಕಲ್ ಪೊಲಿಟಿಕಲ್ ರೌಡಿಗಳೂ ಸೇರಿಕೊಂಡಿದ್ದಾರೆ.


ಬೇಲೆಕೇರಿ ಬಂದರಿನಲ್ಲಾದ ಅದಿರು ಅವ್ಯವಹಾರದ ತನಿಖೆಯನ್ನು ಯಡ್ಡಿ ಸಿಎಂ ಆಗಿದ್ದಾಗ ಸಿಐಡಿಗೆ ವಹಿಸಿದ್ದರು. ಅಂದು ನಡೆದ ದೊಡ್ಡ ಕೋಲಾಹಲದಿಂದ ಪಾರಾಗಲು ಯಡ್ಡಿ ಮಾಡಿದ ಮಸಲತ್ತು ಇದಾಗಿತ್ತು. ಅದಿರು ಡಾನ್ ರೆಡ್ಡಿ ಆತನ ಮಾಫಿಯಾದಲ್ಲಿದ್ದ ಡಾಕೂ ಅಧಿಕಾರಿಗಳನ್ನು ರಕ್ಷಿಸಲೆಂದೇ ಮಾಡಿದ ನಾಟಕ ಇದಾಗಿತ್ತು. 20.03.2010ರಂದು ಅರಣ್ಯ ಅಧಿಕಾರಿಗಳು ಸೀಜ್ ಮಾಡಿದ ಅದಿರಿನ ಜಾತಕ ಜಾಲಾಡುವಾಗ ಬೇಲೆಕೇರಿ ಬಂದರಿನ ಅಂಗಳದಲ್ಲಿ ನಡೆಯುತ್ತಾ ಬಂದಿದ್ದ ಹಲವು ಪಾತಕಗಳು ತಂತಾನೆ ತೆರೆದುಕೊಂಡಿದ್ದವು! 2009-10 ಮತ್ತು 2010-11ರಲ್ಲಿ ಎಷ್ಟು ಅದಿರನ್ನು ಬಂದರಿನಲ್ಲಿ ದಾಸ್ತಾನು ಮಾಡಲಾಗಿತ್ತು, ಅದಕ್ಕಿಂತಲೂ ಮೊದಲಿನ ಸಂಗ್ರಹದ ಪ್ರಮಾಣ 20.03.2010ರಂದು ಇದ್ದ ಶೇಖರಣೆ, ರಫ್ತು ಮಾಡಿದ ಅದಿರೆಷ್ಟು, ಅದನ್ನು ಸಾಗಿಸಿದ ರೀತಿ-ನೀತಿ... ಇವೆಲ್ಲ ಒಂದಕ್ಕೊಂದು ತಾಳೆ ಹಾಕಿದಾಗ ಕಳ್ಳ ಸಾಗಾಣಿಕೆಯಾದ ಅದಿರಿನ ಪ್ರಮಾಣ, ಅದಿರಿನ ಅಕ್ರಮ ಸಾಗಾಣಿಕೆ, ಅರಣ್ಯ ಕಾಯ್ದೆ 1980 ಬುದ್ಧಿಪೂರ್ವಕ ಧಿಕ್ಕರಿಸಿ ಸರ್ಕಾರಿ ಸ್ವತ್ತು ಕದ್ದಿದ್ದು-ಮಾರಿದ್ದು -ಕಳ್ಳ ಸಾಗಾಣಿಕೆ ಮಾಡಿದ್ದು ಬಹಿರಂಗವಾಗಿತ್ತು!! ಆದರೆ ಇದ್ಯಾವುದೂ ಸಿಐಡಿ ಪೊಲೀಸರಿಗೆ ದೊಡ್ಡ ಅಪರಾಧದಂತೆ ಕಾಣಿಸಲೇ ಇಲ್ಲ. ರೆಡ್ಡಿ ಬಳಗ ಮತ್ತು ಚೋರ ಅಧಿಕಾರಿ ಗಣವನ್ನು 'ನಿರ್ದೋಷಿ'ಯಾಗಿಸುವ ಕಸರತ್ತು ಸಿಐಡಿ ನಡೆಸಿತು. ಸರ್ಕಾರಿ ಸ್ವತ್ತು ಕದ್ದಿದ್ದು, ಮಾರಿದ್ದು, ಕಳ್ಳ ಸಾಗಾಟ ಮಾಡಿದ್ದಕ್ಕೆ ಹಾಕಬಹುದಾದ ಬಿಗಿಬಿಗಿಯಾದ ಸೆಕ್ಷನ್ ಬಿಟ್ಟು ಜುಜುಬಿ ಸೆಕ್ಷನ್‌ಗಳಾದ 120(ಬಿ), 379, 411 ಹಾಗು 418 ಹಾಕಿ ಆರೋಪ ಪಟ್ಟಿ ಸಲ್ಲಿಸಿತ್ತು. ಆಗ ಸಿಕ್ಕಿಬಿದ್ದಿದ್ದು ಬಂದರು ಅಧಿಕಾರಿ ಕ್ಯಾಪ್ಟನ್ ಸ್ವಾಮಿಯಂಥ ದುರ್ಬಲರಷ್ಟೇ!!

ಈಗ ಸಿಬಿಐ ತನಿಖೆ ನಿಷ್ಠೂರವಾಗಿ ನಡೆಯುತ್ತಿದೆ. ಬೇಲೇಕೇರಿಯಿಂದ ಎಷ್ಟು ಅದಿರು ರಫ್ತಾಗಿದೆ, ಇದರಲ್ಲಿ ಅಕ್ರಮವೆಷ್ಟು, ಸಕ್ರಮವೆಷ್ಟು, ಬೇಲೇಕೇರಿ ಬೆಟ್ಟ-ಗುಡ್ಡ-ಸಂದು-ಗೊಂದುಗಳಲ್ಲಿ ಪ್ರತಿದಿನ ಎಷ್ಟು ಅದಿರು ಬಂದು ಬೀಳುತ್ತಿತ್ತು, ಸಾಗಾಟ ಮಾಡಿದ ವಿಧಾನ-ಅನುಮತಿ, ಲೋಕಾಯುಕ್ತ ಜಪ್ತು ಮಾಡಿದ ಅದಿರಿನ ಪ್ರಮಾಣ, ಯಾರು ಈ ಗೋಲ್‌ಮಾಲ್‌ನ ರೂವಾರಿ, ಯಾವ್ಯಾವ ಇಲಾಖೆ ಅಧಿಕಾರಿಗಳು ಈ ದರೋಡೆಯಲ್ಲಿ ಶಾಮೀಲಾಗಿದ್ದಾರೆ, ಇದರಲ್ಲಿ ರೆಡ್ಡಿ ಬಣದ ರಾಜಕೀಯ ಖದರೆಂಥದಿತ್ತು... ಇವೇ ಮುಂತಾದ ಮಹತ್ವದ ಅಂಶಗಳ ಮೇಲೆ ಸಿಬಿಐ ತನಿಖೆ ಕೇಂದ್ರೀಕರಿಸಿದೆ. ಆಯಕಟ್ಟಿನಲ್ಲಿದ್ದ ಮೂವರು ಅಧಿಕಾರಿಗಳನ್ನು ಹೆಡೆಮುರಿ ಕಟ್ಟಿ ತನಿಖೆಗೆ ಒಳಪಡಿಸಿದ್ದಾರೆ. ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದು ಒದ್ದಾಡುತ್ತಿರುವ ಅಧಿಕಾರಿಗಳು 'ಜೀವ' ಉಳಿಸಿಕೊಳ್ಳಲು ಅದಿರು ಮಾಫಿಯಾದ ಡಾನ್ ಜನಾರ್ದನ ರೆಡ್ಡಿ ಪಡೆಯ ರಾಕ್ಷಸತನ ಬಿಚ್ಚಿಡುತ್ತಿದ್ದಾರೆ.

ಕಳ್ಳ ಹೆಗ್ಗಣ ಕರಾಮತ್ತಾಗೇ ಬೋನಿಗೆ ಬೀಳುತ್ತಿದೆ: ಸಿಬಿಐ ಬಲೆಗೆ ಮೂವರು ಅಧಿಕಾರಿಗಳು ಬಿದ್ದಿದ್ದೇ ತಡ ಅದಿರು ವ್ಯವಹಾರದಿಂದ ಕುಬೇರರಾದ-ಎಮ್ಮೆಲ್ಲೆಯೂ ಆದ ಸತೀಶ್ ಸೈಲ್, ಶಿವರಾಮ ಹೆಬ್ಬಾರ್ ಮತ್ತವರ ದರೋಡೆ ಪಡೆಯಲ್ಲಿ ಸಕ್ರಿಯವಾಗಿದ್ದ ಅಧಿಕಾರಿಗಳು ನಿದ್ದೆಗೆಡುತ್ತಿದ್ದಾರೆ. ಸಿಬಿಐ ತನಿಖೆ ಕುತೂಹಲಕರ ಆಯಾಮ ಪಡೆಯುತ್ತಸಾಗಿದೆ!!

■ ನಹುಷ

ಅಪರಿಚಿತ ಆಚಾರ್ ಗೆಲುವಿನ ಹಿಂದೆ ಗುಟುರು ಹಾಕುತ್ತಿರುವ ಗೂಳಿ....




ದುರ್ಗ-ದಾವಣಗೆರೆಯ ಪರಿಚಯವಿರಲಿ ಈ ಭಾಗದ ಗ್ರಾಮ ಪಂಚಾಯ್ತಿಯ ಒಬ್ಬೇ ಒಬ್ಬ ಸದಸ್ಯನ ಒಡನಾಟವೂ ಇರದ ರಘು ಆಚಾರಿಯೆಂಬ ಅಪರಿಚಿತ ದಾವಣಗೆರೆ-ಚಿತ್ರದುರ್ಗ ಎಂ.ಎಲ್.ಸಿ ಎಲೆಕ್ಷನ್‌ನಲ್ಲಿ ಗೆದ್ದು ಎಲ್ಲರ ಹುಬ್ಬೇರುವಂತೆ ಮಾಡಿದ್ದಾನೆ. ಈ ದಿಢೀರ್ ರಾಜಕಾರಣಿಯ ಪೊಲಿಟಿಕಲ್ ಬೇಸ್ ಕೆದಕುತ್ತಾ ಹೋದರೆ ಮಾಜಿಮಂತ್ರಿ ಗೂಳಿಹಟ್ಟಿ ಶೇಖರ್ ಸಾಹೇಬರ ರಣತಂತ್ರದ ಲೆಕ್ಕಾಚಾರಗಳು ಒಂದೊಂದೇ ಬಯಲಾಗುತ್ತವೆ. ದೂರದ ಮೈಸೂರಿನ ರೊಕ್ಕಸ್ಥ ಆಸಾಮಿ ರಘು ಆಚಾರ್‌ನ ಗೆಲುವಿನ ಹಿಂದೆ ಗೂಳಿಹಟ್ಟಿ ಶೇಖರ್‌ನ ಲೋಕಸಭಾ ಚುನಾವಣಾ ತಾಲೀಮು ಇರುವುದು ಮಾತ್ರ ಸತ್ಯ!

ಹಾಗೆ ನೋಡಿದರೆ ಗೂಳಿಹಟ್ಟಿ ಶೇಖರ್‌ನ ಖಾದಿ ಬದುಕೂ ಇಷ್ಟೇ ದಿಢೀರೆಂದು, ಅಪರಿಚಿತವಾಗೇ ಶುರುವಾದದ್ದು. ಹೊಸದುರ್ಗ ತಾಲೂಕಿನವನೇ ಆದರೂ ಈತ ಕ್ಷೇತ್ರದ ಜನರಿಗೆ ರಾಜಕಾರಣಿಯಾಗಿ ಪರಿಚಿತವಾಗಿದ್ದವನೇ ಅಲ್ಲ, ಆದರೂ 2008ರ ಅಸೆಂಬ್ಲಿ ಚುನಾವಣೆಗೆ ಅಚಾನಕ್ಕಾಗಿ ಎಂಟ್ರಿ ಕೊಟ್ಟ ಶೇಖರ್ ಪಕ್ಷೇತರನಾಗಿ ಗೆದ್ದು ಶಾಸಕನಾಗೇ ಬಿಟ್ಟ. ಅದೇ ವೇಳೆಗೆ ಸ್ಪಷ್ಟ ಬಹುಮತಕ್ಕೆ ಒಂದೆರಡು ಶಾಸಕರ ಕೊರತೆಯಿಂದ ಕಂಗಾಲಾಗಿದ್ದ ಬಿಜೆಪಿಗೆ ಪಕ್ಷೇತರರೇ ಆಪದ್ಬಾಂಧವರಂತಾಗಿದ್ದರು. ಅದೇ ಸಲುಗೆಯಲ್ಲಿ ಗೂಳಿಹಟ್ಟಿ ಶೇಖರ್ ಯುವಜನ ಮತ್ತು ಕ್ರೀಡಾ ಸಚಿವನಾಗಿಯೂ ಕ್ಯಾಬಿನೆಟ್ ತೂರಿಕೊಂಡು ಗೂಟದ ಕಾರನ್ನೇರಿದ್ದ. ಅಲ್ಲಿಂದಾಚೆಗೆ ನಸೀಬು ವಕ್ಕರಿಸಿದಷ್ಟೇ ವೇಗದಲ್ಲಿ ಗೂಳಿಹಟ್ಟಿಯ ದುರಾದೃಷ್ಟಗಳೂ ಆತನ ಹೆಗಲೇರಿದ್ದವು. ಆಪರೇಷನ್ ಕಮಲದಿಂದ ಸಾಕಷ್ಟು ಬಲ ದಕ್ಕಿಸಿಕೊಂಡ ಬಿಜೆಪಿ ನಂತರದಲ್ಲಿ ಪಕ್ಷೇತರರನ್ನು ಮಂತ್ರಿಗಿರಿಯಿಂದ ಕೆಳಗಿಳಿಸಿದ್ದು ಮಾತ್ರವಲ್ಲ, ಶಾಸಕತ್ವದಿಂದಲೂ ಅನರ್ಹಗೊಳಿಸಿ ದ್ರೋಹ ಬಗೆದಿದ್ದರು. ಮುಂದೆ ಸುಪ್ರೀಂ ಕೋರ್ಟ್ ಪಕ್ಷೇತರರ ಪರವಾಗಿ ತೀರ್ಪಿತ್ತಿತಾದರೂ ಅಷ್ಟರಲ್ಲಾಗಲೆ ರಾಜ್ಯ ರಾಜಕಾರಣದ ಪಾಳಯದಲ್ಲಿ ಪಕ್ಷೇತರರು 'ಯೂಸ್‌ಲೆಸ್' ಎನಿಸಿದ್ದರು.

ಆದರೆ 2013ರ ವಿಧಾನಸಭಾ ಚುನಾವಣೆಯ ಸೋಲು ಗೂಳಿಹಟ್ಟಿಗೆ ಪರ್ಯಾಯ ರಾಜಕಾರಣದತ್ತ ಮುಖ ಮಾಡದೆ ಬೇರೆ ವಿಧಿಯೇ ಇಲ್ಲದಂತೆ ಮಾಡಿತ್ತು. ಚುನಾವಣೆಗೂ ಮುನ್ನ ಯಾವುದಾದರೊಂದು ರಾಜಕೀಯ ಪಕ್ಷವನ್ನು ಸೇರಿ ಆ ಪಕ್ಷದಿಂದಲೇ ಗೂಳಿಹಟ್ಟಿ ಸ್ಪರ್ಧಿಸುತ್ತಾನೆ ಎಂಬ ಲೆಕ್ಕಾಚಾರಗಳಿದ್ದವು. ಬಿಜೆಪಿಯಿಂದ ಇಬ್ಭಾಗವಾಗಿ ಉದಯಿಸಿದ ಕೆಜೆಪಿ, ಬಿಎಸ್‌ಆರ್ ಕಾಂಗ್ರೆಸ್‌ಗಳಿಂದಾಗಿ ಗೂಳಿಹಟ್ಟಿಗೆ ಪಕ್ಷಗಳ ಆಯ್ಕೆಯ ಅವಕಾಶಗಳೂ ಹೆಚ್ಚಿದ್ದವು. ಆದರೆ ಜ್ಯೋತಿಷ್ಯಕ್ಕೆ ಕಟ್ಟುಬೀಳುವ ಗೂಳಿಹಟ್ಟಿ ಶೇಖರ್‌ಗೆ ಅದ್ಯಾವನೋ ಕೇರಳದ ಜ್ಯೋತಿಷಿ ಈ ಬಾರಿಯೂ ಪಕ್ಷೇತರನಾಗಿ ನಿಂತರೆ ಮಾತ್ರ ಗೆಲ್ಲುತ್ತೀಯಾ ಅಂತ ಅಪ್ಪಣೆ ಕೊಟ್ಟಿದ್ದನಂತೆ. ಅದರಂತೆ ಪಕ್ಷೇತರನಾಗಿಯೇ ಸ್ಪರ್ಧೆಗಿಳಿದ ಗೂಳಿ ಸೋತು ಮಕಾಡೆ ಮಲಗಬೇಕಾಯಿತು.

ಈ ಸೋಲಿನನಂತರ ಅಕ್ಷರಶಃ ಕಣ್ಮರೆಯಾಗಿದ್ದ ಗೂಳಿಹಟ್ಟಿ ಇನ್ನೇನು ರಾಜಕಾರಣದಿಂದ ನಾಪತ್ತೆಯಾಗಿಬಿಡುತ್ತಾನೆ ಎನ್ನುವ ವಾತಾವರಣ ಸೃಷ್ಟಿಯಾಗಿದ್ದಾಗಲೆ ಈಗ ಎರಡು ತಿಂಗಳ ಹಿಂದೆ ಮತ್ತೊಮ್ಮೆ ದಿಢೀರ್ ಅಂತ ಪ್ರತ್ಯಕ್ಷನಾಗಿದ್ದ. ಇದ್ದಕ್ಕಿದ್ದಂತೆ ಚಿತ್ರದುರ್ಗದ ಬಡಾವಣೆಯೊಂದರಲ್ಲಿ ಜನಸಂಪರ್ಕ ಕಚೇರಿ ತೆರೆದುಕೂತ ಗೂಳಿಹಟ್ಟಿಯಿಂದಾಗಿ ದುರ್ಗದ ರಾಜಕಾರಣದಲ್ಲಿ ಹೊಸದೊಂದು ಸಂಚಲನ ಶುರುವಾಯಿತು. ಅದಾಗಿ ಕೆಲ ದಿನಗಳಲ್ಲೇ ತಾನು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಚಿತ್ರದುರ್ಗದಿಂದ ಸ್ಪರ್ಧಿಸುವುದಾಗಿ ಅನೌನ್ಸ್ ಮಾಡಿದಾಗಲೆ ಅವನ ಜನಸಂಪರ್ಕ 'ಅಂಗಡಿ'ಯ ಹಿಂದಿದ್ದ ಅಸಲಿಯತ್ತು ಬಯಲಾದದ್ದು. ಅದರ ಬೆನ್ನಿಗೇ, ರಾಜಕೀಯ ಸಂತ್ರಸ್ತರ ನಿರಾಶ್ರಿತ ಶಿಬಿರದಂತಾಗಿರುವ ಮುಲಾಯಂ ಸಿಂಗ್‌ರ ಸಮಾಜವಾದಿ ಪಕ್ಷಕ್ಕೆ ಸೇರ್ಪಡೆಯಾಗುವುದಾಗಿ ಬಾಂಬ್ ಸಿಡಿಸಿದ ಗೂಳಿ ತಿಂಗಳೊಪ್ಪತ್ತಿನಲ್ಲಿ ಸೈಕಲ್ ಏರಿಯೇ ಬಿಟ್ಟ.

ಗೂಳಿಹಟ್ಟಿ ಶೇಖರ್‌ನ ರಾಜಕೀಯ ಬದುಕು ಹೀಗೆಲ್ಲಾ ಮರುಹುಟ್ಟು ಪಡೆಯುವ ವೇಳೆಗೆ ಈ ಎಂ.ಎಲ್.ಸಿ ಉಪಚುನಾವಣೆ ಮೊದಲ ಸವಾಲಾಗಿ ಆತನ ಮುಂದೆ ಬಂದಿತ್ತು. ತನ್ನ ರಾಜಕೀಯ ಸ್ಥಿತ್ಯಂತರ ಮಜಬೂತಾಗಿದೆ ಮತ್ತು ಜಿಲ್ಲೆಯ ರಾಜಕಾರಣದಲ್ಲಿ ತಾನಿನ್ನು ಚಲಾವಣೆಯಲ್ಲಿದ್ದೇನೆ ಎಂಬುದನ್ನು ಸಾಬೀತುಪಡಿಸುವುದರ ಜೊತೆಗೆ ಮುಂದಿನ ಲೋಕಸಭಾ ಕನಸಿಗೆ ವೇದಿಕೆಯನ್ನು ಸಿದ್ಧಪಡಿಸಿಕೊಳ್ಳಲು ಈ ಮೈನರ್ ಮಿನಿಕದನವನ್ನು ಗೆದ್ದು ಸದೃಢವಾಗುವ ಅನಿವಾರ್ಯತೆ ಗೂಳಿಹಟ್ಟಿಗೆ ಎದುರಾಗಿತ್ತು. ಆಗ ಆತ ಆಯ್ಕೆ ಮಾಡಿಕೊಂಡಿದ್ದೇ ಈ ರಘು ಆಚಾರ್ ಎನ್ನುವ ಆಸಾಮಿಯನ್ನು. ಈತ ಕ್ಷೇತ್ರಕ್ಕೆ ಅಪರಿಚಿತನಾದರೂ ಖಜಾನೆಯಲ್ಲಿ ಅಪಾರ ಹಣವಿರುವ ಮನುಷ್ಯ. ರಘು ಆಚಾರಿಯ ತಂದೆ ಗೋವಿಂದಾಚಾರ್ಯ ಬೆಂಗಳೂರಿನ ಹಳೆ ವಿಮಾನ ನಿಲ್ದಾಣದ ಕಂಟ್ರಾಕ್ಟರ್ ಆಗಿದ್ದವನು. ಸದ್ಯ ಈತ ಬೆಂಗಳೂರಿನ ಸನ್ ಸಿಟಿ ಅಪಾರ್ಟ್‌ಮೆಂಟ್ಸ್‌ನ ರಿಯಲ್ ಎಸ್ಟೇಟ್ ಮಾಲೀಕ. ಹಿಂದೊಮ್ಮೆ ಕಂಚೀಪುರ ಸಿಮೆಂಟ್ ಫ್ಯಾಕ್ಟರಿಯನ್ನೂ ಆರಂಭಿಸಿದ್ದ. ರಘು ಆಚಾರಿಯ ಸನ್ ಸಿಟಿ ಅಪಾರ್ಟ್‌ಮೆಂಟ್ ನಿರ್ಮಾಣಕ್ಕೆ ಹೊಸದುರ್ಗದಿಂದ ಮರಳು ಜೆಲ್ಲಿ ಸೈಜುಗಲ್ಲುಗಳನ್ನು ಸರಬರಾಜು ಮಾಡಿದ್ದೇ ಈ ಗೂಳಿಹಟ್ಟಿ. ಹಾಗಾಗಿ



ಇವರಿಬ್ಬರದೂ ಹಳೆಯ ದೋಸ್ತಿ. ಹಣವಂತನಲ್ಲದಿದ್ದರೂ ಗೂಳಿಹಟ್ಟಿ ಪಕ್ಷೇತರನಾಗಿ ಚುನಾವಣೆಗೆ ಇಳಿಯುವ ಧೈರ್ಯ ಮಾಡಿದ್ದೇ ಈ ರಘು ಆಚಾರಿಯ ಹಣದ ಬಲದಿಂದ.

ರಘು ಆಚಾರಿಯನ್ನು ಕಣಕ್ಕಿಳಿಸುವ ಗೂಳಿಹಟ್ಟಿಯ ಐಡಿಯಾ ಭರ್ಜರಿಯಾಗೇ ಯಶಸ್ವಿಯಾಗಿದೆ. ಕ್ಷೇತ್ರದಲ್ಲಿ ಅಸ್ತಿತ್ವದಲ್ಲೇ ಇಲ್ಲದ ಸಮಾಜವಾದಿ ಪಾರ್ಟಿಯ ಹೆಸರಲ್ಲಿ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಯಡವಟ್ಟು ಮಾಡಿಕೊಳ್ಳುವುದಕ್ಕಿಂತ ಪಕ್ಷೇತರನನ್ನಾಗಿ ಅಖಾಡಕ್ಕೆ ದಬ್ಬಿ ಗೆಲುವು ದಕ್ಕಿಸಿಕೊಂಡಿದ್ದಾನೆ. ರಘು ಆಚಾರಿಯ ಹಣ ಚುನಾವಣೆಯಲ್ಲಿ ಕೆಲಸ ಮಾಡಿರೋದು ಸುಳ್ಳಲ್ಲ. ಚುನಾವಣೆಗೂ ಹದಿನೈದು ದಿನ ಮೊದಲು ಚಿತ್ರದುರ್ಗದ ರೆಸಾರ್ಟ್ ಒಂದರಲ್ಲಿ ಚಿತ್ರದುರ್ಗ, ಹೊಸದುರ್ಗ, ಮೊಳಕಾಲ್ಮೂರು ಮತ್ತು ಹಿರಿಯೂರು ಭಾಗದ ಗ್ರಾಮ ಪಂಚಾಯ್ತಿ ತಾಲ್ಲೂಕು ಪಂಚಾಯ್ತಿಯ ಸದಸ್ಯರನ್ನೆಲ್ಲ ಕಲೆಹಾಕಿ ಬಾಡೂಟದ ಭರ್ಜರಿ ಪಾರ್ಟಿಕೊಟ್ಟ ರಘು ಆಚಾರಿ ಪ್ರತಿಯೊಬ್ಬರ ಕೈಗೂ 3 ಸಾವಿರ ಟಿಪ್ಸ್ ಇಟ್ಟು ಧನ್ಯೋಸ್ಮಿ ಎಂದಿದ್ದ. ಅದು ಈಗಾತನ ಗೆಲುವಾಗಿ ಹೊರಬಿದ್ದಿದೆ.

ರಘು ಆಚಾರಿಯ ಗೆಲುವಿನಿಂದ ಗೂಳಿಹಟ್ಟಿಯ ಎಂ.ಪಿ ಕನಸಿನ ಹಾದಿ ಮತ್ತಷ್ಟೂ ಸುಗಮವಾದಂತಾಗಿದೆ. ಅಲ್ಲದೆ ಇಂತಹ ಧನಿಕ ಆಸಾಮಿಯನ್ನು ಮುಂದಿಟ್ಟುಕೊಂಡು ಲೋಕಸಭೆಗೆ ಗುರಿ ಇಡಲು ಸಜ್ಜಾಗಿ ಗುಟುರು ಹಾಕುತ್ತಿರುವ ಗೂಳಿಯಿಂದಾಗಿ ಜಿಲ್ಲೆಯ ಇತರೆ ರಾಜಕಾರಣಿಗಳು ಸಣ್ಣಗೆ ಕಂಗಾಲಾಗಿರುವುದು ದಿಟ.

■ಟಿ. ಎನ್. ಷಣ್ಮುಖ



ಸನ್ ಸಿಟಿ ಅಪಾರ್ಟ್‌ಮೆಂಟ್ಸ್

2.. ⏮ ಬಿಡಿ ಚಿತ್ರಗಳು

ಕರ್ನಾಟಕ ವ್ಯಾಪ್ತಿಯಲ್ಲಿ ಹಂಚಿಕೊಂಡಿರುವ ಇನ್ನಿತರ ದಮನಿತ ಹಾಗೂ ಅಲ್ಪಸಂಖ್ಯಾತ ಸಮುದಾಯಗಳ ಆಶಯಗಳಿಗೆ ಜೆಡಿಎಸ್ ದನಿಯಾಗಬೇಕಿದೆ. ಅಧಿಕಾರವಿಲ್ಲದೆ ಆರೆಂಟು ವರ್ಷ ಕಳೆದಿರುವ ಪ್ರಾದೇಶಿಕ ಪಕ್ಷವೊಂದು ತನ್ನ ಅಸ್ತಿತ್ವ ಉಳಿಸಿಕೊಂಡು, ಕಾರ್ಯಕರ್ತರಲ್ಲಿ ಸ್ಥೈರ್ಯ ತುಂಬಿ ಮುಂದುವರೆಯುವುದು ಸುಲಭದ ಮಾತಲ್ಲ. ಇಂತ ಸಮಯದಲ್ಲಿ ಎದುರಾಗುವ ಪ್ರತಿ ಚುನಾವಣೆಯೂ ಜೆಡಿಎಸ್‌ನಂತಹ ಪಕ್ಷಗಳ ಶಕ್ತಿ-ಚೈತನ್ಯವನ್ನೆಲ್ಲಾ ಹೀರಿ ಆರ್ಥಿಕವಾಗಿ ನಿತ್ರಾಣಗೊಳಿಸುತ್ತಾ ಹೋಗುತ್ತದೆ.

ಹಾಗಂತ ಹಣದ ಸಮಸ್ಯೆ ಬಗೆಹರಿಸಿಕೊಳ್ಳಲು ರಾಜ್ಯಸಭಾ ಸೀಟು ಮಾರಿಕೊಳ್ಳುವುದು, ಟಿಕೆಟ್ ಹಂಚುವಾಗ ದುಡ್ಡಿದ್ದವರಿಗೇ ಮಣೆ ಹಾಕಿದರೆ ಅಂತಾ ಪಕ್ಷವನ್ನು ಜನ ನಂಬುವುದಿಲ್ಲ.

ಈಗಿನ ಆಳುವ ಕಾಂಗ್ರೆಸ್ ಪಕ್ಷದ ಎದುರು ಸಮರ್ಥ ವಿರೋಧ ಪಕ್ಷವಾಗಿ ಕಾರ್ಯ ನಿರ್ವಹಿಸುವುದು ಸಹ ಜೆಡಿಎಸ್‌ನ ಬಲವೃದ್ಧಿಗೆ ನೆರವಾಗಬಹುದು. ಸಿದ್ದರಾಮಯ್ಯನವರ ಸರ್ಕಾರ ನೂರು ದಿನ ಪೂರೈಸಿದರೂ ನಿದ್ದೆ ಮಾತ್ರೆ ನುಂಗಿ ಮಲಗಿರುವಂತೆ ಭಾಸವಾಗುತ್ತಿದೆಯೇ ವಿನಃ ಜನಸಾಮಾನ್ಯರಿಗೆ ಇಲ್ಲೊಂದು ಸರ್ಕಾರ ನಡೆಯುತ್ತಿದೆ ಎಂಬ ಭಾವನೆಯೇ ಮೂಡುತ್ತಿಲ್ಲ. ಕಾಂಗ್ರೆಸ್‌ನ ಭ್ರಷ್ಟಾಚಾರದ ಹಳೆಯ ಪರಂಪರೆ ಮತ್ತೆ ತಲೆ ಎತ್ತುತ್ತಿರುವುದು ಕಾಣುತ್ತಿದೆ. ಕೊಂಚ ಗಮನವಿಟ್ಟು ನೋಡಿದರೆ ಕಾರ್ಮಿಕ ಇಲಾಖೆ, ಕೃಷಿ, ಪೊಲೀಸ್ ಇಲಾಖೆಗಳ ಟ್ರಾನ್ಸ್‌ಫರ್ ವ್ಯವಹಾರಗಳಲ್ಲಿ ಕೋಟಿಗಟ್ಟಲೆ ಹಣ ಕೈಬದಲಾಗುತ್ತಿರುವುದು ನಿಮಗೂ ತಿಳಿಯಬಹುದು. ಒಂದೆಡೆ ಕೃಷಿ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಹಾಗೂ ಬೆಂಬಲ ಬೆಲೆಯ ನೆರವು ನೀಡುವ ಮಾತಾಡುತ್ತಿರುವ ಸರ್ಕಾರ ಈಗ ಅವೆಲ್ಲವನ್ನೂ ಅಪ್ರಸ್ತುತಗೊಳಿಸಿ ಖಾಸಗಿ ದಂಧೆಯವರ ಕೈಗೊಪ್ಪಿಸುವ ನೀತಿಗಳನ್ನು ಜಾರಿಗೆ ತರಲು ಹೊರಟಿದೆ.

ಸಮರ್ಥ ವಿರೋಧ ಪಕ್ಷವಾಗಿ ಕೆಲಸ ಮಾಡಲು ನಿಮಗೆ ಇಲ್ಲಿ ಅವಕಾಶಗಳಿವೆ.

ಯಾವುದೇ ರಾಜಕೀಯ ಮೈತ್ರಿಕೂಟದಲ್ಲಿ ಸಹಭಾಗಿ ಪಕ್ಷಗಳ ಬಲಾಬಲಗಳ ಆಧಾರದಲ್ಲೇ ಸ್ಥಾನಮಾನಗಳು ನಿರ್ಧಾರವಾಗುತ್ತವೆ. ಷರತ್ತುಗಳನ್ನು ನಿಮ್ಮ ಪಕ್ಷ ಮುಂದಿಡುವ ಸನ್ನಿವೇಶವಿದ್ದರೆ ಸರಿ. ಇಲ್ಲವಾದರೆ ಬಿಜೆಪಿಯು ಜೆಡಿಎಸ್ ಅನ್ನು 'ವಾತಾಪಿ ಜೀರ್ಣೋಭವ'ದಂತೆ ಕರಗಿಸಿ ನಿರ್ನಾಮ ಮಾಡಿಬಿಡಬಹುದು. 2014ರ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಇರುವ 28 ಸ್ಥಾನಗಳ ಹಂಚಿಕೆ ಹೇಗಾಗಬಹುದೆಂದು ಒಮ್ಮೆ ಯೋಚಿಸಿ ನೋಡಿ.

ಜೆಡಿಎಸ್-ಬಿಜೆಪಿ-ಕೆಜೆಪಿ ಮೈತ್ರಿಕೂಟದಿಂದ ನೀವೆಲ್ಲಾ ಒಗ್ಗಟ್ಟಾಗಿ ಸ್ಪರ್ಧಿಸಿದರೂ ಟಿಕೆಟ್ ಹಂಚಿಕೆಯಲ್ಲಿ ಜನತಾದಳಕ್ಕೆ ಹಾಸನ, ಮಂಡ್ಯ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿಕ್ಕಬಳ್ಳಾಪುರ, ಗುಲ್ಬರ್ಗಾ ಬಿಟ್ಟರೆ ಬೇರೆಡೆ ಸ್ಥಾನ ಬಿಟ್ಟುಕೊಡಲು ಬಿಜೆಪಿ ಒಪ್ಪುವುದಿಲ್ಲ. ಹಾಗೆ ನಿಮಗೆ ಸಿಗುವ ಆರು ಕ್ಷೇತ್ರಗಳಲ್ಲಿ ಮೂರನ್ನೂ ಗೆದ್ದರೂ ನಿಮ್ಮ ಪಕ್ಷದ ಸ್ಥಿತಿ ಮೊದಲಿದ್ದಿದ್ದಕ್ಕಿಂತ ಉತ್ತಮಗೊಳ್ಳುವುದಿಲ್ಲ. ಅಲ್ಲಿಂದಾಚೆಗೆ ದೆಹಲಿ ರಾಜಕೀಯದಲ್ಲಿ ನಿಮ್ಮ ಪಕ್ಷಕ್ಕೆ ಕಿಮ್ಮತ್ತೂ ಸಿಗಲಾರದು. ಹೀಗಿರುವಾಗ ಯಾವ ಪುರುಷಾರ್ಥಕ್ಕೆ ನಿಮಗೆ ಬಿಜೆಪಿ ಜೊತೆಗೆ ಮೈತ್ರಿ ಬೇಕಿದೆ?

ಕುಮಾರಸ್ವಾಮಿಯವರೆ,

'ಮಾಂಸ ತಿನ್ನುವವರ ನಾಲಿಗೆ ಕತ್ತರಿಸುತ್ತೇವೆ' ಎನ್ನುವ ಈಶ್ವರಪ್ಪ, 'ಮುಸ್ಲಿಮರನ್ನು ದೇಶ ಬಿಟ್ಟು ಓಡಿಸಿ' ಎನ್ನುವ ಮೋದಿ, 'ಮೀಸಲಾತಿಯಿಂದ ದೇಶ ಹಾಳಾಗುತ್ತಿದೆ' ಎನ್ನುವ ಆರ್‌ಎಸ್‌ಎಸ್ ಗುಂಪಿನ ಜೊತೆ ಕೈಕುಲುಕುವ ನಿಮ್ಮನ್ನು ಜನ ಖಂಡಿತಾ ತಿರಸ್ಕರಿಸುತ್ತಾರೆಂಬುದು ನಿಮಗೆ ಗೊತ್ತಿರಲಿ.

ಭಾರತ ದೇಶದ ಮುಂದಿನ ಪ್ರಧಾನಿ ಯಾರೆಂಬುದನ್ನು ಜ್ಯೋತಿಷಿಗಳು ಖಂಡಿತಾ ನಿರ್ಧರಿಸಲಾಗುವುದಿಲ್ಲ. ಈ ಮಾತು ಈಗೇಕೆಂದರೆ ದೇವೇಗೌಡರಿಗೆ ಪುನಃ ಪ್ರಧಾನಿಯಾಗುವ ಯೋಗವಿದೆ ಅಂತಾ ಯಾರೋ ಮುಠ್ಠಾಳ ಜ್ಯೋತಿಷಿ ಹೇಳುವ ಮಾತನ್ನು ನಂಬಿ ಆ ಕಾರಣಕ್ಕಾಗಿ ಜೆಡಿಎಸ್ ಅನ್ನು ಬಿಜೆಪಿ ಮೈತ್ರಿಕೂಟದತ್ತ ತಳ್ಳಬೇಡಿ.

ದೇವೇಗೌಡರು ಭಾರತದ ಪ್ರಧಾನಿಯಾದದ್ದು ಆಕಸ್ಮಿಕ ಸಂದರ್ಭದಲ್ಲಿ. ಅಧಿಕಾರ ಸಿಕ್ಕಷ್ಟು ಕಾಲ ಅವರು ಒಳ್ಳೆಯ ಸರ್ಕಾರ ಕೊಡಲು ಪ್ರಯತ್ನಿಸಿದ್ದು ನಿಜ. ಆದರೆ ರಾಜಕೀಯದಲ್ಲಿ ಆ ತರದ ಆಕಸ್ಮಿಕ ಸಂದರ್ಭಗಳು ಪ್ರತಿ ಚುನಾವಣೆಯಲ್ಲೂ ಉದ್ಭವಿಸುವುದಿಲ್ಲ. ನ್ಯಾಷನಲ್ ಪಾಲಿಟಿಕ್ಸ್‌ನಲ್ಲಿ ಮೈತ್ರಿಕೂಟದ ಸರ್ಕಾರಗಳಲ್ಲಿ ಎರಡಂಕಿಯ ಸ್ಥಾನಬಲ ಹೊಂದಿರುವವರಿಗೆ ಕೊಂಚ ಮರ್ಯಾದೆ ಸಿಗುತ್ತದೆ. 30-40 ಸ್ಥಾನಬಲ ಇರುವವರೇ ಅಲ್ಲಿ Big player ಆಗಿರುತ್ತಾರೆ. ಸದ್ಯ ಭವಿಷ್ಯದಲ್ಲಿ ಜೆಡಿಎಸ್ 10ಕ್ಕಿಂತ ಹೆಚ್ಚು ಸಂಸತ್ ಸ್ಥಾನ ಗೆಲ್ಲುತ್ತದೆಂದರೆ ಸ್ವತಃ ನೀವು ನಂಬಲಾರಿರಿ ಅಲ್ಲವೇ?

ಬಿಜೆಪಿ ಜೊತೆ ಸೇರಿದರೂ ಇದು ಸಾಧ್ಯವಿಲ್ಲ ಎಂಬುದು ಖಚಿತ. ಹೀಗಿರುವಾಗ ಕರ್ನಾಟಕದಲ್ಲಿ ಜೆಡಿಎಸ್‌ನ ಅಸ್ತಿತ್ವವನ್ನೇ ಷಣ್ಡುವ ರೀತಿಯಲ್ಲಿ ಬಿಜೆಪಿಗಳ ಕೈಕುಲುಕುವ ದೌರ್ಭಾಗ್ಯ ನಿಮಗೇಕೆ?


ಚುನಾವಣೆಯ ಸಮಯದಲ್ಲಿ ಅವಕಾಶವಾದಿ ರಾಜಕೀಯ ಮಾಡುವವರು, ಸವಾಲುಗಳು ಎದುರಾದಾಗ ಧೈರ್ಯ ಕಳೆದುಕೊಂಡು ಹತಾಶೆಯ ನಿರ್ಧಾರ ಕೈಗೊಳ್ಳುವವರು, ಪವರ್ ಪಾಲಿಟಿಕ್ಸ್‌ನಲ್ಲಿ ಬದುಕುಳಿಯಲಾರರು.

ಕರ್ನಾಟಕಕ್ಕೆ ಕಾಂಗ್ರೆಸ್-ಬಿಜೆಪಿಗಿಂತ ಭಿನ್ನವಾಗಿರುವ ಅವೆರಡೂ ಪಕ್ಷಗಳಿಂದ ಸಮಾನ ಅಂತರವಿಟ್ಟುಕೊಂಡು ರಾಜಕೀಯ ನಡೆಸುವ ಇನ್ನೊಂದು ಪಕ್ಷ ಬೇಕೇಬೇಕು.

ಆ ಪಕ್ಷ ಜಾತ್ಯತೀತ ಜನತಾದಳ ಆಗಿರಬೇಕು ಎಂಬುದೆ ನಮ್ಮಂತ ಸಾಮಾನ್ಯರ ನಿರೀಕ್ಷೆ.

ಜನರ ನಿರೀಕ್ಷೆಗಳನ್ನು ನೀವು ನಿರ್ಲಕ್ಷಿಸುವುದಿಲ್ಲ ಎಂಬ ನಂಬಿಕೆ ನಮಗಿದೆ. ■


ಲೋಕೇಶ್


ಸಿದ್ದರಾಜು


ಬೋರೇಗೌಡ

ಮಂಡ್ಯ ನಗರಸಭೆ

ಅಧ್ಯಕ್ಷಗಾದಿಗೇರಲು ಪೈಪೋಟಿ

ಮಂಡ್ಯ ನಗರಸಭೆ ಅಧ್ಯಕ್ಷ ಸ್ಥಾನ ಸಾಮಾನ್ಯ ಹಾಗೂ ಉಪಾಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆಗೆ ಮೀಸಲಾಗಿದ್ದು ಗದ್ದುಗೆ ಏರಲು ಪೈಪೋಟಿ ಶುರುವಾಗಿದೆ. 35 ಸದಸ್ಯ ಬಲದ ಮಂಡ್ಯ ನಗರಸಭೆಯಲ್ಲಿ ಕಾಂಗ್ರೆಸ್-15, ಪಕ್ಷೇತರ-10, ಜೆಡಿಎಸ್-9 ಹಾಗೂ ಬಿಜೆಪಿ-1 ಸ್ಥಾನಗಳಲ್ಲಿ ಗೆಲ್ಲುವ ಮೂಲಕ ಯಾವೊಂದು ಪಕ್ಷವೂ ಸ್ಪಷ್ಟ ಬಹುಮತ ಗಳಿಸಲು ಸಾಧ್ಯವಾಗಿಲ್ಲ. ನಗರಸಭೆಯಲ್ಲಿ ಅಧಿಕಾರ ಹಿಡಿಯಲು 19 ಸದಸ್ಯ ಬಲಬೇಕು. ಶಾಸಕ ಅಂಬರೀಶ್ ಹಾಗೂ ಸಂಸದೆ ರಮ್ಯಾ ಸೇರಿದರೂ ಕಾಂಗ್ರೆಸ್ ಬಲ ಹದಿನೇಳಾಗಲಿದೆ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿರುವುದರಿಂದ ಪಕ್ಷೇತರರನ್ನು 'ಕೈ' ವಶಮಾಡಿಕೊಂಡು ಕಾಂಗ್ರೆಸ್ ನಗರಸಭೆಯ ಅಧಿಕಾರ ಹಿಡಿಯುವುದು ಬಹುತೇಕ ನಿಶ್ಚಿತ.

ಕಾಂಗ್ರೆಸ್‌ನ ಅಧಿಕಾರ ಗ್ರಹಣದ ಸಂಭಾವ್ಯತೆ ಸ್ಪಷ್ಟವಾಗುತ್ತಿದ್ದಂತೆಯೇ ಅಧ್ಯಕ್ಷಗಾದಿಗೇರಲು ಕಾಂಗ್ರೆಸ್ ಸದಸ್ಯರಲ್ಲೇ ಕಚ್ಚಾಟ ನಡೆಯುತ್ತಿದೆ. ಕೈ ಚಿಹ್ನೆಯಡಿ ಸ್ಪರ್ಧಿಸಿ ಗೆದ್ದಿರುವ ಹೊಸಹಳ್ಳಿ ಬೋರೇಗೌಡ, ಲೋಕೇಶ್, ರಾಮಲಿಂಗಯ್ಯ, ಅನಿಲ್‌ಕುಮಾರ್ ಪೈಪೋಟಿಗೆ ಬಿದ್ದಿರುವ ವೇಳೆಯಲ್ಲೆ ಪಕ್ಷೇತರನಾಗಿ ಗೆದ್ದು ಅಂಬರೀಶ್ ಸಮ್ಮುಖದಲ್ಲಿ ಕಾಂಗ್ರೆಸ್ ಸೇರಿದ 28ನೇ ವಾರ್ಡ್‌ನ ಸಿದ್ದರಾಜು ರಿಯಲ್ ಎಸ್ಟೇಟ್ ದುಡ್ಡು ಸುರಿದು ಪಕ್ಷೇತರರನ್ನು ಖರೀದಿಸಿ ಅಧ್ಯಕ್ಷನಾಗುವ ಕಸರತ್ತು ನಡೆಸಿದ್ದಾರೆ. ಕಾಂಗ್ರೆಸ್ ಟಿಕೆಟ್ ಸಿಗದೆ ಪಕ್ಷೇತರನಾಗಿ ನಿಂತು ಗೆದ್ದಿರುವ ಸಿದ್ದರಾಜು ಕಡಿಮೆ ಆಸಾಮಿಯೇನಲ್ಲ, ತನ್ನಲ್ಲಿರುವ ರಿಯಲ್ ಎಸ್ಟೇಟ್ ಹಾಗೂ ಬಡ್ಡಿ ದುಡ್ಡಿನಿಂದಲೇ ವೋಟಿಗೆ ಸಾವಿರದಂತೆ ಸುರಿದು ಕಾಂಗ್ರೆಸ್ ಹಾಗೂ ಜೆಡಿಎಸ್ ಅಭ್ಯರ್ಥಿಗಳ ಠೇವಣಿ ಕಳೆದು ಗೆದ್ದು ಬಂದವ. ಮಾಂಡವ್ಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ, ಮಾಂಡವ್ಯ ಗೃಹ ನಿರ್ಮಾಣ ಸಹಕಾರ ಸಂಘದ ಮೂಲಕ ಕೋಟ್ಯಾಂತರ ಹಣ ಮಾಡಿರುವ ಸಿದ್ದರಾಜು ಗೆದ್ದ ಕೂಡಲೇ ಅಂಬಿ ಸಮ್ಮುಖದಲ್ಲಿ ಕಾಂಗ್ರೆಸ್ ಸೇರಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅಂಬಿ ಪರ ಕೆಲಸ ಮಾಡಿದ ಸಿದ್ದರಾಜು ಲೋಕಸಭಾ ಉಪಚುನಾವಣೆಯಲ್ಲಿ ರಮ್ಯಾ ಪರ ಕೆಲಸ ಮಾಡಿ ಇಬ್ಬರ ವಿಶ್ವಾಸವನ್ನೂ ಗಳಿಸಿದ್ದಾರೆ. ತನ್ನಲ್ಲಿರುವ ರಿಯಲ್ ಎಸ್ಟೇಟ್ ದುಡ್ಡಿನಿಂದಲೇ ಪಕ್ಷೇತರರಿಗೆ ಗಾಳ ಹಾಕಿರುವ ಸಿದ್ದರಾಜು ಅಧ್ಯಕ್ಷ ಗಾದಿಯ ರೇಸ್‌ನಲ್ಲಿರುವ ಹೊಸಹಳ್ಳಿ ಬೋರೇಗೌಡ ಹಾಗೂ ಲೋಕೇಶ್‌ಗೆ ನೀರು ಕುಡಿಯುವಂತೆ ಮಾಡಿದ್ದಾರೆ.

ಸಿದ್ದರಾಜು ಮನಿ ಪವರ್

ರೊಕ್ಕ ಸುರಿದೇ ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಬರುವಂತೆ ಮಾಡಿಸಿಕೊಂಡು ಬಂದಿದ್ದೇನೆಂದು ಡಂಗೂರ ಬಾರಿಸುತ್ತಿರುವ ಸಿದ್ದರಾಜು ತನ್ನ 'ಮನಿಪವರ್'ನಿಂದ ಉಳಿದ ಆಕಾಂಕ್ಷಿಗಳ ನಿದ್ದೆಗೆಡಿಸುತ್ತಿದ್ದಾರೆ. ಸಿದ್ದರಾಜು ಬೆಂಬಲಿಸುವ ಸದಸ್ಯರಿಗೆ ಕೈತುಂಬಾ ಕ್ಯಾಶು, ಕಾರು ನೀಡುವುದಾಗಿ ಆತನ ಭಟ್ಟಂಗಿಗಳು ಆಗಲೇ ಪಕ್ಷೇತರ ಸದಸ್ಯರನ್ನು ಕುದುರಿಸಲು ಮುಂದಾಗಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್ ಸೇರಿದಂತೆ ರಾಜ್ಯ ಕಾಂಗ್ರೆಸ್‌ನ ಹಲವು ನಾಯಕರನ್ನು ಈಗಾಗಲೇ ಸಂಪರ್ಕಿಸಿರುವ ಸಿದ್ದರಾಜು ನಗರಸಭೆ ಅಧ್ಯಕ್ಷರಾಗಲು ತನ್ನಲ್ಲಿರುವ ಕಾಂಚಾಣದ ಮೊರೆಹೋಗಿದ್ದಾರೆ.

ಸತತ ಮೂರು ಬಾರಿ ಕಾಂಗ್ರೆಸ್‌ನಿಂದ ಗೆದ್ದಿರುವ ಹೊಸಹಳ್ಳಿ ಬೋರೇಗೌಡ, ಕಾಂಗ್ರೆಸ್ ಅಧಿಕಾರಕ್ಕೆ ಬಂದಿರುವ ಸಂದರ್ಭದಲ್ಲಿ ಅಧ್ಯಕ್ಷನಾಗುವ ಕನಸು ಕಾಣುತ್ತಿದ್ದಾರೆ. ಅಂಬರೀಶ್ ಶಿಷ್ಯನಾಗಿ ಗುರುತಿಸಿಕೊಂಡಿರುವ ಹೊಸಹಳ್ಳಿ ಬೋರೇಗೌಡ 'ನನಗಲ್ಲದೆ ಇನ್ಯಾರಿಗೆ ಅಧ್ಯಕ್ಷಸ್ಥಾನ' ಎನ್ನುತ್ತಾ ರಾಜ್ಯ ಕಾಂಗ್ರೆಸ್ ನಾಯಕರಿಗೆ ದುಂಬಾಲು ಬಿದ್ದಿದ್ದಾರೆ. ಆರಂಭದಿಂದಲೂ ಕಾಂಗ್ರೆಸ್‌ನ ನಿಷ್ಠಾವಂತ ಕಾರ್ಯಕರ್ತನಾಗಿ ಬೆಳೆದುಬಂದಿರುವ ಹೊಸಹಳ್ಳಿ ಬೋರೇಗೌಡರಿಗೆ ದುಡ್ಡು ಖರ್ಚು ಮಾಡುವ ಶಕ್ತಿಯಿಲ್ಲ. ವಿದ್ಯಾರ್ಥಿ ನಾಯಕನಾದ ದಿನದಿಂದಲೂ ಕಾಂಗ್ರೆಸ್ ಪಕ್ಷಕ್ಕಾಗಿ ದುಡಿದ ತನ್ನ ಸೇವೆಯನ್ನು ಪರಿಗಣಿಸಿ ವರಿಷ್ಠರು ಅಧ್ಯಕ್ಷಸ್ಥಾನ ನೀಡುತ್ತಾರೆಂಬ ಭರವಸೆ ಇಟ್ಟುಕೊಂಡಿರುವ ಬೋರೇಗೌಡ 'ಅಂಬರೀಶಣ್ಣ ಎಂದಿಗೂ ನನ್ನ ಕೈಬಿಡುವುದಿಲ್ಲ' ಎಂಬ ಕನವರಿಕೆಯಲ್ಲೆ ಕಣದಲ್ಲಿದ್ದಾರೆ. ಕೆಲವು ದೌರ್ಬಲ್ಯಗಳಿರುವ ಹೊಸಹಳ್ಳಿ ಬೋರೇಗೌಡರನ್ನು ಅಧ್ಯಕ್ಷಗಾದಿಯಲ್ಲಿ ಕೂರಿಸಿ ಹಿಂದಿನಿಂದಲೇ ಆಡಳಿತ ನಡೆಸುವ ದುರಾಲೋಚನೆ ಹೊತ್ತ, ಈಗಾಗಲೇ ನಗರಸಭೆಯಲ್ಲಿ ಲೂಟಿ ಮಾಡಿ ರುಚಿ ಕಂಡಿರುವ ಒಂದಿಬ್ಬರು ಸದಸ್ಯರು ಬೋರೇಗೌಡರನ್ನು ಬೆಂಬಲಿಸುವ ಮಾತುಗಳು ಕೇಳಿಬರುತ್ತಿವೆ.

ಹಾಗೆಯೇ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಆತ್ಮಾನಂದರ ಗುಂಪಿನಲ್ಲಿ ಗುರುತಿಸಿಕೊಂಡಿರುವ ಲೋಕೇಶ್ ಎರಡನೇ ಬಾರಿ ಸದಸ್ಯರಾಗಿದ್ದು, ಅಧ್ಯಕ್ಷ ಸ್ಥಾನಕ್ಕೆ ಪ್ರಬಲ ಪೈಪೋಟಿ ನೀಡುತ್ತಿದ್ದಾರೆ. ಆತ್ಮಾನಂದ ಹಾಗೂ ಅಂಬರೀಶ್ ಸಂಬಂಧ ಹಳಸಿರುವುದರಿಂದ ಲೋಕೇಶ್‌ಗೆ ಸ್ವಲ್ಪ ತೊಡಕಾಗಬಹುದು. ಇಷ್ಟಾದರೂ ಅಂಬಿ ಒಲವನ್ನು ಗಳಿಸಿ ಅಧ್ಯಕ್ಷರಾಗಲು ಹವಣಿಸುತ್ತಿರುವ ಲೋಕೇಶ್ ಬಂಡವಾಳ ಹಾಕಲೂ ಸಿದ್ಧರಾಗಿದ್ದಾರೆ. ಸಿದ್ದರಾಜು ಕೊಟ್ಟಷ್ಟು ರೊಕ್ಕ ಕೊಡದಿದ್ದರೂ ತಾನೂ ಒಂದಷ್ಟು ಕೊಡುತ್ತೇನೆಂದು ನಿಂತಿರುವ ಲೋಕೇಶ್ ಪರ ಬಂಡವಾಳ ಹೂಡಲು ಕೆಲವರು ತೆರೆಮರೆಯಲ್ಲಿ ಕಾರ್ಯಾಚರಣೆಗಿಳಿದಿದ್ದಾರೆ. ಸಿದ್ದರಾಜು ಸುರಿಯುವ ಹಣದಲ್ಲಿ ಅರ್ಧದಷ್ಟನ್ನಾದರೂ ಸುರಿದು ಅಧ್ಯಕ್ಷರಾಗಲು ಹೊರಟಿರುವ ಲೋಕೇಶ್ ಜಿಲ್ಲಾಧ್ಯಕ್ಷ ಆತ್ಮಾನಂದ ಹಾಗೂ ಎಸ್.ಎಂ.ಕೃಷ್ಣರ ಆಶೀರ್ವಾದ ನಂಬಿಕೊಂಡಿದ್ದಾರೆ.

ಈ ಮಧ್ಯೆ ಜೆಡಿಎಸ್‌ನಲ್ಲಿದ್ದು ಕಳೆದ ಬಾರಿ ಭರ್ತಿ ಎರಡೂವರೆ ವರ್ಷ ನಗರಸಭೆ ಅಧ್ಯಕ್ಷರಾಗಿ ಅಧಿಕಾರ ನಡೆಸಿದ್ದ ಅರುಣ್‌ಕುಮಾರ್ ಈಗ ಪಕ್ಷೇತರನಾಗಿ ಗೆದ್ದು ಅಂಬಿ ಪಾಳೆಯದಲ್ಲಿ ಗುರುತಿಸಿಕೊಂಡಿದ್ದಾರೆ. ಹಿಂದುಳಿದ ವರ್ಗಕ್ಕೆ ಸೇರಿದ ಒಂದಷ್ಟು ಸದಸ್ಯರನ್ನು ತನ್ನ ಜೊತೆಗಾಕಿಕೊಂಡು ತಮಗೂ 10 ತಿಂಗಳಾದರೂ ಅಧ್ಯಕ್ಷಗಾದಿ ನೀಡಿ ಎಂದು ಅಂಬರೀಶ್‌ಗೆ ಮನವಿ ಮಾಡಿದ್ದಾರೆ. ಈಗಾಗಲೇ ಅಧ್ಯಕ್ಷನಾಗಿ ಅಧಿಕಾರ ಅನುಭವಿಸಿರುವ ಅರುಣ್‌ಕುಮಾರ್‌ಗೆ ಮತ್ತೊಮ್ಮೆ ಛಾನ್ಸ್ ಸಿಗುವುದು ಕಷ್ಟ. ಆದರೂ ನನ್ನದೊಂದು ಆಟ ಇರಲಿ ಅಂತ ಹಾಕಿದ್ದಾರೆ.

ಒಟ್ಟಾರೆ ಅಧ್ಯಕ್ಷಗಾದಿಯ ರೇಸ್‌ನಲ್ಲಿ ಸಿದ್ದರಾಜು ಹೆಸರೇ ಸಾಕಷ್ಟು ಮುಂದಿದೆ. ತನ್ನಲ್ಲಿರುವ ಮನಿಪವರ್‌ನಿಂದ ನಗರಸಭೆ ಅಧ್ಯಕ್ಷರಾಗಲು ಹೊರಟಿರುವ ಸಿದ್ದರಾಜುನನ್ನು ಹಿಂದೆ ಹಾಕಲು ಹೊಸಹಳ್ಳಿ ಬೋರೇಗೌಡ, ಲೋಕೇಶ್ ಪ್ರಬಲ ಪೈಪೋಟಿ ನೀಡುತ್ತಿದ್ದಾರೆ.

ಇನ್ನು ಉಪಾಧ್ಯಕ್ಷ ಸ್ಥಾನ, ಸಾಮಾನ್ಯ ಮಹಿಳೆಗೆ ಮೀಸಲಾಗಿರುವುದರಿಂದ ಷಹಜಹಾನ್, ಸುಮಾರಾಣಿ ಹಾಗೂ ಗುರುವಮ್ಮ ಹೆಸರುಗಳು ಕೇಳಿಬರುತ್ತಿವೆ. ಕಾಂಗ್ರೆಸ್ ಮುಖಂಡ ಮುನಾವರ್‌ಖಾನ್ ತನ್ನಲ್ಲಿರುವ ದುಡ್ಡಿನ ಬಲ ಹಾಗೂ ರಾಜ್ಯ ಕಾಂಗ್ರೆಸ್ ಮುಖಂಡರ ಗೆಳೆತನದ ಕಾರಣ ದಿಢಾಗಿ ತನ್ನ ಪತ್ನಿ ಷಹಜಹಾನ್‌ರನ್ನು ಉಪಾಧ್ಯಕ್ಷ ಸ್ಥಾನದಲ್ಲಿ ಕೂರಿಸಲು ಯತ್ನಿಸುತ್ತಿದ್ದಾರೆ. ನಿಷ್ಠಾವಂತ ಕಾಂಗ್ರೆಸ್ಸಿಗನಾಗಿರುವ ಮುನಾವರ್‌ಖಾನ್, ಅಂಬರೀಶ್ ಜೊತೆ ಉತ್ತಮ ಬಾಂಧವ್ಯವನ್ನೇ ಹೊಂದಿರುವುದರಿಂದ ಆತನ ಪತ್ನಿ ಷಹಜಹಾನ್ ಉಪಾಧ್ಯಕ್ಷರಾಗುವ ಸಾಧ್ಯತೆಯೇ ಹೆಚ್ಚು. ■

ನಗರಸಭೆಯಲ್ಲ...ನರಕಸಭೆ

ಮಂಡ್ಯ ನಗರಸಭೆ ಕಳೆದ ಎರಡು ಅವಧಿಯಿಂದ ನರಕಸಭೆಯಾಗಿ ಪರಿವರ್ತಿತ್ತಿದೆ. ಬಂಡ ಸದಸ್ಯರಲ್ಲಿ ಹೆಚ್ಚಿನವರು ತಾನೇನು ಮಾಡುತ್ತೇನೆ ಎಷ್ಟು ಪ್ರಮಾಣದಷ್ಟು ತನಗೇನು ಸಿಗುತ್ತದೆ, ಏನೆಲ್ಲಾ ಗೆಬರಬಹುದು, ಯಾರ ಪರ ನಿಂತರೆ ಎಷ್ಟು ಹಣ ಸಿಗುತ್ತದೆ ಎಂಬ ಲಾಭ-ನಷ್ಟದ ಲೆಕ್ಕಾಚಾರದಲ್ಲಿಯೇ ತೊಡಗಿದ್ದವರು. ಆಡಳಿತ ಪಕ್ಷದ 13 ಮಂದಿ ಸದಸ್ಯರೇ ಗಣಿಕಳ್ಳ ಜನಾರ್ದನರೆಡ್ಡಿ ಎಸೆದ ಎಂಜಲು ಕಾಸಿಗೆ ತಮ್ಮನ್ನೇ ಮಾರಿಕೊಂಡು ಸದಸ್ಯತ್ವ ಕಳೆದುಕೊಂಡು ಸುದ್ದಿಯಾಗಿದ್ದರು. ಅರುಣ್‌ಕುಮಾರ್ ಅಧ್ಯಕ್ಷನಾದ ಅವಧಿಯಲ್ಲಿ ಸ್ವಪಕ್ಷೀಯರೇ ಪ್ರತಿನಿತ್ಯ ಆರೋಪ-ಪ್ರತ್ಯಾರೋಪದಲ್ಲಿ ತೊಡಗಿದ್ದರಿಂದ ಆಗಿನ ರಾಜ್ಯ ಸರ್ಕಾರ 60 ಕೋಟಿ ರೂ. ಅನುದಾನ ನೀಡಿದರೂ ಅಭಿವೃದ್ಧಿ ಕಾಮಗಾರಿಗಳು ನಡೆಯದೆ ಜನರ ತಿರಸ್ಕಾರಕ್ಕೆ ಕಾರಣವಾಗಿತ್ತು. ಪ್ರತಿ ಸಾಮಾನ್ಯ ಸಭೆಯಲ್ಲೂ ಅಧ್ಯಕ್ಷರ ಪರವಾಗಿ ಮಾತನಾಡಲು ಕೆಲವು ಸದಸ್ಯರಿಗೆ ಪರ್ಸೆಂಟೇಜ್ ಫಿಕ್ಸ್ ಮಾಡಲಾಗುತ್ತಿತ್ತು. ಕಾಸು ಕೊಟ್ಟರೆ ಯಾರ ಪರವಾಗಿ ಬೇಕಾದರೂ ನಿಲ್ಲುವಂತಹ ಭಂಡ ಸದಸ್ಯರಿಂದಾಗಿ ಆಡಳಿತ ಪಕ್ಷದವರ್‍ಯಾರು, ವಿರೋಧ ಪಕ್ಷದವರ್‍ಯಾರು ಎಂಬುದೆ ಮಿಲಿಯನ್ ಡಾಲರ್ ಪ್ರಶ್ನೆಯಂತಾಗಿತ್ತು.

ಈ ಬಾರಿಯೂ ಕಾಸು ಚೆಲ್ಲಿ ಕೋಟು ಕೊಯ್ಯುವ ಮಂದಿಯೇ ನಗರಸಭೆ ಗದ್ದುಗೆಯೇರಲು ಪ್ರಯತ್ನಿಸುತ್ತಿದ್ದಾರೆ. ಒಂದು ವೇಳೆ ಹಣವಿದ್ದವರಿಗೇ ಅಂಬರೀಶ್ ಮಣೆ ಹಾಕಿದರೆ ನಗರಸಭೆ ಕಾಂಗ್ರೆಸ್ ಅವಧಿಯಲ್ಲೂ ನರಕಸಭೆಯಾಗುವುದರಲ್ಲಿ ಯಾವ ಅನುಮಾನವೂ ಇಲ್ಲ.

ಓದುಗರಲ್ಲಿ ಒಂದು ಮನವಿ...

'ನಮಗೆ ಪತ್ರಿಕೆ ಸರಿಯಾಗಿ ಸಿಗುತ್ತಿಲ್ಲ' ಎಂಬ ಕೆಲ ಓದುಗರ ಆಕ್ಷೇಪಗಳು ಆಗಾಗ್ಗೆ ನಮ್ಮ ಕಚೇರಿತನಕ ತಲುಪುತ್ತಿದೆ. ಲಂಕೇಶ್‌ಗೆ ಎಲ್ಲಾ ಜಿಲ್ಲಾ, ತಾಲ್ಲೂಕು ಹಾಗೂ ಪುಟ್ಟ ಟೌನ್ ಸೆಂಟರ್‌ಗಳೂ ಸೇರಿದಂತೆ ಇನ್ನೂರೈವತ್ತಕ್ಕೂ ಹೆಚ್ಚು ವಿತರಣಾ ಏಜೆಂಟರಿದ್ದಾರೆ. ಅಂತಹ ಸ್ಥಳಗಳಲ್ಲಿ ಓದುಗರಿಗೆ ಪತ್ರಿಕೆ ಸುಲಭ ವಾಗಿ ಲಭ್ಯವಿದೆ. ಆದರೆ ಪೇಟೆಗಳಿಂದ ಕೊಂಚ ದೂರವಿರು ವವರಿಗೆ ಹಾಗೂ ಆಗಾಗ್ಗೆ ಪೇಟೆಯತ್ತ ಬರಲಾಗದ, ಕೊಂಚ 'ಇಂಟೀರಿಯರ್' ಏರಿಯಾಗಳಲ್ಲಿ ಇರುವವರಿಗೆ ನಿಯಮಿತವಾಗಿ 'ಲಂಕೇಶ್' ಪಡೆಯುವುದು ಸ್ವಲ್ಪ ಕಷ್ಟವಾಗುತ್ತಿರಲೂಬಹುದು. ಇದಲ್ಲದೆ ಅನೇಕ ಊರುಗಳಲ್ಲಿ ಬಸ್ ಸ್ಟ್ಯಾಂಡ್ ನವೀಕರಣ, ಹೊಸ ನಿಲ್ದಾಣಗಳ ನಿರ್ಮಾಣದಿಂದಾಗಿ ಅಲ್ಲಿದ್ದ ಪತ್ರಿಕಾ ಸ್ಟಾಲ್‌ಗಳೂ ಕಾಣೆಯಾಗಿವೆ. ಇದರಿಂದಾಗಿ ಕೆಲ ಪುಟ್ಟ ಪಟ್ಟಣಗಳಲ್ಲೂ ತಾತ್ಕಾಲಿಕವಾಗಿ 'ಲಂಕೇಶ್' ವಿತರಣೆಗೆ ಅಡಚಣೆಯಾಗುತ್ತಿದೆ. ಇದಕ್ಕಿರುವ ಸದ್ಯದ ಪರಿಹಾರವೆಂದರೆ ಪತ್ರಿಕೆಯ ಚಂದಾದಾರರಾಗುವುದು.

ಚಂದಾ ವಿವರ

ವಾರ್ಷಿಕ	ರೂ. 700
ಒಂದೂವರೆ ವರ್ಷಕ್ಕೆ	ರೂ. 1000
ಎರಡು ವರ್ಷಕ್ಕೆ	ರೂ. 1400

- ಹೀಗೆ ಚಂದಾ ಹಣವನ್ನು 'ಲಂಕೇಶ್ ಮೀಡಿಯಾ' ಹೆಸರಲ್ಲಿ ಡಿಡಿ/ಚೆಕ್/ಎಂಒ ಮೂಲಕ ಕಳುಹಿಸಿದರೆ 'ಲಂಕೇಶ್' ಅನ್ನು ನಾವೇ ಕಚೇರಿಯಿಂದ ನೇರವಾಗಿ ಓದುಗರಿಗೆ ಅಂಚೆ ಮೂಲಕ ತಲುಪಿಸುತ್ತೇವೆ. ನಿತ್ಯದ ಕೆಲಸಗಳ ಗದಿಬಡಿಯಲ್ಲಿ ಮ್ಯಾಗಜಿನ್ ಸ್ಟಾಲ್ ಹುಡುಕಿಕೊಂಡು ಹೋಗಲಾಗದ ಓದುಗರೂ ಈ ಸೌಲಭ್ಯ ಬಳಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ ವ್ಯವಸ್ಥಾಪಕರು: 9880302817 080-26676427 ಅನ್ನು ಸಂಪರ್ಕಿಸಿ. ಚಂದಾ ಹಣ ಕಳುಹಿಸುವಾಗ ನಿಮ್ಮ ಹೆಸರು, ವಿಳಾಸ, ಫೋನ್ ನಂಬರ್ ಅನ್ನು ಸ್ಪಷ್ಟವಾಗಿ ಬರೆಯಿರಿ.

- ವ್ಯವಸ್ಥಾಪಕರು, ಲಂಕೇಶ್ ಮೀಡಿಯಾ

ಅಪಹರಣಗೊಂಡ ಆ 31 ಬಾಲಕಿಯರು ಹೇಳಿದ್ದೇನು?

ವಿಕಾರಿ ಕಿಡ್ನಾಪರ್



ಜನಾರ್ದನಾಚಾರಿ

ದಂಡುಪಾಳ್ಯದ ನರಹಂತಕರು, ರಕ್ತ ಪಿಪಾಸು ರೇಪಿಸ್ಟ್ ಉಮೇಶ್ ರೆಡ್ಡಿ, ಸರಣಿ ಹಂತಕರಾದ ಶ್ಯಾಮ್ ಮತ್ತು ರವಿ, ಬೀದಿ ವೇಶ್ಯೆಯರನ್ನೇ ಕರೆದೊಯ್ದು ಕೊಲ್ಲುತ್ತಿದ್ದ ವಿಕೃತಕಾಮಿ ನಾಗರಾಜ- ಹೀಗೆ ಚಿತ್ರವಿಚಿತ್ರ ಸೈಕೋಪಾತ್‌ಗಳು, ವಿಕೃತರು, ಸರಣಿ ಹಂತಕರನ್ನೆಲ್ಲ ಕಂಡ ಕರ್ನಾಟಕದ ಜನಕ್ಕಿದು ಅರ್ಥವಾಗದ ವಿಕಾರ-

ಈತನಕ ಈತನಿಂದ ಅಪಹರಣಕ್ಕೀಡಾದ ಮಕ್ಕಳ ಒಟ್ಟೂ ಸಂಖ್ಯೆಯೇ ಮೂವತ್ತೊಂದು- ಹೀಗೆ ಮಕ್ಕಳನ್ನು ಅಪಹರಿಸಿ ಅವರ ಪೋಷಕರಿಂದ ಲಕ್ಷಗಟ್ಟಲೆ ದುಡ್ಡು ಸುಲಿಯುತ್ತಾನಾ ಎಂದರೆ ಅದೂ ಇಲ್ಲ, ಕಿಡ್ನಾಪ್ ಮಾಡಿದ್ದೆಲ್ಲ ಹೆಣ್ಣು ಮಕ್ಕಳೆ, ಅದೂ 9 ರಿಂದ 14ರ ಒಳಗಿನ ಅಪ್ರಾಪ್ತ ಹೆಣ್ಣು ಮಕ್ಕಳು. ಬಲವಂತವಾಗಿ ಕಿಡ್ನಾಪ್ ಮಾಡಿದ್ದೂ ಇಲ್ಲ, ಪ್ರತಿ ಮಗುವನ್ನೂ ಪುಸಲಾಯಿಸಿ ಮನವೊಲಿಸಿಯೇ ಕರೆದೊಯ್ದಿದ್ದಾನೆ. ಕೇವಲ ಹೆಣ್ಣು ಮಕ್ಕಳನ್ನಷ್ಟೇ ಕಿಡ್ನಾಪ್ ಮಾಡುತ್ತಾನೆಂದರೆ ಇವನೊಬ್ಬ ವಿಕೃತಕಾಮಿ ಅಥವಾ ಶಿಶುಕಾಮಿಯಾಗಿರಬೇಕೆಂದೇ ಎಲ್ಲರೂ ಲೆಕ್ಕ ಹಾಕುತ್ತಾರಲ್ಲವೆ? ಆದರೆ ಕರೆದೊಯ್ದ ಯಾವ ಬಾಲಕಿಯ ಮೇಲೂ ಅತ್ಯಾಚಾರ ನಡೆಸಿದ ಲಕ್ಷಣಗಳಿಲ್ಲ; ಒಂದೆರಡು ಅನುಮಾನಾಸ್ಪದ ಲೈಂಗಿಕ ವಿಕೃತಿಯ ಪ್ರಕರಣಗಳನ್ನು ಹೊರತುಪಡಿಸಿದರೆ ಬಹುತೇಕ ಅಪಹರಣಗಳಲ್ಲಿ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆದ ಉದಾಹರಣೆಯಿಲ್ಲ, ಹೋಗಲಿ, ಮಕ್ಕಳ ಒಡವೆ-ಆಭರಣಗಳಿಗೆಂದು ಅಪಹರಿಸಿ



ರಬಹುದಾ ಎಂದರೆ ಕರೆದೊಯ್ದ ಎಷ್ಟೋ ಬಾಲಕಿಯರನ್ನು ಅವರ ಚಿನ್ನಾಭರಣಗಳ ಸಮೇತ ವಾಪಸ್ಸು ಕಳಿಸಿದ್ದಾನೆ.

ಇನ್ನೂ ವಿಚಿತ್ರವೆಂದರೆ ಎಲ್ಲಿಂದ ಬಾಲಕಿಯನ್ನು ಅಪಹರಿಸಿದ್ದಾನೋ ವಾಪಸ್ಸು ಅದೇ ಜಾಗಕ್ಕೆ ತಂದುಬಿಡುತ್ತಾನೆ. ಕೆಲವೊಮ್ಮೆ ಮೂರು ದಿನಗಳ ಕಾಲ ಇನ್ನೂ ಕೆಲವೆಡೆ ಹತ್ತರಿಂದ ಹದಿನೈದು ದಿನಗಳ ಕಾಲ ಹೊತ್ತೊಯ್ದ ಬಾಲಕಿಯನ್ನು ಒತ್ತೆಯಿಟ್ಟು ಕೊಂಡಿದ್ದಿದೆ. ಕರೆದೊಯ್ದ ಬಾಲಕಿಯರನ್ನು ಥಳಿಸಿದ್ದಾಗಲಿ, ಹಿಂಸಿಸಿದ್ದಾಗಲಿ ಕಮ್ಮಿಯೇ. ಊಟ-ತಿಂಡಿ ಕೊಡಿಸಿದ್ದಾನೆ. ಹೊಸ ಹೊಸ ಬಟ್ಟೆಯನ್ನೂ ಕೊಡಿಸುತ್ತಾನೆ. ಇಷ್ಟದ ತಿಂಡಿ ತಿನಿಸನ್ನೇ ಕೊಡಿಸುತ್ತಾನೆ. ಊರೂರು ಸುತ್ತಿಸುತ್ತಾನೆ. ಪ್ರೀತಿಯಿಂದಲೇ ನಡೆಸಿಕೊಂಡಿದ್ದಾನೆ. ಬೈದಿಲ್ಲ, ಹೊಡೆದಿಲ್ಲ, ಲೈಂಗಿಕ ದೌರ್ಜನ್ಯದ ಲಕ್ಷಣಗಳೂ ಇಲ್ಲ.

ಬಾಲಕಿಯರೇ...!

ಹಾಗಾದರೆ ಏಕೆ ಸಿಕ್ಕ ಸಿಕ್ಕ ಅಪ್ರಾಪ್ತ ಬಾಲಕಿಯರನ್ನು ಈತ ಹೊತ್ತೊಯ್ದು ಏನು ಮಾಡುತ್ತಿದ್ದ? ಏಕೆ ಮೂರ್ನಾಲ್ಕು ದಿನಗಳ ನಂತರ ಮತ್ತೆ ಅದೇ ಜಾಗಕ್ಕೆ ತಂದು ಬಿಡುತ್ತಿದ್ದ? ಮಕ್ಕಳ ಒಡವೆ ದೋಚುವುದೇ ಈತನ ಉದ್ದೇಶವಾಗಿದ್ದರೆ ಏಕೆ ಅಪಹರಿಸಿದ ಎಲ್ಲ ಮಕ್ಕಳ ಒಡವೆಯನ್ನೂ ದೋಚಲಿಲ್ಲ? ಲೈಂಗಿಕ ವಿಕೃತಿಯೊಂದೇ ಉದ್ದೇಶವಾಗಿದ್ದರೆ ಏಕೆ ಅತ್ಯಾಚಾರದ ಯಾವುದೇ ಕುರುಹುಗಳಿಲ್ಲ? ಯಾಕೆ ಗಂಡು ಮಕ್ಕಳನ್ನು ಅಪಹರಿಸದೆ ಕೇವಲ ಹೆಣ್ಣು ಮಕ್ಕಳನ್ನಷ್ಟೇ ಹೊತ್ತೊಯ್ಯುತ್ತಿದ್ದ? ಈತನ ಅಸಲೀ 'ಮರ್ಮ'ವಾದರೂ ಏನು?

ಹೀಗೆ ಅಪರಾಧ ಶಾಸ್ತ್ರದ ಯಾವುದೇ ತರ್ಕ, ವ್ಯಾಕರಣಗಳಿಗೂ ನಿಲುಕದೆ ಮೂವತ್ತಕ್ಕೂ ಅಧಿಕ ಮಂದಿ ಅಪ್ರಾಪ್ತ ಬಾಲಕಿಯರನ್ನು ಹೊತ್ತೊಯ್ದು ಹೆಣ್ಣು ಹೆತ್ತವರ ಪಾಲಿಗೆ ಭಯಾನಕ ತಲೆನೋವಾಗಿ ಪರಿಗಣಿಸಿದವನ ಹೆಸರು ರವಿ ಅಲಿಯಾಸ್ ರವಿಕುಮಾರ್ ಉರ್ಫ್ ಬಾಬು ಯಾನೇ ಪ್ರಕಾಶ್ ಅರ್ಥಾತ್ ಜನಾರ್ದನಾಚಾರಿ. ಮೂವತ್ತೊಂದರ ಹರೆಯದ ಮದುವೆಯಾಗಿ ಮಕ್ಕಳುಳ್ಳ ರವಿಗಾಗಿ ಬಹುಶಃ ಪೊಲೀಸರು ತಲೆಕೆಡಿಸಿಕೊಂಡಷ್ಟು ಇತ್ತೀಚೆಗೆ ಬೇರಾವ ಪಾತಕಿಯ ವಿಷಯದಲ್ಲೂ ತಲೆಕೆಡಿಸಿಕೊಂಡಿರಲಿಕ್ಕಿಲ್ಲ, ಒಂದೆಡೆ ಜನ್ಮಕೊಟ್ಟ ತಂದೆಯರೇ ಹೆಣ್ಣು ಮಕ್ಕಳ ಮೇಲೆ ವಿಕೃತಿಗಿಳಿದ, ಕಂಡಕಂಡಲ್ಲೆಲ್ಲ ಅತ್ಯಾಚಾರ-ದೌರ್ಜನ್ಯಗಳಾಗುತ್ತಿರುವ ಈ ದಿನಗಳಲ್ಲಿ ವಿಕೃತಿಯ ಪರಮಾವಧಿಯೋ ಎಂಬಂತೆ ತಲೆ ಎತ್ತಿದವನು ಈ ಜನಾರ್ದನಾಚಾರಿ!

ಕಳೆದ ಎರಡು ವರ್ಷಗಳಿಂದೀಚೆಗೆ ಬೆಂಗಳೂರು ನಗರ, ಗ್ರಾಮಾಂತರ, ಪಕ್ಕದ ಚಿಕ್ಕಬಳ್ಳಾಪುರ, ಕೋಲಾರ ಮತ್ತು ಕೆಜಿಎಫ್‌ಗಳಲ್ಲಿ ವಿಚಿತ್ರ ಪಿಡುಗೊಂದು ತಲೆಯೆತ್ತಿತ್ತು, ಅದು ಅಪ್ರಾಪ್ತ ಬಾಲಕಿಯರ ನಿಗೂಢ ಅಪಹರಣ. ಇಲ್ಲಿಗೆ ವರ್ಷದ ಹಿಂದೆ ಅಂದರೆ 2012ರ ಜುಲೈನಲ್ಲಿ ಮಡಿವಾಳದ ಶಾಪಿಂಗ್ ಮಾಲ್ ಒಂದಕ್ಕೆ ಬಂದಿದ್ದ ಅನುಕೂಲಸ್ಥ ದಂಪತಿಗಳ ಇಬ್ಬರು ಮಕ್ಕಳ ಪೈಕಿ ಹಿರಿಯವಳಾದ ರಕ್ಷಾ (ಹೆಸರು ಬದಲಿಸಿದೆ) ಇದ್ದಕ್ಕಿದ್ದಂತೆ ನಾಪತ್ತೆಯಾದಳು.

ಮಡಿವಾಳದ ಮಾಲ್‌ನಲ್ಲಿ

ಕೋರಮಂಗಲದ ಬೆಥನಿ ಕಾನ್ವೆಂಟಿನಲ್ಲಿ ನಾಲ್ಕನೇ ತರಗತಿ ಓದುತ್ತಿದ್ದ ಒಂಬತ್ತರ ವಯಸ್ಸಿನ ರಕ್ಷಾ ಸಂಜೆ ಏಳೂವರೆ ಹೊತ್ತಿಗೆ ಮಾಲ್‌ನಲ್ಲಿದ್ದ ತಿಂಡಿ ಮಳಿಗೆಯೊಂದರತ್ತ ಹೋಗಿದ್ದೇ ಕೊನೆ. ಆ ನಂತರ ಯಾರೂ ಆಕೆಯನ್ನು ನೋಡಿದವರಿಲ್ಲ, ರಾತ್ರಿ ಒಂಬತ್ತಾದರೂ ಮಗಳ ಪತ್ತೆಯಿಲ್ಲದ್ದಕ್ಕೆ ದಂಗಾದ ತಂದೆ ಮಡಿವಾಳ ಪೊಲೀಸ್ ಠಾಣೆಗೆ ಬಂದು ದೂರು ಕೊಟ್ಟರು. ಪೊಲೀಸರೂ ಒಂದಷ್ಟು ಹುಡುಕಿದಂತೆ ಮಾಡಿ ಕೈಚೆಲ್ಲಿ ಬಿಟ್ಟರು. ಆದರೆ ಮೂರನೇ ದಿನಕ್ಕೆ ಅಚ್ಚರಿಯೆಂಬಂತೆ ರಕ್ಷಾ ಮನೆಗೆ ವಾಪಸ್ಸಾಗಿದ್ದಳು. ಎಲ್ಲಿಗೆ ಹೋಗಿದ್ದೆ ಎಂದು ತಾಯಿ ಕೇಳಿದ್ದಕ್ಕೆ 'ಮಾಮನ ಜೊತೆಗಿದ್ದೆ...!' ಎಂದು ಪೆದ್ದುಪೆದ್ದಾಗಿ ಹೇಳಿದ್ದಳು. ಯಾವ ಮಾಮ ಎಂದರೆ 'ರವಿ ಮಾಮ' ಎಂದಳು. ಯಾವ ರವಿ ಮಾಮ? ಎಂದರೆ 'ತಿಂಡಿ ಕೊಡಿಸ್ತಾರಲ್ಲ... ಅವ್ರು' ಎಂದಳು.

ವಾಪಸ್ಸಾದ ಬಾಲಕಿ ಹೇಳುತ್ತಿದ್ದ ವಿವರಣೆಗಳೆಲ್ಲವೂ ವಿಚಿತ್ರವಾಗಿದ್ದವು. ಮಾಲ್‌ನಲ್ಲಿ ಆಕೆಗೆ ತಿಂಡಿಕೊಡಿಸಿದ್ದ ಸೋಕಾಲ್ಡ್ ರವಿ ಅಲಿಯಾಸ್ ಜನಾರ್ದನಾಚಾರಿ ತದನಂತರ ನಿಮ್ಮ ಅಪ್ಪ ಅಮ್ಮ ಮೂರನೇ ಮಹಡಿಯಲ್ಲಿದ್ದಾರೆ ಎಂದು ನಂಬಿಸಿ ಲಿಫ್ಟ್ ಹತ್ತಿದವನು ಮೂರನೇ ಮಹಡಿಗೆ ಬಂದವನೇ ಹಿಂಬಾಗಿಲಿನಿಂದ ಆ ಬಾಲಕಿಯನ್ನು ರಸ್ತೆಗೆ ಕರೆದೊಯ್ದು ನಾನೇ ಮನೆಗೆ ಬಿಟ್ಟು ಬರ್ತೀನಿ ಎಂದು ಬೈಕ್‌ಗೆ ಹತ್ತಿಸಿಕೊಂಡಿದ್ದೇ ತಮಿಳುನಾಡಿನ ಹೊಸೂರಿಗೆ ಕರೆದೊಯ್ದಿದ್ದ. ಅಲ್ಲಿ ಎರಡು ದಿನಗಳ ಕಾಲ ಲಾಡ್ಜ್‌ನಲ್ಲಿ ತಂಗಿದ್ದ. ಮಗುವಿಗೆ ತಿಂಡಿ ಹೊಸ ಬಟ್ಟೆ ಎಲ್ಲವನ್ನೂ ಕೊಡಿಸಿದ್ದ. ಮೂರನೇ ದಿನಕ್ಕೆ ಅಷ್ಟೇ ನಿಯತ್ತಾಗಿ ತನ್ನ ಬೈಕ್‌ನಲ್ಲಿ ಕರೆತಂದು ಮನೆಯ ಪಕ್ಕದ ರಸ್ತೆಯಲ್ಲಿ ಬಿಟ್ಟುಹೋಗಿದ್ದ.



ಇಲ್ಲಿ ಗಮನಿಸಬೇಕಾದ ಸೂಕ್ಷ್ಮವೆಂದರೆ ವಾಪಸ್ಸಾದ ಮಗುವಿನ ಕಿವಿಯಲ್ಲಿದ್ದ ಎರಡು ಗ್ರಾಮುಗಳಷ್ಟು ತೂಕದ ಗುಂಡುಗಳೆರಡೂ ನಾಪತ್ತೆಯಾಗಿತ್ತು, ಇದು ಬಿಟ್ಟರೆ ವಾಪಸ್ಸಾದ ಮಗುವಿನಲ್ಲಿ ಯಾವುದೇ ಬದಲಾವಣೆಯಿರಲಿಲ್ಲ, ಕಿವಿಗೆ ಹಾಕಿದ್ದ ಜೊತೆ ಗುಂಡಿನ ಬಗ್ಗೆ ಪ್ರಶ್ನಿಸಿದ ತಂದೆತಾಯಿಗೆ ಮಗು ಹೇಳಿದ ಉತ್ತರವೇ ವಿಚಿತ್ರವಾಗಿತ್ತು, 'ಕಳ್ರು ಕಿತ್ಕೋತಾರೆ ಅಂತ ಅದನ್ನ ಮಾಮನ ಬಳಿ ಕೊಟ್ಟಿಟ್ಟಿದ್ದೇನೆ. ಅದನ್ನು ಮಾಮಾನೇ ತಂದುಕೊಡ್ತಾನೆ' ಎಂದು ಮುದ್ದಾಗಿ ಹಲುಬತೊಡಗಿದ್ದಳು. ಅಲ್ಲಿಗೆ ಇದು ಯಾರೋ ಕಿಲಾಡಿಯೊಬ್ಬನ ಕೈಚಳಕವೆಂಬ ಬಗ್ಗೆ ಪೊಲೀಸರಿಗಾಗಲಿ, ಮಗುವಿನ ತಂದೆತಾಯಿಗಳಿಗಾಗಲಿ ಅನುಮಾನವೇ ಇರಲಿಲ್ಲ.

ಮಗುವಿನ ವರ್ತನೆ, ಹೇಳುವ ವಿವರಣೆಗಳೆಲ್ಲ ಪೊಲೀಸರಿಗೆ ಚಿತ್ರವಿಚಿತ್ರ ಎನಿಸಿದ್ದವು. ಮಗುವಿನ ಒಡವೆಯೊಂದೇ ಉದ್ದೇಶವಾಗಿದ್ದರೆ ಅದಕ್ಕೆಂದು ಮೂರು ದಿನಗಳ ಕಾಲ ಏಕೆ ಕಾಯುತ್ತಿದ್ದ? ತಿಂಡಿ, ಬಟ್ಟೆ ಕೊಡಿಸಿದ್ದೂ ಅಲ್ಲದೆ ಲಾಡ್ಜ್‌ನಲ್ಲೂ ಎರಡು ದಿನವಿದ್ದ ಆತ ಲೈಂಗಿಕ ವಿಕೃತನಾಗಿದ್ದರೆ ಅಂಥ ಯಾವುದಾದರೂ ಚಿಹ್ನೆಗಳು



ಮಗುವಿನ ದೇಹದ ಮೇಲಿರುತ್ತಿತ್ತು, ಆದರಲ್ಲಿ ಆ ಥರದ ಯಾವುದೇ ಲಕ್ಷಣಗಳಿರಲಿಲ್ಲ, ಇದೊಂಥರದ ಚೇಷ್ಟೆ ಅಥವಾ ಹುಡುಗಾಟಿಕೆ ಪ್ರಕರಣವೆನಿಸಿದ್ದೇ ಮಡಿವಾಳ ಪೊಲೀಸರು ಅದನ್ನಲ್ಲಿಗೆ ಮರೆತುಬಿಟ್ಟರು.

ಒಡವೆಗಾಗಿ?

ಏಕೆಂದರೆ ಮಗು ವಾಪಸ್ಸಾಗಿತ್ತು ಮತ್ತು ತಂದೆ ತಾಯಂದಿರು ಕೂಡ ಆ ಬಗ್ಗೆ ಹೆಚ್ಚಿನ ತನಿಖೆಗೆ ಒತ್ತಡ ಹಾಕಿರಲಿಲ್ಲ!

ಆದರೆ ಇದರ ಬೆನ್ನಲ್ಲೇ ಕೆಜಿಎಫ್, ಕೋಲಾರ, ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಶ್ರೀನಿವಾಪುರ ಮತ್ತು ಬೆಂಗಳೂರಿನ ಮಹದೇವಪುರ, ಬಾಣಸವಾಡಿ, ಯಲಹಂಕ, ವೈಟ್‌ಫೀಲ್ಡ್, ಪರಪ್ಪನ ಅಗ್ರಹಾರ, ಯಶವಂತಪುರ ಪೊಲೀಸ್ ಠಾಣೆಗಳಲ್ಲಿ ಇಂಥದ್ದೇ ಘಟನೆಗಳು ಸಂಭವಿಸಿದ್ದವು. ಯಾರೋ 30 ರ ಆಸಾಮಿಯೊಬ್ಬ ಇದ್ದಕ್ಕಿದ್ದಂತೆ ಶಾಪಿಂಗ್ ಮಾಲ್‌ಗಳಲ್ಲಿ ಪ್ರತ್ಯಕ್ಷನಾಗಿ ಎದುರು ಸಿಕ್ಕ ಬಾಲಕಿಯನ್ನು ಪರಿಚಯಿಸಿಕೊಳ್ಳುತ್ತಿದ್ದ. 'ನಾನು ನಿನ್ನ ಮಾಮ... ಗೊತ್ತಾ?' ಎಂದೇ ಪರಿಚಯಿಸಿಕೊಂಡು ತಿಂಡಿಕೊಡುತ್ತಿದ್ದ. ಸಿಹಿ ತಿಂಡಿ ತಿಂದಾಕ್ಷಣವೇ ನಂಬುವ ಮಕ್ಕಳನ್ನು ಉಪಾಯವಾಗಿ ಅಪ್ಪ ಅಮ್ಮಂದಿರಿಂದ ಬೇರ್ಪಡಿಸುತ್ತಿದ್ದ.

ಮನೆಯಲ್ಲಿ ಹರಿಕತೆಯಿದೆ, ಆಮಂತ್ರಣ ಪತ್ರ ಕೊಡಬೇಕು. ಬಾ ಮನೆ ತೋರಿಸು ಎಂದೇ ಬಾಲಕಿಯನ್ನು ಬೈಕಿಗೆ ಹತ್ತಿಸಿಕೊಂಡವನು ನೇರವಾಗಿ ಯಾವುದೋ ಲಾಡ್ಜಿಗೋ, ಬೇರೆ ಊರಿಗೋ ಕರೆದೊಯ್ಯುತ್ತಿದ್ದ. ಹಾಗೇ ಕರೆದೊಯ್ದವನು ಕೆಲವೊಮ್ಮೆ ವಾರದವರೆಗೆ ಇನ್ನೂ ಕೆಲವೊಮ್ಮೆ 15 ದಿನಗಳವರೆಗೂ ತನ್ನ ಜೊತೆ ಸುತ್ತಾಡಿಸಿಕೊಂಡಿರುತ್ತಿದ್ದ. ಅನೇಕ ಪ್ರಕರಣಗಳಲ್ಲಿ ಮಕ್ಕಳು ತೊಟ್ಟಿದ್ದ ಒಡವೆ ತೆಗೆದಿಟ್ಟುಕೊಂಡು ಗಿರವಿ ಇಟ್ಟು ಹಣ ಪಡೆದುಕೊಂಡಿದ್ದ ಆತ ಇನ್ನೂ ಕೆಲ ಪ್ರಕರಣಗಳಲ್ಲಿ ಒಡವೆ ಸಮೇತವೇ ವಾಪಸ್ಸು ತಂದು ಬಿಟ್ಟಿರುತ್ತಿದ್ದ.

ಬರುಬರುತ್ತ ಇಂಥ ಪ್ರಕರಣಗಳ ಸಂಖ್ಯೆ ಹೆಚ್ಚಾಗತೊಡಗಿತ್ತು. ಬಾಗೇಪಲ್ಲಿಯಲ್ಲಿ ಇದೇ ರೀತಿ ಬಾಲಕಿಯೊಬ್ಬಳನ್ನು ಬಸ್ಸಿಗೆ ಹತ್ತಿಸಿಕೊಂಡಿದ್ದ ರವಿ ಬಗ್ಗೆ ಜನಕ್ಕೆ ಅನುಮಾನ ಬಂದು ಪ್ರಶ್ನಿಸಿದರೆ ಜೊತೆಗಿದ್ದ ಬಾಲಕಿಯನ್ನು ತನ್ನ ಮಗಳು ಎಂದಿದ್ದ. ತಾಯಿ ಎಲ್ಲಿ ಎಂದು ಜನ ಪ್ರಶ್ನಿಸಿದ್ದಕ್ಕೆ ಯಾರೋ ಹೆಂಗಸೊಬ್ಬಳಿಗೆ ಫೋನ್ ಮಾಡಿ ಪ್ರಶ್ನಿಸಿದಾತನ ಜೊತೆ ಮಾತಾಡಿಸಿದ್ದ. ಬಹುತೇಕ ಪ್ರಕರಣಗಳಲ್ಲಿ ಮಕ್ಕಳ ತಂದೆ ತಾಯಂದಿರೇ ಮಕ್ಕಳ ವೈದ್ಯಕೀಯ ಪರೀಕ್ಷೆಗೆ ಹಿಂದೇಟು ಹಾಕಿದ್ದರು. ಕೆಲ ಪ್ರಕರಣಗಳಲ್ಲಿ ವೈದ್ಯಕೀಯ ಪರೀಕ್ಷೆ ನಡೆದಿದ್ದರೂ ಲೈಂಗಿಕ ದೌರ್ಜನ್ಯದ ಯಾವುದೇ ಲಕ್ಷಣಗಳಿರಲಿಲ್ಲ, ಅಲ್ಲಿಗೆ ಪೊಲೀಸರು ಒಂದು ತೀರ್ಮಾನಕ್ಕೆ ಬಂದರು.

ಅದು; ಕಿಡ್ನಾಪಾದವರೆಲ್ಲ 9 ರಿಂದ 14ರ ವಯೋಮಾನದ ಬಾಲಕಿಯರೇ. ಆದ್ದರಿಂದ, ಪೋಷಕರು ಈ ವಯೋಮಾನದ ಬಾಲಕಿಯರಿಗೇ ಚಿನ್ನದ ಒಡವೆಗಳನ್ನು ತೊಡಿಸುತ್ತಿದ್ದರಿಂದ ಈ ಒಡವೆಗಳ ಕಾರಣಕ್ಕೇ ಖದೀಮನೊಬ್ಬ ಈ ರೀತಿ ಸರಣಿ ಕಿಡ್ನಾಪುಗಳನ್ನು ಮಾಡುತ್ತಿದ್ದಾನೆಂಬ ನಿರ್ಧಾರಕ್ಕೆ ಪೊಲೀಸರು ಬಂದರು.

ಯಲಹಂಕದ ಬಾಲಕಿ


ಆದರೆ, ಪೊಲೀಸರ ಈ ನಿರ್ಧಾರ ಕೂಡ ತಪ್ಪಾಗಿತ್ತು. ಮೊನ್ನೆ 2013ರ ಜುಲೈ 21ಕ್ಕೆ ಯಲಹಂಕದ ಕಾಮಾಕ್ಷಮ್ಮ ಲೇಔಟಿನಲ್ಲಿದ್ದ 9ರ ಬಾಲಕಿಯೊಬ್ಬಳನ್ನು ರವಿ ಇದೇ ರೀತಿ ಅಪಹರಿಸಿ 2 ದಿನಗಳ ನಂತರ ಬಿಟ್ಟುಹೋಗಿದ್ದ. ಹಾಗೇ ಬಿಡುವಾಗ ಬಾಲಕಿಯು ಮನೆ ಪಕ್ಕದಲ್ಲೇ ಬಿಟ್ಟುಹೋಗಿದ್ದ. ಆಕೆ ತೊಟ್ಟಿದ್ದ ಬೆಳ್ಳಿಯ ಕಾಲುಚೈನುಗಳು ಹಾಗೇ ಇದ್ದವು. ಈ ರೀತಿ ಕಿಡ್ನಾಪ್ ಮಾಡಿದ್ದೂ ಅಲ್ಲದೆ ಅಪಹರಿಸಿದ ಮಾರನೇ ದಿನವೇ ಸಂಬಂಧಪಟ್ಟ ಪೊಲೀಸ್ ಠಾಣೆಗೆ ತಾನು ಇನ್ನಾವುದೋ ಪೊಲೀಸ್ ಠಾಣೆಯ ಪೇದೆಯೆಂದು ಫೋನ್ ಮಾಡಿ ಅಪಹರಿಸಿದ ಬಾಲಕಿಯ ಪೋಷಕರು ದೂರು ಕೊಟ್ಟಿದ್ದಾರಾ? ಇಲ್ಲವಾ? ಎಂದು ಖಾತರಿ ಮಾಡಿಕೊಳ್ಳುತ್ತಿದ್ದ. ಕೆಲವೊಮ್ಮೆ ತಾನೇ ಪೊಲೀಸ್ ಪೇದೆ ಎಂದು ಹೇಳಿಕೊಂಡು ಅದೇ ಠಾಣೆಗೆ ಬಂದು ದೂರು ದಾಖಲಾಗಿದೆಯಾ ಇಲ್ಲವಾ ಎಂದು ವಿಚಾರಿಸಿಕೊಳ್ಳುತ್ತಿದ್ದ.

ಯಲಹಂಕದ ಕಾಮಾಕ್ಷಮ್ಮ ಲೇಔಟಿನ ಬಾಲಕಿಯ ಕಿಡ್ನಾಪ್ ಮತ್ತು ಮಹದೇವಪುರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದ ಪ್ರಕರಣಗಳಿಂದಾಗಿ ರವಿ ಕೇವಲ ಒಡವೆ, ಚಿನ್ನಾಭರಣಗಳಿಗಾಗಷ್ಟೇ ಅಪಹರಿಸುತ್ತಿಲ್ಲ ಎಂಬುದು ಗ್ಯಾರಂಟಿಯಾಗಿತ್ತು, ಕಿಡ್ನಾಪ್ ಮಾಡಿದ್ದವನ ಹೆಸರು ರವಿ, ಬಾಬು, ಪ್ರಕಾಶ್ ಎಂದಿರುತ್ತಿತ್ತು. ದೈಹಿಕ ವಿವರಣೆ, ಮುಖಚರ್ಯೆ, ಆಡುತ್ತಿದ್ದ ಭಾಷೆಗಳೆಲ್ಲವೂ ಇದು ಒಬ್ಬನೇ ಆಸಾಮಿಯ ಕೈವಾಡವೆಂಬುದನ್ನು ಸಾಬೀತು ಪಡಿಸಿದ್ದವು.

ಈ ಮಧ್ಯೆ 2013ರ ಜುಲೈ 28ರ ಹೊತ್ತಿಗೆ ಬಾಣಸವಾಡಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲೊಂದು 12ರ ಬಾಲಕಿಯ ಅಪಹರಣವಾಯ್ತು. ಹಾಗೇ ಕಿಡ್ನಾಪಾದ ಬಾಲಕಿಯನ್ನು ಮೂರನೇ ದಿನಕ್ಕೆ ಮನೆ ಸಮೀಪದಲ್ಲೇ ರವಿ ವಾಪಸ್ಸು ಬಿಟ್ಟುಹೋಗಿದ್ದ. ಬಾಲಕಿ ಕಿವಿಗೆ ಧರಿಸಿದ ರಿಂಗ್ ಮಾತ್ರ ನಾಪತ್ತೆಯಾಗಿತ್ತು, ಮಿಕ್ಕಂತೆ ಬೇರೇನೂ ನಡೆದಿರಲಿಲ್ಲ, ಆದರೆ ಬೇರೆಲ್ಲವನ್ನೂ ನಿಖರವಾಗಿ ಹೇಳುತ್ತಿದ್ದ ಈ ಬಾಲಕಿ ರಾತ್ರಿ ಹೊತ್ತಿನ ಘಟನೆಗಳನ್ನು, ಲಾಡ್ಜಿನಲ್ಲಿ ತಂಗಿದ್ದ ಹೊತ್ತಿನಲ್ಲಿ ಏನಾಯಿತೆಂಬುದನ್ನು ವಿವರಿಸುವಾಗ ತನಗೆ 'ನಿದ್ದೆ ಬಂದಂತಾಯ್ತು, ಗೊತ್ತಾಗಲೇ ಇಲ್ಲ...!'

ಉಮೇಶ್ ರೆಡ್ಡಿಯ ಸಂತತಿಯಲ್ಲಿ..!

ಮೂಲತಃ ಹೊಸಕೋಟೆ ತಾಲ್ಲೂಕು ರಾಂಪುರ ವಾಸಿಯಾದ ಜನಾರ್ದನಾಚಾರಿಗೆ ಇಲ್ಲಿಗೆ 8 ವರ್ಷದ ಹಿಂದೆಯೇ ಮದುವೆಯಾಗಿತ್ತು, 6 ವರ್ಷದ ಗಂಡು ಮಗುವೂ ಇತ್ತು. ಆದರೆ ಜನಾರ್ದನಾಚಾರಿ ಎಂಥಾ ವಿಕಾರಿಯೆಂಬುದನ್ನು ಪತ್ನಿಯಿಂದ ಮುಚ್ಚಿಡಲು ಸಾಧ್ಯವಾಗಲೇ ಇಲ್ಲ, ಮಡಿವಾಳ ಪೊಲೀಸ್ ಠಾಣೆಯ ಕ್ರೈಂ ಪೇದೆಯೊಬ್ಬರೇ ಹೇಳುವಂತೆ ಪತ್ನಿಯ ಅಕ್ಕನ ಅಪ್ರಾಪ್ತ ಮಗಳೊಬ್ಬಳನ್ನು ಸ್ನಾನ ಮಾಡಿಸುವ ನೆಪದಲ್ಲಿ ವಿಕೃತಿ ಮೆರೆದಿದ್ದ, ಇದು ಗೊತ್ತಾಗಿದ್ದೇ ಪತ್ನಿ ಇನ್ನಾರೋ ಹುಡುಗನೊಬ್ಬನ ಜೊತೆ ಪರಾರಿಯಾದಳು. ತನ್ನ ಮಗನನ್ನು ಆಶ್ರಮವೊಂದಕ್ಕೆ ಸೇರಿಸಿದ್ದೇ ಮತ್ತೆ ಕಾರುಗಳ್ಳತನ, ಬೈಕ್ ಕಳುವಿಗಿಳಿದ ಜನಾರ್ದನಾಚಾರಿಗೆ ಕೋಲಾರದಲ್ಲಿ ದೇವರಾಜ್ ಎಂಬ ಶಿಷ್ಯನಿದ್ದ.



ಎಂಥಾ ಬಾಲಕಿಯನ್ನೂ ಆಕೆಯ ತಂದೆತಾಯಿಗಿಂತಲೂ ಚೆನ್ನಾಗಿ ಪಳಗಿಸುವ ಕಲೆ ಈತನಿಗೆ ಅದ್ಹೇಗೆ ರಕ್ತಗತವಾಯಿತೋ ಗೊತ್ತಿಲ್ಲ, ಮನೋವೈದ್ಯಕೀಯ ಶಾಸ್ತ್ರದ ಯಾವ ಪರಿಣಿತರಿಗಾದರೂ ಈತ ಅಧ್ಯಯನ ಯೋಗ್ಯವಸ್ತುವೆ. ದಂಡುಪಾಳ್ಯದ ಹಂತಕರು, ಉಮೇಶ್ ರೆಡ್ಡಿ ಮುಂತಾದವರ ಸಾಲಿಗಲ್ಲದಿದ್ದರೂ ಈತನದ್ದೇ ವಿಲಕ್ಷಣ ವಿಕೃತಿಯ ಬಗ್ಗೆ ತನಿಖೆಯಾಗಬೇಕಿದೆ.

...ಳು.

...ೀ ರೀತಿ ಜುಲೈ 21ಕ್ಕೆ ಯಲಹಂಕದ ಕಾಮಾಕ್ಷಮ್ಮ ...ಂದ ಕಿಡ್ನಾಪಾಗಿದ್ದ ಬಾಲಕಿಯೂ ತನ್ನದೇ ದಾಟ ...ನಗೆ ತಲೆ ಸುತ್ತು ಬಂತು, ಕಣ್ಣು ಕತ್ತಲಾದಂತಾಯ್ತು ... ಏನಾಯಿತು ಗೊತ್ತೇ ಆಗಲಿಲ್ಲ ಎಂದಿದ್ದಳು. ...ೀ ಕಿಡ್ನಾಪಿನ ಹಿಂದೆ ಕೇವಲ ಒಡವೆಯ ...ಷ್ಟೇ ಅಲ್ಲದೆ ಇನ್ನೆಂಥ ಲೈಂಗಿಕ ವಿಕೃತಿಯ ಕಾರಣವೂ ...ಬುದು ಪೊಲೀಸರಿಗೆ ಮನದಟ್ಟಾಗಿತ್ತು.

ಗೃಹಸಚಿವ ಜಾರ್ಜ್ ಆಸಕ್ತಿ

...ಪಹರಿಸಿದ ಬಾಲಕಿಯರನ್ನು ರವಿ ಪುಜ್ಜೆ ತಪ್ಪಿಸುತ್ತಿದ್ದ ...ರಾರಿಗೂ ಅನುಮಾನಗಳಿರಲಿಲ್ಲ. ಆದರೆ ಏನು ...ಷ್ಟನೆಂಬುದು ಮಾತ್ರ ಅಪಹರಿಸಿದವನಿಗಷ್ಟೇ ... ಕಿಡ್ನಾಪಾದ ಬಾಣಸವಾಡಿಯ ಬಾಲಕಿಯ ತಂದೆ ...ಜೇಳಿಕೇಳಿ ಗೃಹಸಚಿವ ಜಾರ್ಜ್‌ರ ಸರ್ವಜ್ಞನಗರ ...ಸೇರಿದವರು. ಪೋಷಕರ ದುಮ್ಮಾನ ಕಂಡು ...ಂಡ ಗೃಹಸಚಿವ ಜಾರ್ಜ್ ನೇರವಾಗಿ ಪೊಲೀಸ್ ...ನರ್ ಔರಾದ್‌ಕರ್ ಮತ್ತು ಜಂಟಿ ಕಮೀಷನರ್ ...ರನ್ನು ಕರೆಸಿಕೊಂಡಿದ್ದೇ ಈ ಬಗ್ಗೆ ಗಂಭೀರ ...ಮುಗಿಸುವಂತೆ ಆದೇಶಿಸಿದ್ದಾರೆ. ಜೊತೆಗೆ ಮತ್ತೊಬ್ಬ ...ಮೀಷನರ್ ಬಿ.ಕೆ. ಸಿಂಗ್ ಕೂಡ ಕೈಜೋಡಿಸಿದ್ದಾರೆ. ...ಆ ಬಾಲಕಿಗೆ ಬೆಂಗಳೂರಿನ ವಿವಿಧ ಪಾತಕಿಗಳ ...ದೇ ಫೋಟೋಗಳನ್ನು ತೋರಿಸುತ್ತಿದ್ದಂತೆ ಒಂದು ...ಫೋಟೋ ಬಗ್ಗೆಯೇ ಆ ಬಾಲಕಿಯ ಗಮನವಿತ್ತು.

ಸಿಕ್ಕಿ ಬಿದ್ದ

...ಬೈಕ್ ಕಳ್ಳ ಜನಾರ್ದನಾಚಾರಿಯ ಫೋಟೋ. ...ಂಗಲ ಕಲಾಸಿಪಾಳ್ಯ, ಕೆ.ಆರ್.ಪುರ ಇತ್ಯಾದಿ ...ಗಳಲ್ಲಿ ಆ ಕಾಲದಿಂದಲೂ ಪಾರ್ಕಿಂಗ್‌ನಲ್ಲಿರುತ್ತಿದ್ದ ...ನ್ನು ಕದಿಯುತ್ತಿದ್ದವನೇ ಈ ಜನಾರ್ದನಾಚಾರಿ.



ಪೊಲೀಸ್ ಪೇದೆಯಂತೆಯೇ ಕಾಣುತ್ತಿದ್ದ ಈತ ...ಬೈಕ್ ಕಳ್ಳ ಮಾತ್ರವಲ್ಲದೆ ಬಾಲಕಿಯರನ್ನು ...ಎತ್ತಿದ್ದಾನೆಂಬ ಸಂಗತಿಯೇ ಪೊಲೀಸರ ಪಾಲಿಗೆ ...ಗಿತ್ತು.

...ಹಂಕ, ಮಡಿವಾಳ, ಮಹದೇವಪುರ, ಪರಪ್ಪನ ...ಗಳಿಂದ ಕಿಡ್ನಾಪಾಗಿದ್ದ ಬಾಲಕಿಯರೆಲ್ಲರೂ ಇದೇ ...! ಗುರುತಿಸಿ ಒಂದೊಂದು ಹೆಸರನ್ನು ಉಚ್ಚರಿಸಿ ...ಲವೆಡೆ ಬಾಬು, ಕೆಲವೆಡೆ ಪ್ರಕಾಶ್, ಕೆಲವೆಡೆ ...ಗೆ ತರಹೇವಾರಿ ಹೆಸರುಗಳಿಂದ ಚಾಲ್ತಿಯಲ್ಲಿದ್ದ ...ನಾಚಾರಿಯ ಮರ್ಮ ಬಗೆದಷ್ಟೂ ನಿಗೂಢವಾಗ ...ನ್ತು. ಮೂಲತಃ ಹೊಸಕೋಟೆ ತಾಲ್ಲೂಕು ...ದವನಾದ ಜನಾರ್ದನಾಚಾರಿಯೇ ಬೇರೆ ಬೇರೆ ...ಂದ ಬಾಲಕಿಯರನ್ನು ಅಪಹರಿಸುತ್ತಿದ್ದ. ಮಕ್ಕಳು ... ಖುಷಿಯಲ್ಲಿ ದೂರು, ಮೆಡಿಕಲ್ ರಿಪೋರ್ಟ್ ...ಕೊಡುವುದಕ್ಕೂ ಪೋಷಕರು ಸಹಕರಿಸುತ್ತಿರಲಿಲ್ಲ. ...ಗಳೇ ಜುಲೈ 19ರ ರಾತ್ರಿ ಮಡಿವಾಳದ ... ಲೇಔಟಿನಿಂದ ಬಾಲಕಿಯೊಬ್ಬಳನ್ನು ಅಪಹರಿಸಿದ ...ಚಾರಿ ಆಕೆಯನ್ನು ಲಾಡ್ಜ್ ಒಂದಕ್ಕೆ ಕರೆತಂದಿದ್ದಾನೆ. ...ಮೊದಲೇ ಮಾಹಿತಿಯಿದ್ದ ಲಾಡ್ಜ್‌ನ ಮ್ಯಾನೇಜರ್ ... ಪೊಲೀಸರಿಗೆ ಮಾಹಿತಿ ನೀಡಿದ್ದಾನೆ.

...ಮಡಿವಾಳ ಪೊಲೀಸರ ವಶದಲ್ಲಿ ಗಾಯ ...ವ ಜನಾರ್ದನಾಚಾರಿ ಕರ್ನಾಟಕ ಕಂಡ ಅನೇಕ ...ಕರಗಳ ಪೈಕಿ ವಿಚಿತ್ರ ಮತ್ತು ವಿಲಕ್ಷಣ ...ಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ. ಆತನ ... ಬಗ್ಗೆ ಕಿಡ್ನಾಪಾದ ಬಾಲಕಿಯರಿಂದ ನಿಖರ ...ಸಾಧ್ಯವಿಲ್ಲ. ಏಕೆಂದರೆ ಪ್ರಜ್ಞೆ ತಪ್ಪಿಸುತ್ತಿದ್ದ. ಆತ ...ಬಿಟ್ಟರೇ ಸತ್ಯ ಬಯಲಾಗಬಹುದು. ಆದರೆ ಬಾಯಿ ...ಬಿಡಿಸುವವರ್‍ಯಾರು?

...ಥದೋ ವಿಕೃತಿ, ವಿಕಾರಗಳನ್ನು ಕಂಡ ...ದ ಜನತೆಗೆ ಜನಾರ್ದನಾಚಾರಿ ಅಪ್ರಾಪ್ತ ಬಾಲಕಿ ...ರನ್ನೆಸಗುತ್ತಿದ್ದ ವಿಕೃತಿ ನಿಜಕ್ಕೂ ಭಯಾನಕ ಮತ್ತು ...ಕ!

■ ರಾ. ಸೋಮನಾಥ್





ವಸತಿ ಸಚಿವ ಅಂಬರೀಶ್

ಆಚಾರವಿಲ್ಲದ ನಾಲಿಗೆ....!

ನೂರು ದಿನ ಪೂರೈಸಿ ಜನರಿಗೆ ಯಾವ ಉಪದ್ರವನ್ನೂ ನೀಡದೆ, ಹೇಳಿಕೊಳ್ಳುವಂತಹ ಕೆಲಸವನ್ನೂ ಮಾಡದೆ ಸಾಗುತ್ತಿರುವ ಸಿದ್ದರಾಮಯ್ಯನವರ ಕಾಂಗ್ರೆಸ್ ಸರ್ಕಾರಕ್ಕೆ ಮೊದಲ ಕಳಂಕವನ್ನು ಯಾರು ತರಬಹುದು?

ಕಾರ್ಮಿಕ ಸಚಿವ ಪರಮೇಶ್ವರ ನಾಯಕ ವರ್ಗಾ ಡೀಲ್ ನಡೆಸುತ್ತಿರುವ ರಭಸ ನೋಡಿದರೆ ಆತನಿಂದಲೇ ಕಳಂಕ ಅನ್ನಿಸುವಂತಿದೆ. ಪೊಲೀಸ್ ಇಲಾಖೆಯಲ್ಲಿ ಮಾಜಿ ಐಪಿಎಸ್ ಅಧಿಕಾರಿ ಕೆಂಪಯ್ಯ ನಿತ್ಯ ತಲೆ ಹಾಕುತ್ತಾ ಗೃಹ ಸಚಿವ ಜಾರ್ಜ್‌ರನ್ನು ಡಮ್ಮಿಯಾಗಿಸುತ್ತಿರುವ ಘಟನೆಗಳು ಬಹಿರಂಗಗೊಳ್ಳುವ ದಿನ ದೂರವಿಲ್ಲೆಂತಲೂ ಕಾಣುತ್ತಿದೆ. ಹೀಗೆ ಹುಡುಕುತ್ತಾ ಹೋದರೆ ಆರ್.ವಿ. ದೇಶಪಾಂಡೆಯ ಇಲಾಖೆ, ಕೃಷಿ ಇಲಾಖೆಯಲ್ಲಿ ಬೇರು ಬಿಟ್ಟುಕೊಂಡಿರುವ ಹಳೇ ಹೆಗ್ಗಣದಂತಹ ಭ್ರಷ್ಟ ಅಧಿಕಾರಿಗಳ ಟ್ರಾನ್ಸ್‌ಫರ್ ಡೀಲುಗಳ ಕತೆ ಗಾಬರಿ ಹುಟ್ಟಿಸುವಂತಿದೆ.

ಆದರೆ ಇದೆಲ್ಲವನ್ನು ಮೀರಿಸುವ, ಹೊಸ ಕಾಂಗ್ರೆಸ್ ಸರ್ಕಾರದ ಮಾನ ಮರ್ಯಾದೆಗಳನ್ನೆಲ್ಲಾ ಬೀದಿಪಾಲು ಮಾಡುವ ಸಾಧ್ಯತೆ ಇರುವುದು ವಸತಿ ಸಚಿವ ಅಂಬರೀಶ್‌ಗೆ....!

ಅದು ಭ್ರಷ್ಟಾಚಾರದ ಸಾಧ್ಯತೆಯಲ್ಲ, ಹಗರಣ ಗಳಿಂದಾಗುವಂತದ್ದಲ್ಲ.

ನಾಲಿಗೆ... ಆಚಾರವಿಲ್ಲದ ನಾಲಿಗೆಯ ಮಾತಿದು.

ಹತೋಟಿಯೇ ಇರದ ಸಚಿವ ಅಂಬರೀಶ್‌ರ ಲಂಗುಲಗಾಮಿರದ ಮಾತು, ವರ್ತನೆಗಳಿಂದ ಆಗಬಹುದಾದ ಕೆಟ್ಟ ಪರಿಣಾಮಗಳ ವಿಚಾರ ಅದು.

ಮಾತೆತ್ತಿದರೆ 'ಅಮ್ಮನ್, ಅಕ್ಕನ್....' ಎನ್ನುವ ಅಂಬರೀಶ್‌ಗೆ ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಯೋರ್ವ ಹೇಗೆ ವರ್ತಿಸಬೇಕೆಂಬ ಎಲಿಮೆಂಟರಿ ಪರಿಜ್ಞಾನವೂ ಇದ್ದಂತಿಲ್ಲ. ಇದು ಹೀಗೇ ಮುಂದುವರಿದರೆ ಅದೇ ಒಂದು ದೊಡ್ಡ ಹಗರಣವಾಗುವ ಸಾಧ್ಯತೆಗಳಂತೂ ಇವೆ.

ಈತ ಮಂತ್ರಿಯಾದ ನಂತರ ಇತ್ತೀಚೆಗೆ ಮಂಡ್ಯದಿಂದ ಜನರ ಗುಂಪೊಂದು ಅಂಬರೀಶ್ ಭೇಟಿಯಾಗಲು ವಿಧಾನಸೌಧಕ್ಕೆ ಬಂತು. ಅವರನ್ನು ನೋಡಿದ ತಕ್ಷಣ ಗರಂ ಆದ ಅಂಬರೀಶ್ "ಯಾಕ್ರೋ... ನಿಮ್ಮ....ನ್ ಯಾಕ್ ಬರ್ತಿರೋ ವಿಧಾನಸೌಧಕ್ಕೆ ನಡಿರೋ ಇಲ್ಲಿಂದ" ಅಂದಿದ್ದಾರೆ.

ಅಂಬರೀಶ್‌ರ ಈ ಹೊಲಸು ಮಾತು ಕೇಳಿ ರೇಗಿಹೋದ ಆ ಜನ ಬೈಯ್ದುಕೊಳ್ಳುತ್ತಾ ವಾಪಸ್ ಹೋಗಿದ್ದಾರೆ. ಇದ್ಯಾಕೋ ಸರಿ ಹೋಗಲಿಲ್ಲ ಅಂತನಿಸಿ ಅಂಬರೀಶ್ ಕೊನೆಗೆ ತನ್ನ ಸಹಾಯಕ ವಿವೇಕ ಎಂಬಾತನಿಗೆ

"ಏಯ್ ವಿವೇಕ, ಬೇಜಾರ್ ಮಾಡಿಕೋಬ್ಯಾಡಿ ಅಂತ ಹೇಳೊ ಅವ್ರಿಗೆ ನಾನ್ಯಾವುದೋ ಟೆನ್ಷನ್‌ನಲ್ಲಿದ್ದೆ" ಅಂತ ತಿಪ್ಪೇ ಸಾರಿಸಿದ್ದಾರೆ.

ಅಂಬರೀಶ್‌ಗೆ ಈ ತರದ ದುರಹಂಕಾರ ಹಾಗೂ ಉಡಾಫೆಯ ಮಾತುಗಳಾಡುವುದು ಜನ್ಮಜಾತ ದುರ್ಗುಣ. ತನ್ನ ಎದುರಿಗೆ ಯಾರೇ ಇರಲಿ, ಸನ್ನಿವೇಶ ಎಂತಾದ್ದೇ ಆಗಿರಲಿ ಈತ ಬಾಯಿ ತೆರೆದರೆ ಹೊರಬರುವುದೇ ಅಸಹ್ಯ ಅಶ್ಲೀಲ ಮಾತುಗಳು.

ಕರ್ನಾಟಕ ಸರ್ಕಾರದ ಕ್ಯಾಬಿನೆಟ್ ದರ್ಜೆಯ ಮಂತ್ರಿಯೊಬ್ಬ ಈ ರೀತಿ ವರ್ತಿಸುತ್ತಾನೆಂದರೆ ಈ ಸರ್ಕಾರದ ಹಣೆಬರಹ ಏನಾಗಬಹುದೋ ಯೋಚಿಸಿ ನೋಡಿ.

ಮೊನ್ನೆ ನಡೆದ ಮಂಡ್ಯ ಸಂಸತ್ ಉಪಚುನಾವಣೆಯ ಸಂದರ್ಭದಲ್ಲಿ ನಟಿ ರಮ್ಯ ಪ್ರಚಾರಕ್ಕೆ ಬರದೆ ಮನೆಯಲ್ಲೇ ಕುಳಿತಿದ್ದಾಗ ಕೆಲ ಕಾಂಗ್ರೆಸ್ ಸ್ಥಳೀಯ ನಾಯಕರು ಅಂಬರೀಶ್‌ಗೆ ಫೋನ್ ಮಾಡಿ "ಅಣ್ಣಾ, ರಮ್ಯಾ ಪ್ರಚಾರಕ್ಕೆ ಯಾವಾಗ್ ಬರ್ತಾರೆ?" ಅಂತೇನೊ ಕೇಳಿದ್ದಾರೆ. ಅದಕ್ಕೆ ಈ ಮಹಾನುಭಾವ "ಯಾಕೊ.... ನನ್ಮಕ್ಳಾ.. ನಿಮ್ಮತ್ರ ರಮ್ಯಾ ಫೋಟೋ ಇಲ್ವೆನ್ರೊ... ಅದನ್ನೇ ಹಿಡ್ಕೊಂಡು ಹೋಗ್ರೊ ಸಾಕು" ಅಂದರಂತೆ.

ಅಂಬರೀಶ್ ಬಗ್ಗೆ ಇಂತವೇ ಹೇಳಲು ಸಾವಿರ ಘಟನೆಗಳಿವೆ. ಈತ ಸಿನಿಮಾ ನಟನಾಗಿದ್ದಾಗಲೂ ಸಹ ನಟಿಯರ ಬಗ್ಗೆ ಹಲ್ಕಾ ಮಾತಾಡದೆ ಇದ್ದ ದಿನವೇ ಇರಲಿಲ್ಲ ಎನ್ನುತ್ತಾರೆ. ಅದರಲ್ಲೂ ಕನ್ನಡ ಬಾರದ ಅನ್ಯಭಾಷಾ ನಟಿಯರೇನಾದರೂ ಸೆಟ್‌ನಲ್ಲಿದ್ದರೆ ಆಕೆಯ ಅಂಗಾಂಗ, ಹಾವಭಾವಗಳೆಲ್ಲಾ ಅಂಬರೀಶ್ ಬಾಯಲ್ಲಿ ಹೊಲಸು ಮಾತುಗಳಾಗಿ, ಸೆಟ್‌ನಲ್ಲಿರುತ್ತಿದ್ದ ಜನರಿಗೆ ಚೀಪ್ ಮನರಂಜನೆಯಾಗುತ್ತಿತ್ತು.

ಕಾಂಗ್ರೆಸ್ ಮಂತ್ರಿ-ಮೋದಿ ಭಜನೆ

"ಸಿದ್ದರಾಮಯ್ಯ ಕರ್ನಾಟಕದ ಮೋದಿ ಇದ್ದಂತೆ" ಎಂದು ಪೆದ್ದುಪೆದ್ದಾಗಿ ಭಾಷಣ ಮಾಡಿ ಕಾಂಗ್ರೆಸ್‌ನವರೇ ತಲೆ ಚಚ್ಚಿಕೊಳ್ಳುವಂತೆ ಮಾಡಿದ ಅಂಬರೀಶ್‌ಗೆ ಸೆಕ್ಯುಲರ್ ರಾಜಕೀಯದ ಎಬಿಸಿಡಿಯೂ ಗೊತ್ತಿದ್ದಂತಿಲ್ಲ. ಅಂಬಿಯ ಆ ಅಸಂಬದ್ಧ ಮಾತುಗಳೇ ಬಿಜೆಪಿಗಳ ಆಹಾರವಾದಾಗ ಕೊನೆಗೆ ಸಂಸದ ಎಚ್. ವಿಶ್ವನಾಥ್ ಕಾಂಗ್ರೆಸ್ ಮಾನ ಉಳಿಸಬೇಕಾಗಿ ಬಂತು.

ಸಿಎಂ ಮಾತಿಗೇ ಡೋಂಟ್‌ಕೇರ್

ಮೊನ್ನೆ ಜುಲೈ 2ನೇ ವಾರ ಬೆಂಗಳೂರಿನಲ್ಲಿ ನಡೆದ ಕಿಂಗ್‌ಫಿಶರ್ ಡರ್ಬಿ ರೇಸ್‌ನಲ್ಲಿ ಒಬ್ಬ ಮಾಮೂಲಿ ಜೂಜುಕೋರನಂತೆ ಸಚಿವ ಅಂಬರೀಶ್ ಸಹ ಹೋಗಿ ಬಂದದ್ದು ಮೀಡಿಯಾಗಳಲ್ಲಿ ದೊಡ್ಡ ಸುದ್ದಿಯಾಯಿತು. ಈತನ ಕುಡಿತ, ರೇಸ್, ಇಸ್ಪೀಟಿನ ಚಟಗಳೆಲ್ಲಾ ಲೋಕಕ್ಕೆ ಗೊತ್ತಿರುವ ವಿಚಾರ. ಆದರೆ ಚುನಾಯಿತ ಸರ್ಕಾರವೊಂದರ ಜವಾಬ್ದಾರಿಯುತ ಸ್ಥಾನದಲ್ಲಿರುವಾಗಲೂ ತನ್ನ ಹಳೇ ಚಾಳಿಗಳನ್ನು ಮುಂದುವರೆಸಿದರೆ ಸಮಸ್ಯೆಗಳಾಗದಿರುತ್ತವೆಯೆ?

ಹಾಗೆಂದು ಯೋಚಿಸಿದ ಸಿದ್ದರಾಮಯ್ಯ ಜುಲೈ ತಿಂಗಳ ಕೊನೆಯ ವಾರದಲ್ಲೊಮ್ಮೆ ಕ್ಯಾಬಿನೆಟ್ ಮೀಟಿಂಗ್ ನಡೆಯುವಾಗ ಅಂಬರೀಶ್‌ಗೆ "ರೇಸು etc... ಆಟ ಎಲ್ಲಾ ಸರಿಯಲ್ಲ, ಒಬ್ಬ ಕ್ಯಾಬಿನೆಟ್ ಮಿನಿಸ್ಟ್ರಾಗಿ ಕೈಲಿ ರೇಸ್ ಬುಕ್ ಹಿಡ್ಕೊಂಡು ಓಡಾಡಿದ್ರೆ ಸರಿ ಕಾಣಲ್ಲ" ಅಂದರಂತೆ. ಅಷ್ಟಕ್ಕೇ ಗರಂ ಆದ ಅಂಬರೀಶ್ ತನ್ನ ಎಂದಿನ ಉಡಾಫೆ ಶೈಲಿಯಲ್ಲಿ "ಏನೀಗ, ಅದೆಲ್ಲಾ ನನ್ನಿಷ್ಟ" ಎಂಬಿತ್ಯಾದಿಯಾಗಿ ಉಲ್ಟಾ ಮಾತಾಡಿದ್ದಾರೆ. ಅವತ್ತಿನ ಮೀಟಿಂಗ್‌ನಲ್ಲಿದ್ದ ಕೆಲ ಸಚಿವರೇ ಹೇಳುವಂತೆ ಸಿಎಂ ಸಿದ್ದರಾಮಯ್ಯ ಸಹನೆಯಿಂದ ಪುನಃ ಅಂಬರೀಶ್‌ಗೆ ಬುದ್ಧಿವಾದ ಹೇಳಲು ಮುಂದಾದಾಗ ಈತ ಬಾಯಿಗೆ ಬಂದದ್ದು ಮಾತನಾಡಿ ಜೋರು ಮಾಡಿದರಂತೆ!

ಮಂಡ್ಯದ ಪರಿಸ್ಥಿತಿ

"ಎಂಎಲ್‌ಎ ಆಗಿ ಗೆದ್ದ ಮೇಲೆ ಮಂಡ್ಯದಲ್ಲೇ ಮನೆ ಮಾಡ್ತೀನಿ" ಅಂದಿದ್ದ ಅಂಬರೀಶ್ ಗೆದ್ದನಂತರ ಮಂಡ್ಯದತ್ತ ತಿರುಗಿಯೂ ನೋಡಿಲ್ಲ. ಅಲ್ಲಿನ ಚಾಮುಂಡೇಶ್ವರಿ ನಗರದ 3ನೇ ಕ್ರಾಸಿನಲ್ಲಿರುವ ಮನೆಗೆ ಅಂಬರೀಶ್ ಬರುತ್ತಲೂ ಇಲ್ಲ. ಮಂಡ್ಯಕ್ಕೆ ಬಂದರೂ ಸಹ ಈತ ಊರಾಚೆಯ ಅಮರಾವತಿ ಹೋಟೆಲ್ ಸೇರಿಕೊಂಡರೆ ಮುಗಿಯಿತು. ಅಲ್ಲಿಗೆ ಜನಸಾಮಾನ್ಯರು ಹೋಗಲಾಗುವುದು ಇಲ್ಲ.

ಇದೆಲ್ಲಾ ಇರಲಿ ಬಿಡಿ, ಆದರೆ ಮಂಡ್ಯ ಜನರ ಹಾಗೂ ರೈತಾಪಿಯ ಕಷ್ಟ ಈಗ ಕೈಮೀರಿ ಹೋಗುತ್ತಿದೆ.

ಒಂದು ಕಡೆ ಕೆಆರ್‌ಎಸ್ ಡ್ಯಾಂ ತುಂಬಿದ್ದರೂ ನೀರಾವರಿ ಕಾಲುವೆಗಳಲ್ಲಿ ಇನ್ನೂ ನೀರು ಹರಿಸುತ್ತಿಲ್ಲ. ಮಂಡ್ಯ ಜಿಲ್ಲೆ ವ್ಯಾಪ್ತಿಯೊಳಗೆ ಅಷ್ಟೇನು ಒಳ್ಳೆಯ ಮಳೆಯೂ ಆಗಿಲ್ಲ, ಹಾಗಾಗಿ ಜಿಲ್ಲೆಯ ಬಹುತೇಕ ಕೆರೆಕಟ್ಟೆಗಳಲ್ಲಿ ಈಗಲೂ ನೀರಿಲ್ಲ, ತಮಿಳುನಾಡಿಗೆ ಇದುವರೆಗೂ 130 ಟಿಎಂಸಿಯಷ್ಟು ನೀರು ಈಗಾಗಲೇ ಹರಿದುಹೋಗಿದೆ. ಸರ್ಕಾರ ಮನಸ್ಸು ಮಾಡದಿದ್ದರೆ ಚಾನಲ್‌ಗಳ ಮೂಲಕ ಅನೇಕ ಕೆರೆಗಳನ್ನು ತುಂಬಿಸಬಹುದಿತ್ತು.

ಆದರೆ ಇದರ ಬಗ್ಗೆ ಗಮನ ಹರಿಸಬೇಕಾದವರು ಅಂಬರೀಶ್ ತಾನೆ?

ಇದಿಷ್ಟೇ ಅಲ್ಲ...

ಕಬ್ಬಿನ ಬೆಲೆ ನಿಗದಿಯಾಗದ ಕಾರಣ ಜಿಲ್ಲೆಯ ಐದು ಸಕ್ಕರೆ ಕಾರ್ಖಾನೆಗಳು ಕಬ್ಬು ಅರೆಯುವ ಕೆಲಸವನ್ನು ಇನ್ನೂ ಪ್ರಾರಂಭಿಸಿಲ್ಲ, ಮಂಡ್ಯ ಸುತ್ತಲಿನ ಪ್ರದೇಶದಲ್ಲಿ ವಾರ್ಷಿಕ 34 ಲಕ್ಷ ಟನ್ ಕಬ್ಬು ಬೆಳೆಯಲಾಗುತ್ತಿದೆ. ಅಲ್ಲಿರುವ, ಪಾಂಡವಪುರದ ಟಿಎಸ್‌ಎಸ್‌ಕೆ ಹಾಗೂ ಸಹಕಾರಿ ಸಕ್ಕರೆ ಕಾರ್ಖಾನೆ, ಕೆ.ಎಂ. ದೊಡ್ಡಿಯ ಚಾಮುಂಡೇಶ್ವರಿ ಶುಗರ್ ಫ್ಯಾಕ್ಟರಿ, ಕೊಪ್ಪದ ಎಸ್‌ಎಂಎಸ್, ಕೆ.ಆರ್. ಪೇಟೆಯ ಕೋರಮಂಡಲ ಶುಗರ್ಸ್ ಫ್ಯಾಕ್ಟರಿಗಳ ಪೈಕಿ ಒಂದರಲ್ಲೂ ಈಗಲೂ ಕಬ್ಬು ಅರೆಯುವ ಕೆಲಸ ಶುರುವಾಗಿಲ್ಲ. ಸಾಮಾನ್ಯವಾಗಿ ಪ್ರತಿವರ್ಷದ ಜೂನ್ ತಿಂಗಳಲ್ಲೇ ಈ ಕಾರ್ಖಾನೆಗಳು ಕಬ್ಬು ಅರೆಯಲು ಪ್ರಾರಂಭಿಸುತ್ತವೆ. ಹಾಗೇ ಶುರುವಾಗಿ ವರ್ಷ ಪೂರ್ತಿ ಕಬ್ಬು ಅರೆದರೂ ಒಟ್ಟಾರೆ 18 ಲಕ್ಷ ಟನ್ ಕಬ್ಬನ್ನು ಮಾತ್ರ ಅರೆಯಲು ಸಾಧ್ಯವಿದೆ. ಈಗ ನೋಡಿದರೆ ಸೆಪ್ಟೆಂಬರ್ ಬಂದಿದೆ. ಆದರೂ ಸರ್ಕಾರ ಕಬ್ಬಿಗೆ ಇನ್ನೂ ದರ ನಿಗದಿ ಮಾಡಿಲ್ಲ. ಈ ದರ ನಿಗದಿಯಾಗದೆ ಫ್ಯಾಕ್ಟರಿಗಳಲ್ಲಿ ಕೆಲಸ ಶುರುವಾಗುವುದಿಲ್ಲ.

ಈ ಸಮಸ್ಯೆಯ ಹೊಣೆ ಯಾರದ್ದು?

ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್ ಬೆಂಗಳೂರಿನಲ್ಲಿ ರೇಸು ಇಸ್ಪೀಟು ಆಡಿಕೊಂಡು, ಮಜಾ ಮಾಡಿಕೊಂಡಿದ್ದರೆ ರೈತರ ಸಮಸ್ಯೆ ಬಗೆ ಹರಿಯುತ್ತದೆಯೆ? ಕಷ್ಟ ಹೇಳಿಕೊಳ್ಳಲು ಬರುವ ಜನರನ್ನು 'ಥೂ ನನ್ಮಕ್ಳಾ...', 'ಅಮ್ಮನ್, ಅಕ್ಕನ್' ಅಂತಾ ಬೈಯ್ದು ಆಚೆಗೆ ಓಡಿಸುವುದು ಶಾಸಕ-ಸಚಿವನೊಬ್ಬ ಜನಸೇವೆ ಮಾಡುವ ರೀತಿಯಾ?

ಅಂಬರೀಶ್‌ಗೆ ಮಂಡ್ಯ ಜಿಲ್ಲೆಯ ರಾಜಕೀಯದ ಮೇಲೆ ಕಂಟ್ರೋಲ್ ಇಟ್ಟುಕೊಳ್ಳಲು ಎಷ್ಟು ಗಮನವಿದೆಯೋ ಅಷ್ಟು ಗಮನ ಜಿಲ್ಲಾಡಳಿತದ ಮೇಲೆ ಇಲ್ಲ. ಹಾಗಾಗಿ ಹದಗೆಟ್ಟಿರುವ ರಸ್ತೆಗಳು, ಮಳೆಯ ಕೊರತೆ, ರೈತರ ಬಿಕ್ಕಟ್ಟುಗಳ ಬಗ್ಗೆ ಯಾರೂ ಗಮನ ಹರಿಸುತ್ತಿಲ್ಲ. ಮಂಡ್ಯದ ಜನಸಾಮಾನ್ಯರೂ ಸಹ ಈಗ ಅಂಬರೀಶ್ ಹತ್ತಿರ ಹೋಗಲು ಹಿಂಜರಿಯುತ್ತಿದ್ದಾರೆ. ಬೈಸಿಕೊಳ್ಳಲು ರೆಡಿ ಇರುವವರು ಮಾತ್ರ ಹೋಗುತ್ತಾರೆ. ಆದರೆ ಮರ್ಯಾದಸ್ಥರು ಅಂಬರೀಶ್‌ರ ಕೆಟ್ಟ ಬೈಯ್ಗುಳದ ಬಗ್ಗೆ ಜಿಗುಪ್ಸೆ ಪಟ್ಟುಕೊಂಡು ಹತ್ತಿರ ಹೋಗದೆ ದೂರ ಉಳಿಯುತ್ತಿದ್ದಾರೆ.

ಅಂಬರೀಶ್ ಈಗ ನಿರ್ವಹಿಸುತ್ತಿರುವ ವಸತಿ ಇಲಾಖೆಯಲ್ಲಿ ಏನಾದರೂ ಕೆಲಸಗಳಾಗುತ್ತಿದ್ದರೆ ಅದಕ್ಕೆ ಇಲಾಖೆಯ ಪ್ರಿನ್ಸಿಪಲ್ ಸೆಕ್ರೆಟರಿ ರಮಣಾ ರೆಡ್ಡಿಯವರೇ ಮುಖ್ಯ ಕಾರಣ.

ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ರಾಜಕೀಯ ಹಿರಿತನ ಹಾಗೂ ಸರ್ಕಾರದ ನಾಯಕರಾಗಿ ತಮ್ಮ ಸಚಿವ ಸಹೋದ್ಯೋಗಿ ಅಂಬರೀಶ್‌ರಿಗೆ ನಾಗರಿಕ ವರ್ತನೆಗಳ ಬಗ್ಗೆ ಹಾಗೂ ಹೊಣೆಗಾರಿಕೆಯಿಂದ ವರ್ತಿಸುವ ಬಗ್ಗೆ ಬುದ್ಧಿ ಹೇಳಬೇಕಿದೆ.


ರಾಜಕೀಯ ಹಾಗೂ ಸಚಿವಗಿರಿ ಅಂದರೆ ಅದೇನು ಸಿನಿಮಾ ಶೂಟಿಂಗೂ ಅಲ್ಲ, ಸಿನಿಮಾ ಸ್ಟುಡಿಯೋ ಅಲ್ಲ. ಅಂಬರೀಶ್‌ಗೆ ಇದು ಎಷ್ಟು ಬೇಗ ಅರ್ಥವಾಗುತ್ತದೋ ಅಷ್ಟು ಉತ್ತಮ.

ಈಗಿನ ರಾಜಕೀಯ ಸನ್ನಿವೇಶದಲ್ಲಿ ಹಗರಣಗಳು, ಏನಾದಾಗಲು ಯಾವ ಮೂಲೆಯಿಂದ ಹೇಗೆ ಎದ್ದೇಳುತ್ತವೋ ಯಾರೂ ಊಹಿಸಲು ಸಾಧ್ಯವಿಲ್ಲ.

ಕುತೂಹಲ ಅಷ್ಟು, ಅಂದಾಜಾದರೂ [illegible] [illegible].

■ [illegible]

ಛಬ್ಬಿ ಗೆಲುವಿನ ಒಳಮರ್ಮ
ಬಿಜೆಪಿಗೇ ಬತ್ತಿ ಇಟ್ಟ ಉದಾಸಿ



ಇದು ಅಚ್ಚರಿಯಾದರೂ ಸತ್ಯ. ಹುಬ್ಬಳ್ಳಿಯ ಎ.ಕೆ. ಇಂಡಸ್ಟ್ರೀಸ್‌ನಲ್ಲಿ ಕಾರ್ಮಿಕರಾಗಿದ್ದ ಹಾಗೂ ಕಮ್ಯುನಿಸ್ಟ್‌ರಾಗಿದ್ದ ಗುರುಸಿದ್ದಪ್ಪ ಛಬ್ಬಿ ಅವರ ಹಿರಿಯ ಪುತ್ರ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ನಾಗರಾಜ ಛಬ್ಬಿ ಇತ್ತೀಚೆಗೆ ನಡೆದ ಧಾರವಾಡ, ಗದಗ, ಹಾವೇರಿ ವಿಧಾನ ಪರಿಷತ್ ಉಪಚುನಾವಣೆಯಲ್ಲಿ ಆಯ್ಕೆಗೊಂಡಿದ್ದಾರೆ. ಈ ಮೂಲಕ ಇಲ್ಲಿನ ರಾಜಕೀಯದ ರಂಗಿನ ನಾಟಕದ ದೃಶ್ಯಾವಳಿಗಳು ಒಂದೊಂದಾಗಿ ತೆರೆದುಕೊಂಡಿವೆ.


ಮೊದಲನೆಯದಾಗಿ ವಿಜಯೋತ್ಸವ ಆಚರಿಸುತ್ತಿರುವ ನಾಗರಾಜ ಛಬ್ಬಿಯ ಹಿನ್ನೆಲೆ ಕುತೂಹಲದಾಯಕವಾಗಿದೆ. ಫ್ಯಾಕ್ಟರಿಯಲ್ಲಿ ಕೆಲಸದಲ್ಲಿದ್ದಾಗಲೇ ಸ್ವಯಂ ನಿವೃತ್ತಿ ಪಡೆದ ಇವರ ತಂದೆ ಗುರುಸಿದ್ದಪ್ಪ ಛಬ್ಬಿ ಕೈಗೆ ಬಂದ ಗ್ರಾಚ್ಯುಟಿ ಹಣದಲ್ಲಿ ಹಳೇ ಹುಬ್ಬಳ್ಳಿಯಲ್ಲಿ ಕಿರಾಣಿ ಅಂಗಡಿಯೊಂದನ್ನು ತೆರೆದು ನಾಗರಾಜರನ್ನು ಕೂರಿಸಿದ್ದರು. ಅನುಭವದ ಕೊರತೆಯೋ, ಆಸಕ್ತಿಯ ಕೊರತೆಯೋ ಆ ಅಂಗಡಿ ಮುಚ್ಚಿಹೋಯಿತು. ಜೀವನೋಪಾಯಕ್ಕಾಗಿ ಇವರ ತಂದೆ ಪ್ರಾರಂಭಿಸಿದ ಎಪಿಎಂಸಿಯ ದಲ್ಲಾಳಿ ಅಂಗಡಿ ಇಂದಿಗೂ ಇದೆ. ಮದುವೆಯ ನಂತರ ತಂದೆಯಿಂದ ಪ್ರತ್ಯೇಕವಾಗಿರುವ ನಾಗರಾಜ್ ಛಬ್ಬಿ ಪಾಲಿಗೆ ಅವರ ಹೆಂಡತಿಯೇ ಅದೃಷ್ಟ ಬಾಗಿಲು ತೆರೆದಿದ್ದು, ಗದಗದ ಇವರ ಪತ್ನಿಯ ಕುಟುಂಬಕ್ಕೆ ಪರಿಚಿತರಾಗಿದ್ದ ಸ್ವಾಮಿ ಎಂಬ ವ್ಯಕ್ತಿಯೊಬ್ಬ ಮುಖ್ಯಮಂತ್ರಿ ಧರಮ್‌ಸಿಂಗ್ ಬಳಿ ಆಪ್ತ ಸಹಾಯಕನಾಗಿ ಕೆಲಸ ಮಾಡುತ್ತಿದ್ದರು. ನಾಗರಾಜ್ ಛಬ್ಬಿಯ ರಾಜಕೀಯ ಎಂಟ್ರಿಗೆ ಸಹಾಯಕವಾಗಿದ್ದು ಇವರ ಹೆಂಡತಿ ಕಡೆಯ ಪ್ರಭಾವಳಿಯಿಂದಲೇ.

ಇನ್ನೊಂದೆಡೆ ಕೇಂದ್ರದಲ್ಲಿ ಮಂತ್ರಿಯಾಗಿದ್ದ ಸಿದ್ದು ನ್ಯಾಮಗೌಡರೊಂದಿಗೆ ಜಾತಿ ಸಂಬಂಧದಲ್ಲಿ (ಗಾಣಿಗೇರ ಜಾತಿ) ವ್ಯವಹಾರಕ್ಕೆ ಕೈಯಿಟ್ಟ ನಾಗರಾಜ್ ಛಬ್ಬಿ ಇಂದು ಕೋಟಿ ಲೆಕ್ಕದಲ್ಲಿ ತೂಗುತ್ತಾರೆ. ಇದರೊಂದಿಗೆ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದಾರೆ. ರಾಜಕೀಯವಾಗಿ ಗುರುತಿಸಿಕೊಂಡ ಈತ ಧರಮ್‌ಸಿಂಗ್‌ಗೆ ಪರಮಾಪ್ತ, ಮಾತ್ರವಲ್ಲದೆ ಕೇಂದ್ರದಲ್ಲಿ ಖರ್ಗೆ, ಆಸ್ಕರ್‌ರಂತಹವರೊಂದಿಗೆ ಹಾಗೂ ರಾಜ್ಯದಲ್ಲಿ ಸಚಿವ ಸಂತೋಷ್ ಲಾಡ್‌ಗೆ ಆಪ್ತರಾಗಿದ್ದಾರೆ. ಹಾಗೆಯೇ ಮುಖ್ಯಮಂತ್ರಿ ಸಿದ್ದು ಕೃಪೆಯನ್ನು ಗಳಿಸಿರುವುದೇ ಇವರ ಪ್ಲಸ್‌ಪಾಯಿಂಟ್.

ಈ ಪರಿಷತ್ ಸ್ಥಾನಕ್ಕೆ ಕಾಂಗ್ರೆಸ್‌ನಲ್ಲಿ ತೀವ್ರ ಪೈಪೋಟಿ ಇತ್ತು. ಎಚ್.ಕೆ.ಪಾಟೀಲ್ ಸೋದರ ಡಿ.ಆರ್. ಪಾಟೀಲ್‌ರನ್ನು ಬದಿಗೊತ್ತಿ ಟಿಕೆಟ್ ಪಡೆದರೆಂದರೆ ನಾಗರಾಜ್ ಛಬ್ಬಿ ಯಾವ ಮಟ್ಟಕ್ಕೆ ಬೆಳೆದು ನಿಂತಿದ್ದಾರೆ ಎಂಬುದು ಅರ್ಥವಾಗುತ್ತದೆ. ಧಾರವಾಡ ಉಸ್ತುವಾರಿ ಮಂತ್ರಿ ಸಂತೋಷ್ ಲಾಡ್ ಮತ್ತು ಹಾವೇರಿಯ ಉಸ್ತುವಾರಿ ಮಂತ್ರಿ ಪ್ರಕಾಶ್ ಹುಕ್ಕೇರಿ ಈ ಛಬ್ಬಿಯ ಪರವಾಗಿ ಪ್ರಬಲ ಲಾಬಿ ಮಾಡಿಯೇ ಟಿಕೆಟ್ ಗಿಟ್ಟಿಸಿದ್ದರು.

ಇದು ಕಾಂಗ್ರೆಸ್‌ನ ಒಳರಾಜಕೀಯವಾದರೆ, ಇತರ ಪಕ್ಷಗಳ ಒಳಸುಳಿಗಳು ಈ ಚುನಾವಣೆಯಲ್ಲಿ ನೇರವಾಗಿ ಕೆಲಸ ಮಾಡಿದೆ. ಮಂಡ್ಯ ಮತ್ತು ಬೆಂಗಳೂರು ಲೋಕಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್, ಜೆಡಿಎಸ್‌ಗಳು ಜಿದ್ದಾಜಿದ್ದಿ ಹೋರಾಟಕ್ಕೆ ಬಿದ್ದಿದ್ದು ನಮಗೆಲ್ಲಾ ಗೊತ್ತಿದೆ. ಆದರೆ ಪದ್ಮನಾಭನಗರದಿಂದ ಹೊರಬಿದ್ದ ಆದೇಶವನ್ನು ಬದಿಗೊತ್ತಿ ಸ್ಥಳೀಯ ಜೆಡಿಎಸ್ ಮುಖಂಡರು ಕಾಂಗ್ರೆಸ್ ಜೊತೆ ತೆರೆಮರೆಯಲ್ಲಿ ಕೈಗೂಡಿಸಿದ್ದರೆಂಬ ಸುದ್ದಿ ಈಗ ರಾಜಕೀಯ ವಲಯದಲ್ಲಿ ಚರ್ಚಿತವಾಗುತ್ತಿದೆ.

ಒಂದು ವಿಷಯವನ್ನು ಇಲ್ಲಿ ನೆನಪಿಡಲೇಬೇಕು. ಇಂಥಾ ಹೊಂದಾಣಿಕೆ ನಡೆದದ್ದು ಪರಿಷತ್ ಸ್ಥಾನಕ್ಕಾಗಿ ಅಲ್ಲವೇ ಅಲ್ಲ; ರಾಜ್ಯದಲ್ಲಿ ಎರಡನೇ ಅತಿದೊಡ್ಡ ನಗರಪಾಲಿಕೆಯಾದ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಮೇಯರ್ ಸ್ಥಾನವನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳಲಿಕ್ಕಾಗಿ. ಒಟ್ಟು 67 ಸದಸ್ಯರಲ್ಲಿ ಬಿಜೆಪಿ 36 ಸದಸ್ಯರನ್ನು ಹೊಂದಿದ್ದು ಹಿಂದಿನಿಂದಲೂ ತನ್ನ ಹಿಡಿತವನ್ನು ಮುಂದುವರೆಸಿದೆ. ಈ ಪಾಲಿಕೆಯಲ್ಲಿ ವಾರ್ಷಿಕ ಸುಮಾರು 300 ಕೋಟಿ ರೂಪಾಯಿ




ಚಲಾವಣೆಯಾಗುತ್ತಿರುವುದರಿಂದ ಸಹಜವಾಗಿ ಇದು ಎಲ್ಲ ರಾಜಕಾರಣಿಗಳಿಗೂ ಒಂದು ಆಕರ್ಷಕ ತಾಣ. ಈ ಬಾರಿ ಮೇಯರ್ ಸ್ಥಾನಕ್ಕಾಗಿ ಕಾಂಗ್ರೆಸ್-ಜೆಡಿಎಸ್‌ಗಳು ಜಂಟಿಯಾಗುವ ಲಕ್ಷಣಗಳಿವೆ.


ಮತ್ತೊಂದು ಕಡೆ ಯಡ್ಡಿಯ ಕೆಜೆಪಿ ಬಿಜೆಪಿ ಜೊತೆ ಕೈಜೋಡಿಸಿ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗುತ್ತಿದ್ದರೆ, ಅದೇ ಕೆಜೆಪಿ ಬಾವುಟದಡಿಯಿರುವ ಉದಾಸಿ ಅಂಡ್ ಗ್ಯಾಂಗ್ ಬಹಿರಂಗವಾಗಿ ಬಿಜೆಪಿ ಅಭ್ಯರ್ಥಿಯಾಗಿದ್ದ ಜಗದೀಶ್ ಶೆಟ್ಟರ್ ಸೋದರ ಪ್ರದೀಪ್ ಶೆಟ್ಟರ್‌ರನ್ನು ಸೋಲಿಸಲೇಬೇಕೆಂದು ಟೊಂಕಕಟ್ಟಿ ನಿಂತಿದ್ದೂ ಕೂಡ ಫಲಿತಾಂಶದ ಮೇಲೆ ಪರಿಣಾಮ ಬೀರಿದೆ. ಪಕ್ಷೇತರನಾಗಿ ಸ್ಪರ್ಧಿಸಿದ್ದ ಹಾವೇರಿ ಜಿಲ್ಲೆಯ ಬಸವರಾಜ್ ಹಾದಿಗೆ ಬದ್ಧ ಕೆಜೆಪಿಯ 174 ಮತಗಳಿಂದಾಗಿ ಶೆಟ್ಟರ್ ಓಟುಗಳು ಹಂಚಿಹೋಗಿ, ಗೆಲ್ಲಬೇಕಿದ್ದ ಸೀಟನ್ನು ಕಳೆದುಕೊಳ್ಳಲು ಕಾರಣವಾಯಿತು. ಮತ ಒಡೆಯುವ ಉದಾಸಿರು ಗೇಮ್ ಪ್ಲಾನ್ ವರ್ಕ್‌ಔಟ್ ಆಯಿತು. ಒಟ್ಟು ಚಲಾವಣೆಯಾದ 7,293 ಮತಗಳಲ್ಲಿ ಕಾಂಗ್ರೆಸ್‌ನ ಛಬ್ಬಿ 3,492 ಮತ ಪಡೆದು ತಮ್ಮ ಸಮೀಪ ಪ್ರತಿಸ್ಪರ್ಧಿ ಪ್ರದೀಪ್ ಶೆಟ್ಟರ್ ವಿರುದ್ಧ 43 ಮತಗಳ ಅಂತರದಿಂದ ಗೆಲುವು ಸಾ… ದಾರಿ ಸುಗಮವಾಯಿತು.


ಮಾಜಿ ಸಿಎಂ ಜಗದೀಶ್ ಶೆಟ್ಟ… ಸಹೋದರನ ಗೆಲುವಿಗಾಗಿ ರಾಜ್ಯ ಮ… ಕೆಜೆಪಿಯ ಸುಪ್ರೀಂ ಯಡ್ಡಿಯ… ಕೂಡಾವಳಿ ಮಾಡಿಕೊಂಡಿದ್ದು, ಜೆ… ನಾಯಕರ ಮನೆ ಬಾಗಿಲು ಕಾ… ಯಾವುದೂ ಉಪಯೋಗಕ್ಕೆ ಬರಲಿ… ಚುನಾವಣೆಯಲ್ಲಿ ನಾಗರಾಜ್ ಛಬ್ಬಿ… ಕೇವಲ 43 ಮತಗಳ ಅಂತರದಿಂದ… ಅವರ ಗೆಲುವು • ಬಿಜೆಪಿ … ಉರುಳಾಗಿದೆ. ಬಿಜೆಪಿ, ಕೆಜೆಪಿ, ಜೆಡಿಎಸ್ ನಾ… ಒಂದುಗೂಡಿಯೂ ಸೋತಿದ್ದು ಅವಮಾನಕಾರಿ… ಮತ್ತೇನು? ಇಷ್ಟು ಮಾತ್ರವಲ್ಲದೆ ಮುಂದಿನ ದಿ… ಇದು ಮತ್ತಷ್ಟು ರಾಜಕೀಯ ಧ್ರುವೀಕ… ಕಾರಣವಾಗಲಿದೆ.

ಇಲ್ಲಿ ಮತ್ತೊಂದು ವಿಷಯವನ್ನು ನೆನಪಿ… ಉಚಿತ. ಅಹಿಂದ ಸಂಘಟನೆ ಹುಟ್ಟಿದ್ದೇ ಹುಬ್ಬ… ಸಿದ್ದರಾಮಯ್ಯನವರಿಗೆ ದೊಡ್ಡ ಇಮೇಜ್ ಕೊಟ್ಟದ… ಹುಬ್ಬಳ್ಳಿ ಹಾಗೂ ಉತ್ತರ ಕರ್ನಾಟಕದ ಅಹಿಂದ ಸ… ಆದರೆ ನಂತರದ ದಿನಗಳಲ್ಲಿ ಅದನ್ನು ಸಂಘ… ಹಾಗೂ ಬಿಜೆಪಿಗಳು ಹೈಜಾಕ್ ಮಾಡುವಲ್ಲಿ… ಯಶಸ್ವಿಯಾಗಿದ್ದವು. ಈಗ ಮತ್ತೆ ಅಹಿಂದ… ಒಗ್ಗೂಡುವ ಲಕ್ಷಣಗಳು ಗೋಚರಿಸುತ್ತಿವೆ. ಈ ಅ… ಸದುಪಯೋಗ ಮಾಡಿಕೊಂಡರೆ ಮುಂಬರುವ ಲೋ… ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಫಲ ಕೊಡುತ್ತದೆ. … ಹೋದರೆ ಇತಿಹಾಸ ಮರುಕಳಿಸುತ್ತದೆ ಎಂ… ಕಾಂಗ್ರೆಸ್‌ನವರು ನೆನಪಿಟ್ಟುಕೊಂಡರೆ ಒಳ್ಳೆಯದು…

■ ಹುಬ್ಬಳ್ಳಿಯ…







ಮದ್ರಾಸ್ ಕೆಫೆ: ಒಂದು ರಾಜಕೀಯ ಕೊಲೆಯ ಸುತ್ತ

ಜಾಫ್ನಾ ಇನ್ನೂ ಒಣಗದ ಗಾಯ! ಅಲ್ಲಿನ ದುರಂತಗಳಿಗೆ ಕೇವಲ ಪ್ರಭಾಕರನ್ ಒಬ್ಬನೇ ಕಾರಣ ಎನ್ನುವುದು ನಿಜವೇ ಆಗಿದ್ದರೆ, ಆತ ಸತ್ತ ಬಳಿಕವಾದರೂ ಅಲ್ಲಿನ ತಮಿಳರ ಬದುಕಲ್ಲಿ ಸೂರ್ಯೋದಯವಾಗ ಬೇಕಾಗಿತ್ತು, ಅವರ ಗಾಯಗಳು ಒಣಗುವ ಬದಲು ಇನ್ನಷ್ಟು ಕೊಳೆಯತೊಡಗಿದೆ. ಅಲ್ಲಿ ನಡೆದ ಮಾರಣಹೋಮ ಬರೇ ಶ್ರೀಲಂಕಾವನ್ನು ಮಾತ್ರವಲ್ಲ, ಭಾರತವನ್ನೂ ಕುಕ್ಕಿ ತಿನ್ನುತ್ತಿದೆ. ಇಂತಹ ಸಂದರ್ಭದಲ್ಲಿ ಬಾಲಿವುಡ್‌ನ ಅಪ್ಪಟ ಕಮರ್ಷಿಯಲ್ ನಿರ್ದೇಶಕನೊಬ್ಬ ಶ್ರೀಲಂಕಾದ ತಮಿಳರ ದುರಂತವನ್ನು ವಸ್ತುವಾಗಿಟ್ಟುಕೊಂಡು ಸಿನಿಮಾ ಮಾಡಲು ಹೊರಟಾಗ, ಸಂವೇದನಾಶೀಲ ಮನಸ್ಸುಗಳು ಆತಂಕಗೊಳ್ಳುವುದು ಸಹಜ. ಜಾಫ್ನಾದಲ್ಲಿ ನಡೆಯುತ್ತಿರುವುದು ಯಾರ ಮನಸ್ಸನ್ನೂ ರಂಜಿಸುವುದಕ್ಕೆ ಯೋಗ್ಯವಲ್ಲದ ಕಥಾನಕಗಳು. ಆದರೆ ಎಲ್ಲ ಆತಂಕ, ಟೀಕೆಗಳನ್ನು ಒದ್ದು ಒಂದು ರಾಜಕೀಯ ಥ್ರಿಲ್ಲರ್ ಚಿತ್ರವಾಗಿ 'ಮದ್ರಾಸ್ ಕೆಫೆ' ಮೂಡಿ ಬಂದಿದೆ ಇದು ಒಬ್ಬ ನಿರ್ದೇಶಕನ ಯಶಸ್ವಿಯೂ ಆಗಿರಬಹುದು ಅಥವಾ ದುರಂತಗಳಲ್ಲೂ ರಂಜನೆಗಳನ್ನು ಅರಸುವ ಮನುಷ್ಯನ ಮನಸ್ಸಿನ ನಿರ್ಭಾವ, ನಿರ್ಲಜ್ಜ ಸ್ಥಿತಿಯೂ ಆಗಿರಬಹುದು.

'ವಿಕ್ಕಿ ಡೋನರ್' ಭಿನ್ನ ಹಾಸ್ಯ ಚಿತ್ರದ ಮೂಲಕ ಎಲ್ಲರಿಂದಲೂ ಮೆಚ್ಚುಗೆ ಗಳಿಸಿದ ನಿರ್ದೇಶಕ ಶೂಜಿತ್ ಸರ್ಕಾರ್. 'ವೀರ್ಯದಾನ'ವೆಂಬ ಅತಿ ಸೂಕ್ಷ್ಮವಾದ ಕಥಾವಸ್ತುವನ್ನು ಹಾಸ್ಯ ರೂಪದಲ್ಲಿ ತೆರೆಗಿಳಿಸಿ ಯಶಸ್ವಿಯಾಗುವುದು ಸಣ್ಣ ವಿಷಯವೇನೂ ಅಲ್ಲ. ಆದರೆ, ಈ ನಿರ್ದೇಶಕರ ಮನಸ್ಥಿತಿಗೆ ಹೊರತಾದ ವಸ್ತು ಶ್ರೀಲಂಕಾ ತಮಿಳರ ಸಂಕಟಗಳು. ಆರಂಭದಲ್ಲಿ 'ಜಾಫ್ನಾ' ಎಂದು ಹೆಸರಿಸಲಾಗಿದ್ದ ಈ ಚಿತ್ರವನ್ನು ಬಳಿಕ 'ಮದ್ರಾಸ್ ಕೆಫೆ' ಎಂದು ಬದಲಿಸಲಾಯಿತು. ಥ್ರಿಲ್ಲರ್ ರಾಜಕೀಯ ಚಿತ್ರ ಎಂಬ ಹಣೆಪಟ್ಟಿಯೊಂದಿಗೆ ಶೂಟಿಂಗ್ ಆರಂಭಿಸಿದ ಈ ಚಿತ್ರ, ಒಂದಲ್ಲ ಒಂದು ಕಾರಣದಿಂದ ಸದಾ ಮಾಧ್ಯಮಗಳಲ್ಲಿ ಸುದ್ದಿ ಮಾಡುತ್ತಿತ್ತು, ಇದೀಗ ತಮಿಳುನಾಡಿನಲ್ಲಿ ಬಿಡುಗಡೆಯ ಬಳಿಕವೂ ಈ ಚಿತ್ರ ವಿವಾದವಾಗಿದೆ ಅಥವಾ ವಿವಾದವಾಗಬೇಕು ಎನ್ನುವುದು ಚಿತ್ರ ತಂಡದ ಪರೋಕ್ಷ ಆಸೆಯೂ ಆಗಿರಬಹುದು.

ರಾಜೀವ್ ಗಾಂಧಿಯ ಹತ್ಯೆಯನ್ನು ವಸ್ತುವಾಗಿಟ್ಟುಕೊಂಡು 'ಮದ್ರಾಸ್ ಕೆಫೆ'ಯನ್ನು ಹೆಣೆಯಲಾಗಿದೆ. ರಾಜೀವ್ ಗಾಂಧಿಯ ಹತ್ಯೆಯಿಂದಲೇ ಚಿತ್ರ ಆರಂಭವಾಗುತ್ತದೆ. ಮೇಜರ್ ವಿಕ್ರಮ್ ಸಿಂಗ್ (ಜಾನ್ ಅಬ್ರಹಾಂ) ಪಾದ್ರಿಯೊಬ್ಬನ ಜೊತೆಗೆ ತನ್ನ ವಿಫಲ ವೃತ್ತಿಬದುಕಿನ ಫ್ಲಾಶ್‌ಬ್ಯಾಕ್ ನಿವೇದನೆಗಳೊಂದಿಗೆ. ಶ್ರೀಲಂಕಾದಲ್ಲಿ ಭಾರತದ ಶಾಂತಿಪಡೆ ತನ್ನ ಗುರಿಯನ್ನು ತಲುಪಲು ವಿಫಲವಾಗಿ, ತಮಿಳು ಉಗ್ರವಾದಿಗಳ ಜೊತೆಗೆ ಹೋರಾಟಕ್ಕಿಳಿಯುವ ಸನ್ನಿವೇಶ ನಿರ್ಮಾಣವಾಗಿರುವುದು ಭಾರತ ಸರಕಾರಕ್ಕೆ ತಲೆನೋವಾಗುತ್ತದೆ. ಆದುದರಿಂದ 'ರಾ' ಸಹಕಾರದೊಂದಿಗೆ ಮೇಜರ್ ವಿಕ್ರಮ್ ಸಿಂಗ್‌ನನ್ನು ಜಾಫ್ನಾಕ್ಕೆ ಕಳುಹಿಸಲಾಗುತ್ತದೆ. ಅಲ್ಲಿ ಉಗ್ರವಾದಿ ಅಣ್ಣಾನನ್ನು ಹಿಡಿಯಲು ಅಥವಾ ಕೊಂದು ಹಾಕಲು ಉಳಿದ ಗುಂಪುಗಳ ನೆರವನ್ನು ತನ್ನದಾಗಿಸಿಕೊಳ್ಳಲು ತಂತ್ರಗಳನ್ನು ಹೆಣೆಯುವುದು ವಿಕ್ರಂಸಿಂಗ್ ಕೆಲಸ. ಸಿಂಗ್ ತನ್ನ ಕಾರ್ಯವ್ಯೂಹಕ್ಕೆ ಕಾಲಿಟ್ಟಂತೆ, ಶ್ರೀಲಂಕಾ ತಮಿಳರ ಬದುಕನ್ನು ಸುತ್ತಿಕೊಂಡ ರಾಜಕೀಯ ಒಳಸುಳಿಗಳಲ್ಲಿ ಅವನೂ ಸಿಲುಕಿಕೊಳ್ಳಬೇಕಾಗುತ್ತದೆ. ಆರಂಭದಲ್ಲೇ ಅವನು ತಮಿಳು ಉಗ್ರರ ಕೈಯಲ್ಲಿ ಸೋಲನುಭವಿಸುತ್ತಾನೆ. ಅದರ ಮೂಲಕ, ಶಾಂತಿಪಡೆಯ ವೈಫಲ್ಯದ ಹಿಂದಿರುವ ತನ್ನವರದೇ ದ್ರೋಹ, ಅದಕ್ಕೆ ಬಲಿಯಾಗುವ ಅಮಾಯಕ ಸೈನಿಕರು, ಸ್ಥಳೀಯರು ಇವೆಲ್ಲವೂ ಒಂದೊಂದಾಗಿ ತನ್ನ ರಹಸ್ಯಗಳನ್ನು ಬಿಚ್ಚಿಕೊಳ್ಳತೊಡಗುತ್ತದೆ. ಕಡೆಗೂ ಇವನು ತನ್ನ ರಾಜತಂತ್ರಗಾರಿಕೆಯ ಮೂಲಕ ಅಣ್ಣಾನ ನೆಲೆಯನ್ನು ಕಂಡುಹಿಡಿಯುವಲ್ಲಿ ಯಶಸ್ವಿಯಾಗುತ್ತಾನೆ. ಶಾಂತಿಪಡೆ ಅಣ್ಣಾ ನೆಲೆಗೆ ಧಾಳಿ ನಡೆಸುತ್ತದೆ. ಕೂದಲೆಳೆಯಲ್ಲಿ ಅಣ್ಣಾ ಜೀವವನ್ನು ಉಳಿಸಿಕೊಳ್ಳುತ್ತಾನೆ. ಆದರೆ ಇದರ ಪರಿಣಾಮವಾಗಿ ರಾಜೀವ್ ಗಾಂಧಿ ಹತ್ಯೆಯ ಯೋಜನೆ ಸಿದ್ಧಗೊಳ್ಳುತ್ತದೆ. ಹಾಗೆಯೇ ತನ್ನ ವೈಯಕ್ತಿಕ ಬದುಕಿನಲ್ಲೂ ವಿಕ್ರಮ್ ಸಿಂಗ್ ಸಂಘರ್ಷವನ್ನು ಎದುರಿಸಬೇಕಾಗುತ್ತದೆ.

ಚಿತ್ರದ ಪೂರ್ವಾರ್ಧ ಜಾಫ್ನಾವಾದರೆ, ಉತ್ತರಾರ್ಧ ಭಾರತ ಅಥವಾ ತಮಿಳುನಾಡು. ಸಿಂಗ್ ಕಾರ್ಯಾಚರಣೆಯಿಂದಾಗಿ ರಾಜೀವ್ ಗಾಂಧಿ ಹತ್ಯೆಯ ಸಂಚು ಬಯಲಾಗುತ್ತದೆ. ತನಿಖೆಯಲ್ಲಿ ರಾಜೀವ್ ಗಾಂಧಿಯನ್ನು ಎಲ್ಲಿ ಹೇಗೆ ಕೊಲ್ಲಲಾಗುತ್ತದೆ ಎನ್ನುವುದನ್ನೂ 'ರಾ' ಕಂಡುಹಿಡಿಯುವಲ್ಲಿ ಯಶಸ್ವಿಯಾಗುತ್ತದೆ. ಆದರೆ ರಾಜಕೀಯ ವಿಪರ್ಯಾಸಗಳಿಂದಾಗಿ ಅವರನ್ನು ಬದುಕಿಸುವಲ್ಲಿ ವಿಫಲವಾಗುತ್ತದೆ. ಹೀಗೆ ಭಾರತ ಹೇಗೆ ಸ್ವಯಂ ತಪ್ಪಿನಿಂದ ತನ್ನ ಪ್ರಧಾನಿಯನ್ನು ಕಳೆದುಕೊಂಡಿತು ಎನ್ನುವುದನ್ನು 'ಮದ್ರಾಸ್ ಕೆಫೆ' ಚಿತ್ರ ಹೇಳುವುದಕ್ಕೆ ಪ್ರಯತ್ನಿಸುತ್ತದೆ.

ಚಿತ್ರದ ನಿಲುವನ್ನು ಪಕ್ಕಕ್ಕಿಟ್ಟು ಚರ್ಚಿಸಿದರೆ, ಎಲ್ಲ ಘಟನೆಗಳನ್ನು ಒಂದೆಡೆ ಸೇರಿಸಿ, ಜೋಡಿಸಿ, ಅದಕ್ಕೆ ಮಾಂಸತುಂಬಿ ಸಿನಿಮಾ ಎಂಬ ಜೀವ ನೀಡುವಲ್ಲಿ ಶೂಜಿತ್ ಯಶಸ್ವಿಯಾಗಿದ್ದಾರೆ. ಚಿತ್ರದ ಹೆಗ್ಗಳಿಕೆಯೆಂದರೆ, ಚಿತ್ರಕತೆ(ಸೋಮನಾಥ್ ಡೋ ಮತ್ತು ಶುಭೇಂಧು ಭಟ್ಟಾಚಾರ್ಯ ಅವರ ಕತೆ)ಯ ಗಾಂಭೀರ್ಯಕ್ಕೆ ಪೂರಕವಾಗಿ, ವಾಸ್ತವಿಕ ನೆಲೆಯಲ್ಲಿ ಕತೆಯನ್ನು ನಿರೂಪಿಸಿರುವು… ದೃಶ್ಯಗಳನ್ನು ಕಟ್ಟಿಕೊಟ್ಟಿರುವುದು. ಚಿತ್ರದ … ಹೆಗ್ಗಳಿಕೆಯೆಂದರೆ ಜಾನ್ ಅಬ್ರಹಾಂ. ಸಾಧಾರಣವಾ… ಅಬ್ರಹಾಂ 'ರಾ' ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಾ… ಹೊಡಿಬಡಿ ದೃಶ್ಯಗಳ ನಿರೀಕ್ಷೆಗಳಿರುತ್ತವೆ. … ಸಲ್ಮಾನ್, ಸೈಫ್ ಅಲಿಖಾನ್ 'ರಾ' ಏಜೆಂಟ್‌ಗಳ… ಒಂದು ಮಾದರಿಯನ್ನು ಹಾಕಿಕೊಟ್ಟಿದ್ದಾರೆ. ಬಾ… ಈ ಮಾದರಿಯನ್ನು ಮುರಿಯುವಲ್ಲಿ ಜಾನ್ … ಯಶಸ್ವಿಯಾಗಿದ್ದಾರೆ. ನರ್ಗೀಸ್ ಫಖ್ರಿಯದು … ಪತ್ರಕರ್ತೆಯ ಪಾತ್ರ. ಹೆಚ್ಚು ವ್ಯಾಪ್ತಿ ಇಲ್ಲದ ಪಾತ್ರ… ತನ್ನ ಮಿತಿಯಲ್ಲಿ ಪಾತ್ರಕ್ಕೆ ನ್ಯಾಯ ನೀಡಿದ್ದಾರೆ. … ದೇಶದ್ರೋಹಿ ಬಾಲನ ಪಾತ್ರದಲ್ಲಿ ನಟಿಸಿದ… ಬೆಳವಾಡಿಯ ನಟನೆ ಇಡೀ ಚಿತ್ರದ … ತೂಕವಾಗಿದೆ. ತನ್ನ ಮ್ಯಾನರಿಸಂನ ಮೂಲಕ … ತಟ್ಟುವಂತೆ ಅಭಿನಯ ನೀಡಿದ್ದಾರೆ ಬೆಳವಾ… ಭಾಸ್ಕರನ್ ಪಾತ್ರದಲ್ಲಿ ಅಜಯ್ ರತ್ನಂ … ಮೆಲೋಡ್ರಾಮಾಗಳಿಲ್ಲದೆ ನಟಿಸಿ ಸೈ ಎನಿಸಿಕೊ… ಸಂಗೀತ ತಣ್ಣಗೆ ಎದೆಯನ್ನು ತೊಯ್ಯುವಂತೆ ವ… ಛಾಯಾಗ್ರಹಣವಂತೂ ಅದ್ಭುತವಾಗಿದೆ.

ಒಟ್ಟಿನಲ್ಲಿ ಚಿತ್ರ ನಾವು ನಮ್ಮ ಮಾಜಿ ಪ್ರ… ಹೇಗೆ ಕಳೆದುಕೊಂಡೆವು ಎನ್ನುವುದನ್ನು ಕೇಂ… ಆದರೆ ಅದರ ಜೊತೆಜೊತೆಗೆ ಮಹತ್ವದ್ದೆನ್ನಿಸು… ಮನುಷ್ಯತ್ವವನ್ನೇ ಕಳೆದುಕೊಂಡ ಜಾಗತಿಕ ರಾಜ… ಚರ್ಚಿಸುವಲ್ಲಿ ಈ ಚಿತ್ರ ವಿಫಲವಾಗಿದೆ.

■ …

ಕೋಮು ಧ್ರುವೀಕರಣದ ವೈರಸ್‌ಗೆ ತಕ್ಷಣ ಮದ್ದರೆಯಬೇಕಾಗಿದೆ

ರಾವಳಿ ಜಿಲ್ಲೆಗಳ ಕೆಲವು ಸರಕಾರಿ ಕಾಲೇಜುಗಳಲ್ಲಿ ಕಳು ಕೋಮು ಆಧಾರಿತ ಗುಂಪುಗಳನ್ನು ಡು ಕ್ಷುಲ್ಲಕ ಕಾರಣಗಳಿಗಾಗಿ ಕ್ಯಾಂಪಸ್ ಒಳಗಡೆಯೇ ಹೊಡೆದಾಡತೊಡಗಿದ್ದಾರೆ. ಪರಿಸ್ಥಿತಿ ಬೂದಿ ವ ಕೆಂಡದಂತಿದ್ದು ಚಿಕ್ಕಪುಟ್ಟ ಘಟನೆಗಳೂ ುಸ್ವರೂಪವನ್ನು ಪಡೆದುಕೊಳ್ಳುತ್ತಿವೆ. ಈ ನಗಳು ಇದಕ್ಕೆಂದೇ ಕಾದಿರುವ ಬಾಹ್ಯಶಕ್ತಿಗಳ ಕ್ಕೆ ಎಡೆಮಾಡಿಕೊಡುತ್ತಿವೆ. ಸಮಾಜಕ್ಕೆ ಈಗಾಗಲೆ ವ ಕೋಮು ಧ್ರುವೀಕರಣದ ವೈರಸ್ ಇದೀಗ ಮಟ್ಟಯಕ್ಕೂ ವಿಸ್ತರಿಸುತ್ತಿರುವುದು ತುಂಬಾ ತುಂಬಾ ಾತಿ ವಿದ್ಯಮಾನವಾಗಿದೆ.

ಭಾರತೀಯ ಸಮಾಜದಲ್ಲಿ

ೀಮುವಾದಿ ಶಕ್ತಿಗಳು ಬಹುಧರ್ಮೀಯ, ಸ್ಕೃತಿಯ ನಮ್ಮ ಈ ನಾಡಿನಲ್ಲಿ ಕಳೆದ ಹಲವಾರು ಂದ ಸ್ವಮತಾಂಧತೆ, ಪರಮತ ಅಸಹಿಷ್ಣುತೆಯನ್ನು ಬಂದಿವೆ. ಭಾರತದ ಜಾತ್ಯತೀತ ಪರಂಪರೆಯನ್ನು ಳಿಸಿ ಅದನ್ನೊಂದು ಮತೀಯ ರಾಷ್ಟ್ರವಾಗಿ ಸುವುದೇ ಇವುಗಳ ಅಂತಿಮ ಗುರಿ. ಉದ್ದೇಶ ಾಗಿ ಒಂದು ಅಜೆಂಡಾವನ್ನೂ ಹಾಕಿಕೊಂಡಿರುವ ತ್ತ ಶಕ್ತಿಗಳು ನಿರ್ಭಿಡೆಯಾಗಿ, ವ್ಯವಸ್ಥಿತವಾಗಿ ಚರಿಸುತ್ತಾ ಬಂದಿವೆ. ಇಂದು ನಾಡಿನೆಲ್ಲೆಡೆ ಸದ್ದಿಲ್ಲದೆ ಕೋಮು ಧ್ರುವೀಕರಣ ಪ್ರಕ್ರಿಯೆ ಇದರ ಒಂದು ಾಗಿದೆ. ಪ್ರತ್ಯೇಕ ಕೋಮುಗಳು ಪ್ರತ್ಯೇಕ ವಸತಿ ಯಗಳನ್ನು ನಿರ್ಮಿಸಿಕೊಳ್ಳುತ್ತಿವೆ. ನಿರ್ದಿಷ್ಟ ಾಯಗಳಿಗೆ ಸೇರಿದ ಜನರಿಗೆ ಕೆಲವು ವಸತಿ ಳಲ್ಲಿ ಬಾಡಿಗೆ ಅಥವಾ ಖರೀದಿ ಅವಕಾಶಗಳನ್ನು ಸಲಾಗುತ್ತಿದೆ. ಕೆಲವು ಸಂಸ್ಥೆಗಳಲ್ಲಿ ೀಗಾವಕಾಶಗಳನ್ನೂ ನಿರಾಕರಿಸಲಾಗುತ್ತಿದೆ. ುಖನ ವಿದ್ಯಮಾನಗಳ ಬಗೆಗೆ ನನ್ನ ಕೆಲವು ದ ತಿಳಿದುಕೊಂಡಿದ್ದೇನೆ. ಇನ್ನು ದೇಶದ ಳಲ್ಲಿ ನಡೆಯುತ್ತಿರುವ ಧ್ರುವೀಕರಣ ಕುರಿತಂತೆ ಂಗಳಲ್ಲಿ ಆಗಾಗ ವರದಿಗಳು ಬರುತ್ತಿವೆ.

ಕರಾವಳಿಯ ಸಮಾಜದಲ್ಲಿ

ಕರಾವಳಿ ಜಿಲ್ಲೆಗಳಲ್ಲೂ ಕೋಮು ಧ್ರುವೀಕರಣ ವುದನ್ನು ಗಮನಿಸಬಹುದು. ಕಳೆದ ವರ್ಷ ರಿನ ಅಪಾರ್ಟ್‌ಮೆಂಟ್ ಒಂದರಲ್ಲಿ ಕಂಡುಬಂದ ಇತ್ತೀಚೆಗೆ ವಾರ್ತಾಭಾರತಿ ಪತ್ರಿಕೆಯ ಓದುಗರ ದಲ್ಲಿ ಪ್ರಕಟವಾದ ರೈನಹರಾ ಎಂಬವರ ನಗಳು, ಸನತ್ ಕುಮಾರ್ ಬೆಳಗಲಿ ಮತ್ತು ಶಶಿ ರವರ ಲೇಖನಗಳು ಸಮಸ್ಯೆಯ ಗಂಭೀರತೆಯ ಾಕಷ್ಟು ಬೆಳಕು ಚೆಲ್ಲುತ್ತವೆ.

ವಾಗಿ ಕರಾವಳಿ ಜಿಲ್ಲೆಗಳು ಕಳೆದ ಸುಮಾರು ಮೂರು ದಶಕಗಳಿಂದೀಚೆಗೆ ಕೋಮುವಾದಿ ಟುಂಬೊಲವಾಗಿಬಿಟ್ಟಿವೆ. ಇಲ್ಲಿ ಅವರು ಆಡಿದ್ದೇ ಳಿದ್ದೇ ವೇದವಾಕ್ಯ ಎಂಬಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಸಂವಿಧಾನ ವಿರೋಧಿ ಕೋಮುವಾದಿ ಶಕ್ತಿಗಳ ವಿರುದ್ಧ ಸಕಾಲಿಕ ಕಠಿಣ ಕ್ರಮ ಕೈಗೊಳ್ಳದಿದ್ದುದರ ಪರಿಣಾಮವಾಗಿ ಅವುಗಳಿಂದು ಸ್ವಚ್ಛಂದವಾಗಿ ಕಾರ್ಯಾಚರಿಸುತ್ತಾ ಇವೆ. ಇದಕ್ಕೆ ಆಡಳಿತ ಮತ್ತು ಪೊಲೀಸ್ ವ್ಯವಸ್ಥೆಗಳಲ್ಲಿರುವ ಗಣನೀಯ ಸಂಖ್ಯೆಯ ಸಂವಿಧಾನನಿಷ್ಠರಲ್ಲದ, ಕೋಮುವಾದಿ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗವೇ ಕಾರಣ. ಜಿಲ್ಲೆಯ ಪೊಲೀಸ್ ವೆಬ್‌ಸೈಟಿನಲ್ಲಿ ಸುಮಾರು ಒಂದು ವರ್ಷಕ್ಕೂ ಅಧಿಕ ಕಾಲ ಆರೆಸ್ಸೆಸ್‌ನ ಜಾಹೀರಾತುಗಳು ಪ್ರದರ್ಶಿಸಲ್ಪಟ್ಟಿದ್ದರ ಅರ್ಥವೇನೆಂದು ಬಿಡಿಸಿ ಹೇಳಬೇಕೇ? ಇಂತಹ ಘೋರ ಪ್ರಮಾದದ ಕುರಿತು ಮಾಧ್ಯಮ ಪ್ರತಿನಿಧಿಗಳು ಜಿಲ್ಲಾ ಎಸ್‌ಪಿಯವರನ್ನು ಪ್ರಶ್ನಿಸಿದಾಗ 'ನನಗಿದು ಗೊತ್ತೇ ಇರಲಿಲ್ಲ' ಎಂಬ ಹಾರಿಕೆಯ ಉತ್ತರ ಬೇರೆ. ಈ ವೆಬ್‌ಸೈಟ್‌ಅನ್ನು ಸುಮಾರು ಎರಡು ಲಕ್ಷದಷ್ಟು ಜನರು ವೀಕ್ಷಿಸಿದ್ದರು ಎನ್ನಲಾಗಿದೆ. ಈ ಸಂಗತಿಗಳೆಲ್ಲವೂ ಬಯಲಾದುದು ಮಾಧ್ಯಮಗಳಿಂದಾಗಿ **(BANGALORE MIRROR, 26.05.2012)**. ನೈತಿಕ ಪೊಲೀಸ್‌ಗಿರಿಯಂತಹ ಸಂವಿಧಾನಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವ ಸಂಘಟನೆಗಳಿಗೆ ಇಲ್ಲಿ ಶ್ರೀರಕ್ಷೆ ಸಿಗುತ್ತದೆ. ಕೋಮು ಪ್ರಚೋದನಕಾರಿ ಭಾಷಣಗಳನ್ನು ಮಾಡಿದವರ ವಿರುದ್ಧ ಇದುವರೆಗೂ ಸ್ವಯಂಪ್ರೇರಿತ ದೂರು ದಾಖಲಾದದ್ದೇ ಇಲ್ಲ. ಸಾರ್ವಜನಿಕರು ಎಲ್ಲಾದರೂ ದೂರು ದಾಖಲಿಸಿದರೆ "ಬಿ ರಿಪೋರ್ಟ್" ಗ್ಯಾರಂಟಿ. ಇಲ್ಲಿ ಸಂಭವಿಸಿರುವ ಹೆಚ್ಚುಕಡಿಮೆ ಪ್ರತಿಯೊಂದು ಕೋಮು ದುರ್ಘಟನೆಯ ಸಂದರ್ಭದಲ್ಲಿ ಪೊಲೀಸರ ಪಕ್ಷಪಾತೀಯ ವರ್ತನೆ ಹಲವಾರು ಸ್ವತಂತ್ರ ತನಿಖೆಗಳಿಂದ ದೃಢಪಟ್ಟಿದೆ. ಇಲ್ಲಿ ಶಂಕಿತ ಹಿಂದೂತ್ವವಾದಿ ಭಯೋತ್ಪಾದಕಿ ಸಾಧ್ವಿ ಪ್ರಜ್ಞಾಸಿಂಗಳ ಬೃಹತ್ ಕಟೌಟೊಂದು ಬರೋಬ್ಬರಿ ಮೂರು ದಿನಗಳ ಕಾಲ ರಾರಾಜಿಸಿದರೂ ಕೇಳುವವರಿರಲಿಲ್ಲ. ಕ್ರೈಸ್ತ ಪಾಸ್ಟರ್‌ಗಳನ್ನು ಪೊಲೀಸ್ ಠಾಣೆಗಳಿಗೆ, ಕೇಂದ್ರ ಕಚೇರಿಗೆ ಕರೆಸಿ ಅವರು ಮನೆಗಳಲ್ಲಿ, ಹಾಲ್‌ಗಳಲ್ಲಿ ಪ್ರಾರ್ಥನೆ ಮಾಡಬಾರದೆಂದು ಧಮಕಿ ಹಾಕಿದ ಘಟನೆಯೂ ಇಲ್ಲಿ ನಡೆದಿದೆ. ಹಿಂದಿನ ಓರ್ವ ಜಿಲ್ಲಾಧಿಕಾರಿ ಮತ್ತು ಕೆಲವು ಹಿರಿಯ ಪೊಲೀಸ್ ಅಧಿಕಾರಿಗಳು ಕಲ್ಲಡ್ಕದ ಖಾಸಗಿ ಶಾಲೆಯೊಂದರ ಕಾರ್ಯಕ್ರಮದಲ್ಲಿ ಭಾಗವಹಿಸಿ ಕೇಸರಿ ಶಾಲು ಹೊದೆದು ವೇದಿಕೆಯಲ್ಲಿ ಕುಳಿತಿದ್ದ ವಿಷಯ ನಂಬಲಸಾಧ್ಯವೆನಿಸಿದರೂ ಸತ್ಯ.

ಶಿಕ್ಷಣ ಸಂಸ್ಥೆಗಳಲ್ಲಿ

ಕರಾವಳಿ ಜಿಲ್ಲೆಗಳ ವಿದ್ಯಾರ್ಥಿಗಳಲ್ಲಿ, ಅದರಲ್ಲೂ ವಿಶೇಷವಾಗಿ ಸರಕಾರಿ/ಅನುದಾನಿತ ಶಿಕ್ಷಣಸಂಸ್ಥೆಗಳ ವಿದ್ಯಾರ್ಥಿಗಳಲ್ಲಿ, ಮತಾಂಧತೆ, ಅಸಹಿಷ್ಣುತೆಗಳು ಅಪಾಯಕಾರಿ ಮಟ್ಟಕ್ಕೆ ತಲುಪಿವೆ. ಇದಕ್ಕೆ ವಿಟ್ಲ ಉಪ್ಪಿನಂಗಡಿ, ಮೂಲ್ಕಿ ಮೊದಲಾದೆಡೆ ವಿಭಿನ್ನ ಕೋಮಿನ ಕಾಲೇಜು ವಿದ್ಯಾರ್ಥಿಗಳ ನಡುವೆ ಪದೇಪದೇ ಸಂಭವಿಸುತ್ತಿರುವ ಸಂಘರ್ಷಗಳು ಹಿಂಸಾರೂಪಕ್ಕೆ ತಿರುಗಿರುವುದೇ ಸಾಕ್ಷಿ. ಕೆಲವು ಖಾಸಗಿ ವಿದ್ಯಾಸಂಸ್ಥೆಗಳಲ್ಲಿ



ಬಳಸುವ ಪಠ್ಯಪುಸ್ತಕಗಳ ಮೇಲೆ, ಬೋಧಕರ ಮೇಲೆ ಯಾವುದೇ ನಿಯಂತ್ರಣವಿಲ್ಲದಿರುವುದು ಅಲ್ಲಿ ಮತೀಯವಾದದ ನುಸುಳುವಿಕೆಗೆ ಅವಕಾಶ ಒದಗಿಸಿದೆ. ಕ್ರಾಂತಿಕಾರಿ, ಪ್ರಗತಿಪರ ಚಳವಳಿಗಳ ಮುಂಚೂಣಿಯಲ್ಲಿರಬೇಕಾದ ಯುವಶಕ್ತಿಯ ಚೈತನ್ಯ ಮತ್ತು ಸಾಮರ್ಥ್ಯ ಹೀಗೆ ದುರ್ವ್ಯಯ ಮತ್ತು ದುರ್ಬಳಕೆಯಾಗುತ್ತಿರುವುದು ಇವತ್ತಿನ ಅತಿ ದೊಡ್ಡ ದುರಂತ. ತಮ್ಮ ಶೈಕ್ಷಣಿಕ ಜೀವನಾವಧಿಯಲ್ಲಿ ಜಾತ್ಯತೀತತೆ ಮತ್ತಿತರ ಉದಾತ್ತ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕಾದ ಯುವಪೀಳಿಗೆ ಹೀಗೆ ಮತೀಯತೆಗೆ ಬಲಿಯಾಗುತ್ತಿರುವುದನ್ನು ನೋಡುತ್ತಿದ್ದರೆ ಭವಿಷ್ಯದ ಸಮಾಜ ಹೇಗಿರಬಹುದೆಂದು ಕಲ್ಪಿಸಿಕೊಳ್ಳಲೂ ಭಯವಾಗುತ್ತಿದೆ. ಪರಿಸ್ಥಿತಿ ಇಷ್ಟೊಂದು ಹದಗೆಡಲು ಕಾರಣವೇನು? ಕೆಲವು ಶಿಕ್ಷಣ ಸಂಸ್ಥೆಗಳಲ್ಲಂತೂ ಆರೆಸ್ಸೆಸ್ ಎಂಬ ಮತೀಯವಾದಿ ಸಂಘಟನೆಗೆ ಬೈಠಕ್ಕುಗಳನ್ನು ನಡೆಸಲು ಅವಕಾಶ ಕೊಟ್ಟಿರುವ ನಿದರ್ಶನಗಳಿವೆ. ಆಯಾ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು, ಸಂಬಂಧಪಟ್ಟ ಇಲಾಖಾಧಿಕಾರಿಗಳು ಇಂತಹ ಕೋಮು ವಿಷ ಹರಡಿಸುವ ಪ್ರವೃತ್ತಿ (ಹುನ್ನಾರ?)ಗಳನ್ನು ಮೊಳಕೆಯಲ್ಲೇ ಚಿವುಟುವ ಕೆಲಸ ಮಾಡಿದ್ದರೆ ಪರಿಸ್ಥಿತಿ ಖಂಡಿತಾ ಇಷ್ಟೊಂದು ವಿಕೋಪಕ್ಕೆ ಹೋಗುತ್ತಿರಲಿಲ್ಲ ಅನಿಸುತ್ತದೆ. ವಿದ್ಯಾರ್ಥಿಗಳಿಗೆ ಸಂವಿಧಾನ ಮತ್ತು ಅದರ ಆಶಯಗಳ ಕುರಿತು, ಭಾರತೀಯ ಪ್ರಜೆಗಳಾಗಿ ನಮ್ಮೆಲ್ಲರ ಹಕ್ಕು ಮತ್ತು ಬಾಧ್ಯತೆಗಳ ಕುರಿತು, ಭಾರತದ ಬಹುಸಂಸ್ಕೃತಿ ಕುರಿತು, ಕೋಮು ಸೌಹಾರ್ದತೆಯ ಮಹತ್ವ ಮತ್ತು ಅನಿವಾರ್ಯತೆಯ ಕುರಿತು ಕಾಲಕಾಲಕ್ಕೆ ತಜ್ಞರಿಂದ ಕಾರ್ಯಾಗಾರ, ಚರ್ಚಾಕೂಟ ಇತ್ಯಾದಿಗಳನ್ನು ಏರ್ಪಡಿಸುವ ಮೂಲಕ ಕೋಮುವಾದಿಗಳ ಒಳಸಂಚನ್ನು ಬಹುಮಟ್ಟಿಗೆ ವಿಫಲಗೊಳಿಸಲು ಸಾಧ್ಯವಿರಲಿಲ್ಲವೇ? ಇದನ್ನು ಇಚ್ಛಾಶಕ್ತಿಯ ಕೊರತೆ ಎನ್ನಬೇಕೆ ಅಥವಾ ಉದ್ದೇಶಪೂರ್ವಕ ನಿರ್ಲಕ್ಷ್ಯ ಎನ್ನಬೇಕೆ?

ವಿದ್ಯಾರ್ಥಿಗಳೂ ಸ್ವಲ್ಪ ಗಂಭೀರವಾಗಿ ಯೋಚಿಸಬೇಕು. ಹೀಗೆ ಕ್ಷುಲ್ಲಕ ಕಾರಣಗಳಿಗೆ ಹೊಡೆದಾಡಿಕೊಳ್ಳುವ ಯುವಕರಲ್ಲಿ ಅನೇಕರು ಅಂತಿಮವಾಗಿ ತಲುಪುವುದು ಸಮಾಜಘಾತುಕ ಸಂಘಟನೆಗಳ ಬಾಗಿಲಿಗೆ. ಈ ಮೂಲಕ ತಮ್ಮ ಸಂಪೂರ್ಣ ಭವಿಷ್ಯವನ್ನು ತಮ್ಮ ಕೈಯಾರೆ ಹಾಳುಮಾಡಿಕೊಳ್ಳುತ್ತಿದ್ದೇವೆ ಎಂಬುದನ್ನು ಅವರು ಅರಿಯಬೇಕು. ಅವರು ಸಂವಿಧಾನವನ್ನು ಗೌರವಿಸಲು ಕಲಿಯಬೇಕು. ಅನ್ಯ ಜಾತಿ/ಸಮುದಾಯಗಳ ವಿರುದ್ಧ ದ್ವೇಷದ ಭಾವನೆಗಳನ್ನು ಹಬ್ಬಿಸುವವರನ್ನು, ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಮಾತಾಡುವವರನ್ನು, ಸಂವಿಧಾನ ವಿರೋಧಿ ಕೃತ್ಯ ಎಸಗುವವರನ್ನು ದೇಶದ್ರೋಹಿಗಳೆಂದು ಪರಿಗಣಿಸಬೇಕು. ಅಂಥವರ ವಿರುದ್ಧ ಸೆಟೆದೆದ್ದು ನಿಲ್ಲಬೇಕು. ಇದರಿಂದ ಅವರಿಗೂ ಒಳ್ಳೆಯದು, ಅವರ ಕುಟುಂಬಗಳಿಗೂ ಒಳ್ಳೆಯದು, ದೇಶಕ್ಕೂ ಒಳ್ಳೆಯದು.


ಮಾತುಗಳು ಕೃತಿರೂಪಕ್ಕಿಳಿಯಲಿ

ಇಲ್ಲಿನ ಸಮಾಜದಲ್ಲಿ, ವಿದ್ಯಾಸಂಸ್ಥೆಗಳಲ್ಲಿ ಕೋಮು ದ್ವೇಷದ ಬೀಜ ಬಿತ್ತನೆ ವ್ಯವಸ್ಥಿತವಾಗಿ, ಯೋಜಿತವಾಗಿ, ಅಡೆತಡೆಗಳಿಲ್ಲದೆ, ಸಾಂಗವಾಗಿ ನಡೆದಿರುವುದಕ್ಕೆ ಮುಖ್ಯ ಕಾರಣ ಕಚೇರಿಗೆ ಬರುವಾಗ ಸ್ವಂತ ವಿವೇಚನೆಯನ್ನು ಮನೆಯಲ್ಲಿ ಬಿಟ್ಟುಬರುವ ಇಂತಹ ಕೆಲವು ಬೆನ್ನೆಲುಬಿಲ್ಲದ ಅಧಿಕಾರಿಗಳು ಮತ್ತು ಸಿಬ್ಬಂದಿ. ಹಾಗಾಗಿ ಸರಕಾರಗಳು ಬದಲಾದರೂ ಇಂಥವರಲ್ಲಿ ಆಳವಾಗಿ ಬೇರೂರಿರುವ ಕೋಮುವಾದಿ ನಿಲುವುಗಳನ್ನು ಹೋಗಲಾಡಿಸುವುದು ಸುಲಭವಲ್ಲ. ವರ್ಗಾವಣೆ ಮಾಡಿದಾಕ್ಷಣ ಎಲ್ಲ ಸರಿಹೋಗುತ್ತದೆಂಬ ಭಾವನೆ ಇರುವಂತಿದೆ. ಆದರೆ ವರ್ಗಾವಣೆಗಳಿಂದ ಶಾಶ್ವತ ಪರಿಹಾರ ಸಿಗಲಾರದು. ಸಂವಿಧಾನಕ್ಕೆ ಸಂಪೂರ್ಣ ಬದ್ಧತೆ ಘೋಷಿಸುವ ಸರಕಾರಗಳು ಮೊದಲು ಬ್ರೈನ್‌ವಾಷ್‌ಗೆ ತುತ್ತಾಗಿರುವ ಇಂಥವರ ಮನೋಸ್ಥಿತಿಯನ್ನು ಬದಲಾಯಿಸುವ ಮಾರ್ಗೋಪಾಯಗಳ ಕುರಿತು ಗಂಭೀರವಾಗಿ ಚಿಂತಿಸಬೇಕು. ಜತೆಗೆ ಜಾತ್ಯತೀತತೆಯನ್ನು ಕಾಪಾಡಲು ವಿಫಲರಾದವರಿಗೆ ಕಠಿಣ ಶಿಕ್ಷೆ ವಿಧಿಸುವ ಸತ್ಸಂಪ್ರದಾಯವನ್ನು ರೂಢಿಗೆ ತರಬೇಕು. ಇಚ್ಛಾಶಕ್ತಿ ಇದ್ದರೆ ಎಲ್ಲವೂ ಸಾಧ್ಯ.

ಮೊನ್ನಿನ 67ನೆ ಸ್ವಾತಂತ್ರ್ಯ ದಿನಾಚರಣೆಯಂದು ಪ್ರಧಾನಿಯವರು "ಒಂದು ಆಧುನಿಕ, ಪ್ರಗತಿಪರ ಹಾಗೂ ಜಾತ್ಯತೀತ ದೇಶದಲ್ಲಿ ಸಂಕುಚಿತ ಹಾಗೂ ಮತೀಯ ಅಂಧಾಭಿಮಾನದ ಸಿದ್ಧಾಂತಗಳಿಗೆ ಆಸ್ಪದವಿಲ್ಲ" ಎಂದು ಹೇಳಿದರೆ ನಮ್ಮ ಮುಖ್ಯಮಂತ್ರಿಯವರು ಕೋಮುವಾದ, ನೈತಿಕ ಪೊಲೀಸ್‌ಗಿರಿಯನ್ನು ಹತ್ತಿಕ್ಕುವ ಬಗ್ಗೆ ಮಹತ್ವಪೂರ್ಣ ಮಾತುಗಳನ್ನಾಡಿದರು. ಅವರುಗಳ ನುಡಿ ಆಲಿಸಿದ ಜನರೀಗ ನಡೆಗಾಗಿ ಕಾದಿದ್ದಾರೆ.

-ಸುರೇಶ್ ಭಟ್ ಬಾಕ್ರಬೈಲು,
ಮಂಗಳೂರು

ಸಿದ್ದು ಸರ್ಕಾರಕ್ಕೆ ನೂರು ದಿನ ಆಯ್ತು. ಆದ್ರೂ ಏನು ಅನಿಸ್ತಾ ಇಲ್ಲವಲ್ಲ



ಯಸ್ಸಿಗೆ 25 ವಯಸ್ಸಿನ ಯುವ ಜನತೆ ಕಾಲಿಟ್ಟರೆ ?

- ರುದ್ರಪ್ಪ ಬೆಳಗಾಂ

ಕ್ಕೆ... ದೇವೇಗೌಡರು ಯುದ್ಧ ನಡೆಸುತ್ತಿರುವುದು ರ ವಿರುದ್ಧಾನೆ ಅಲ್ವಾ...?

ಗಂಡಸರೂ ಗರ್ಭಿಣಿಯಾಗುತ್ತಿದ್ದಾರಂತೆ

- ಕೀಟಲೆ

ಮಾಡಿಕೊಂಡಿದ್ದಾಗ ಮೊಣ್ಣೆ ಗರ್ಭಪಾತವೂ

ಸಿಗೆ ಯಾಕೆ ಚಪ್ಪಡ ಮೇಲೆ ಮೋಹ

- ಅಪ್ಪು ಶೆಟ್ಟಿ, ಮಂಗಳೂರು

ಸಾಮ್ರಾಜ್ಯ ಮೋಹ, ಗಂಡನ ಬಿಲೆ 'ಸಿಗಾರದು ಅಂತ.

☛ ಮಣ್ಣಿನ ಮಕ್ಕಳ ಪಕ್ಷ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಅನ್ನುವಂತೆ ಮಾತಾಡುತ್ತಾರಲ್ಲ

- ರಿಯಾಜ್, ಜಯನಗರ


ಮಣ್ಣು ತಿಂದರೂ ಜಿಲೇಬಿ ತಿಂದವರಂತೆ ಪೋಜು ಕೊಡುವುದು ಅವರ ಶೈಲಿ.

☛ 'ತಳಹದಿಯ ಒಂದು ಕಲ್ಲು ಲಯ ತಪ್ಪಿದರೂ ಕಟ್ಟಡ ವಾಲುತ್ತೆ...' ಅಂದವರು ಯಾರು?

- ಕಿಟ್ಟಿ, ತುರುವೆಕೆರೆ

ಗಾರೆ ಗೋವಿಂದ ಕಣಪ್ಪ... ಪ್ರತಿ ಸಾರಿ ಸಾಕ್ರೆಟೀಸ್, ಪ್ಲೇಟೋ ಮಾತಿಗೆ ಕಾಯಬೇಡ.

☛ ಪ್ರಜಾವಾಣಿಯ ಕಳ್ಳ-ಬಳ್ಳಿ ಅಂಕಣದ ಮಸು ಮಳಲಿ ಇಂಗ್ಲೆಂಡಿನ ರಾಣಿ ತರ ಕಾಣಿಸುತ್ತಾರಲ್ಲ?



- ಆಲ್‌ಬಾಳ್ ಎಂ.

ಆದರೆ ಅವರ ಬದುಕು-ಬರಹ ಅರಮನೆ ಸ್ತುತಿ ಅಲ್ಲವಲ್ಲ.

☛ ಮಂಗಳ ಗ್ರಹಕ್ಕೆ 'ಒನ್ ವೇ ಟಿಕೆಟ್' ಪ್ರಯಾಣಕ್ಕೆ ನೂಕುನುಗ್ಗಲಂತಲ್ಲ!

- ಸವಿತಾ, ದಾವಣಗೆರೆ

ಈ ಭೂಗ್ರಹದಲ್ಲಿರುವ ನಮ್ಮದೂ ಒನ್‌ವೇ ಟಿಕೆಟ್ಟೇ ಅಲ್ಲವಾ.

☛ ಸಿದ್ದು ಸರ್ಕಾರಕ್ಕೆ ನೂರು ದಿನ ಆಯ್ತು, ಆದ್ರೂ ಏನು ಅನಿಸ್ತಾ ಇಲ್ಲವಲ್ಲ.

- ವೆಂಕಟೇಶ್, ಸೊರಬ

ಇದು ನಿದ್ದೆ ಮಾತ್ರೆ ನುಂಗಿರೋ ಸರ್ಕಾರ, ಸದ್ಯಕ್ಕೆ ಎದ್ದೇಳೋ ತರ ಕಾಣ್ತಿಲ್ಲ.

☛ ರಾಜಕಾರಣಿಗಳ ಶವವನ್ನು ಶ್ರೀಗಂಧದಲ್ಲೇ ಯಾಕೆ ಸುಡುತ್ತಾರೆ?

- ಸಿರಿಶ, ಮಾಲೂರು

ರಾಜಕೀಯದ ಗಬ್ಬುವಾಸನೆ ಹರಡದಂತೆ ನಿಗ್ರಹಿಸಲು.

☛ ಒಂದಕ್ಕಿಂತ ಹೆಚ್ಚು ಮಕ್ಕಳಾದರೆ ಆ ದಂಪತಿಗೆ ಜೈಲು... ಅಂತಾ ಕಾನೂನು ಮಾಡಿದರೆ ಹೇಗೆ?

- ಲಕ್ಷ್ಮಣ, ದಾಂಡೇಲಿ



2ನೇ ಮಗು ಜೈಲಲ್ಲೇ ಹುಟ್ಟುತ್ತೆ ಅಷ್ಟೆ.

☛ ಕಾಲೇಜು ಹುಡುಗಿಯರು ರಾಜಕುಮಾರಿಯಂತೆ ಪೋಸ್ ಕೊಡುವುದೇಕೆ?

- ಕಿರಣ್, ಮೈಸೂರು

ಹುಡುಗರು ದಾಸರಂತೆ ಅಲಾಯಿಸುವುದರಿಂದ.

☛ ಸೈನ್ಯಕ್ಕೆ ಮಹಿಳೆಯರನ್ನು ಯಾಕೆ ಸೇರಿಸಲ್ಲ?

- ಮೀನಾಕ್ಷಿ

ಅಂತರ್ಯುದ್ಧದ ಸಾಧ್ಯತೆ ತಪ್ಪಿಸಲು.


ಕಣ್ಣಾಮುಚ್ಚಾಲೆಗೆ ... 9980331427ಗೆ SMS ... kannamucchale@gmail.com ...

ಬಂಡಾಯ ಹೃದಯದ ನೋವಾಗಬೇಕೇ ಹೊರತು ತಲೆಹರಟೆಯಾಗಬಾರದು

ಪ್ರಸನ್ನ

ಸುದ್ದಿಗನ್ನ...
ಸಾಹಿತಿ-ಕಲಾವಿದ-ಚಿಂತಕ...
ಸಂದರ್ಶನ...

• ಹುಲಿಕುಂಟೆ ಮೂರ್ತಿ...



ಪ್ರಸನ್ನ ಕನ್ನಡದ ರಂಗಭೂಮಿಯ ಅಂತಃಸಾಕ್ಷಿ. ರಾಷ್ಟ್ರೀಯ ನಾಟಕ ಶಾಲೆಯಿಂದ ಬಂದಕೂಡಲೇ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ 'ಸಮುದಾಯ'ದ ಹುಟ್ಟಿಗೆ ಕಾರಣರಾದವರಲ್ಲಿ ಪ್ರಮುಖರು. ಅವರು ಹೆಗ್ಗೋಡಿನಲ್ಲಿ ಕಳೆದ ಎರಡು ದಶಕದಿಂದ 'ಚರಕ'ದಿಂದ ಮಾಡುತ್ತಿರುವ ಕೆಲಸ ದೇಶದ ಗಮನ ಸೆಳೆದಿದೆ. ಈಗ 'ಶ್ರಮಜೀವಿ ಆಶ್ರಮ' ಕಟ್ಟಿದ್ದಾರೆ. ಬೆಂಗಳೂರಿನಂಥಾ ನಗರ ಜೀವನವನ್ನು ಅಷ್ಟಾಗಿ ಇಷ್ಟಪಡದ ಅವರು ಅಥೋಲ್ ಫುಗಾರ್ಡ್‌ನ ನಾಟಕ 'Road to Mecca'ದ ಕನ್ನಡ ರೂಪ 'ಮೆಕ್ಕಾ ದಾರಿ' ನಾಟಕವನ್ನು ನಿರ್ದೇಶಿಸಿ ಅದರ ಪ್ರದರ್ಶನಕ್ಕಾಗಿ ಬೆಂಗಳೂರಿಗೆ ಬಂದಿದ್ದಾರೆ. ಹೊಸದಾಗಿ ಉದ್ಘಾಟನೆಗೊಳ್ಳುತ್ತಿರುವ 'ಅನಾವರಣ' ಟ್ರಸ್ಟ್ ಬೆಳಕು ತಜ್ಞ ಅ.ನ.ರಮೇಶ್ ಅವರ ನೆನಪಿನಲ್ಲಿ ಆಯೋಜಿಸಿರುವ 'ಬೆಳಕ ಬಳ್ಳಿ, ಅ.ನ.ರಮೇಶ್ ನೆನಪಿನೊಂದಿಗೆ' ಕಾರ್ಯಕ್ರಮದಲ್ಲಿ ಮಂಗಳೂರಿನ 'ತರಿಕಿಟ ಕಲಾ ಕಮ್ಮಟ' ಈ ನಾಟಕವನ್ನು ಪ್ರದರ್ಶಿಸಲಿದೆ.

ಒಂದು ಸಾಂಸ್ಕೃತಿಕ ಸಂಘಟನೆಯಾಗಿರುವ ಅನಾವರಣ ಟ್ರಸ್ಟ್‌ನ ಗೌರವ ಅಧ್ಯಕ್ಷರು ಶಶಿಧರ ಅಡಪ, ಅಧ್ಯಕ್ಷರು ಡಾ.ಕೆ.ವೈ.ನಾರಾಯಣಸ್ವಾಮಿ, ಕಾರ್ಯದರ್ಶಿ ಬಿ.ವಿಠ್ಠಲ್ ಹಾಗೂ ಸಂಘಟನಾ ಕಾರ್ಯದರ್ಶಿ ರವಿ.ಎಂ.

ಕವಯಿತ್ರಿ, ಹೋರಾಟಗಾರ್ತಿ ದು.ಸರಸ್ವತಿ, ತರಿಕಿಟ ತಂಡದ ವಾಣಿ ಹಾಗೂ ಖ್ಯಾತ ಪ್ರಸಾದನ ತಜ್ಞ ಬೆಳ್ಳೂರು ರಾಮಕೃಷ್ಣ ಅಭಿನಯಿಸಿರುವ 'ಮೆಕ್ಕಾ ದಾರಿ' ನಾಟಕ ಸೆಪ್ಟೆಂಬರ್ 4 ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶನಗೊಳ್ಳಲಿದ್ದು, ಈ ನಾಟಕದ ತಯಾರಿಗಾಗಿ ಬೆಂಗಳೂರಿನಲ್ಲಿದ್ದ ಪ್ರಸನ್ನ 'ಲಂಕೇಶ್'ಗಾಗಿ ಮಾತನಾಡಿದ್ದಾರೆ.

ಪ್ರಶ್ನೆ: ನಿಮ್ಮ ರಂಗಭೂಮಿಯ ಪ್ರವೇಶ ಹೇಗಾಯಿತು?


ಪ್ರಸನ್ನ: ರಂಗಭೂಮಿಗೆ ನಾನು ಬಂದಿದ್ದು ನನ್ನದೇ ಆಯ್ಕೆಯಿಂದ. ಸೆಂಟ್ರಲ್ ಕಾಲೇಜಲ್ಲಿ ಓದುತ್ತಿದ್ದಾಗ ಲಂಕೇಶ್ ನಮ್ಮ ಗುರುಗಳು. ಆಗ ಹವ್ಯಾಸಿ ನಾಟಕ ಮಾಡ್ತಿದ್ವಿ. ಆಮೇಲೆ ಎಂಎಸ್‌ಸಿ ಮಾಡ್ದೆ; ನಂತರ ಕೆಮಿಸ್ಟ್ರಿಯಲ್ಲಿ ಪಿಹೆಚ್.ಡಿ ಮಾಡ್ಲಿಕ್ಕೆ ಕಾನ್ಪುರ್ ಐಐಟಿಗೆ ಹೋದೆ. ಆಗ ಅದು ಕೆಮಿಸ್ಟ್ರಿಯಲ್ಲಿ ಇಡೀ ದೇಶಕ್ಕೆ ದೊಡ್ಡ ಸಂಸ್ಥೆ ಆಗಿತ್ತು. ಆದ್ರೆ ಅಲ್ಲಿಗೆ ಹೋದಾಗ ದೊಡ್ಡ ವಿಜ್ಞಾನಿ ಆಗಲಿಕ್ಕೆ ನನ್ನ ವ್ಯಕ್ತಿತ್ವ ಸೂಕ್ತ ಅಲ್ಲ ಅಂತ ಅನ್ನಿಸ್ತು. ಓದೋಕಾಗಲ್ಲ ಅನ್ನೋ ಅಳುಕಿನಿಂದ ಅಲ್ಲ; ಬ್ರಿಲಿಯಂಟ್ ಆಗಿದ್ದೆ, ರ್‍ಯಾಂಕ್ ತಗೊಂಡಿದ್ದೆ, ಆದ್ರೆ, ವಿಜ್ಞಾನದಲ್ಲಿ ಸಂಶೋಧನೆ ಮಾಡಲಿಕ್ಕೆ ಬೇಕಾದ ಮನಸ್ಥಿತಿ ಇದ್ದಲ್ಲ. ಅದಲ್ಲ ನನ್ನ ಮನಸ್ಥಿತಿ ಅನ್ನಿಸ್ತು, ನಾಟಕಕ್ಕೆ ಪೂರ್ತಿ ತೊಡಗಿಕೊಳ್ಳೋಕೆ ಅಂತ ವಾಪಸ್ಸು ಬಂದೆ, ಎನ್.ಎಸ್.ಡಿ.ಗೆ ಹೋದೆ. ಅಲ್ಲಿಂದ ಬಂದಮೇಲೆ ಸಮುದಾಯ ಕಟ್ಟಿ, ನಾಟಕ ಮಾಡಿ.. ಪೂರ್ಣವಾಗಿ ತೊಡಗಿಕೊಂಡೆ.

ಪ್ರಶ್ನೆ: ನೀವು ಸಮುದಾಯ ಕಟ್ಟಬೇಕಾಗಿ ಬಂದ ಕಾಲದ ಅಗತ್ಯ ಮತ್ತು ಆಶಯ ಹಾಗೂ ಸಮಕಾಲೀನ ರಂಗಭೂಮಿ ಕುರಿತು ಹೇಳಿ.

ಪ್ರಸನ್ನ: ಇವತ್ತಿನ ರಂಗಭೂಮಿ ಬಗ್ಗೆ ಮಾತಾಡೋದನ್ನ ಬಿಟ್ಟುಬಿಟ್ಟಿದೀನಿ. ಹಾಗಂದ ತಕ್ಷಣ ಇಲ್ಲಿ ಕೆಲಸ ಮಾಡ್ತಾ ಇರೋರ ಮೇಲೆ ಅಪವಾದ ಹೊರಿಸ್ತಿಲ್ಲ; ಅದು ನನ್ನ ಉದ್ದೇಶವೂ ಅಲ್ಲ, ಕೆಟ್ಟದ್ದೋ ಒಳ್ಳೇದೋ ಎಲ್ಲರೂ ಪ್ರಾಮಾಣಿಕವಾಗಿ ಕೆಲಸ ಮಾಡ್ತಿದಾರೆ. ಇಲ್ಲಿ ಎರಡು ಸತ್ಯ ಇದೆ. ಇವತ್ತಿನ ರಂಗಭೂಮಿ ಜತೆ ಯಾವ ರೀತಿಯ ಸಂಬಂಧ ಇಟ್ಟುಕೊಳ್ಳೋದಕ್ಕೂ ನನಗೆ ಆಸಕ್ತಿ ಇಲ್ಲ. ಹಿಂದೆ 70ರ ದಶಕದಲ್ಲಿ ನಾವು ನಾಟಕ ಮಾಡೋಕೆ ಶುರು ಮಾಡಿದಾಗ, ನಾಟಕ ಮತ್ತು ಚಳವಳಿ, ರಾಜಕೀಯ ಮತ್ತು ಸಾಹಿತ್ಯ, ಬದುಕು ಮತ್ತು ವಿಚಾರ ಇವುಗಳ ಮಧ್ಯೆ ಯಾವ ಅಂತರವೂ ಇರಲಿಲ್ಲ; 300 ರೂಪಾಯಿ ಫುಲ್ ಟೈಮ್ ಅಲೋಯನ್ಸ್ ತಗೊಂಡು ಸಮುದಾಯ ಕಟ್ಟಿದ್ವಿ. ಅಷ್ಟರಲ್ಲೇ ಸಂಭ್ರಮದಿಂದ ಜೀವನ ಮಾಡ್ತಿದ್ವಿ. ನಮ್ಮ ವಿಚಾರಕ್ಕೆ ಹಾಗೂ ನಾವು ಮಾಡುವ ಎಲ್ಲದಕ್ಕೂ ಪೂರ್ತಿ ತಾಳೆ ಆಗ್ತಿತ್ತು, ಆದ್ರೆ ಇವತ್ತು ವಿಚಾರ ಒಂದು ಆಚಾರ ಒಂದು, ಇರೋದು ಒಂದು ಮಾಡೋದು ಒಂದು. ದುಡಿಮೆ ಟೆಲಿವಿಷನ್‌ನಲ್ಲಿ ಇರೋದು ನಾಟಕದಲ್ಲಿ - ಇಂಥ ಪರಿಸ್ಥಿತಿ ಇದೆ. ಅವರಿಗೆ ಬೇರೆ ದಾರಿ ಇಲ್ಲ; ಇದನ್ನು ಗಟ್ಟಿಯಾಗಿ ಹೇಳೋಕೋದ್ರೆ ಈಗ ಅವರ ಮೇಲೆ ಗೂಬೆ ಕೂರಿಸಿದ ಹಾಗಾಗುತ್ತೆ. ಇದು ಒಂದು ಚಾರಿತ್ರಿಕ ಸಂದರ್ಭ; ಎಲ್ಲವನ್ನೂ ಮಾರುಕಟ್ಟೆ ಮಟ್ಟಕ್ಕೆ ಇಳಿಸಿ ಕುಲಗೆಡಿಸಲಾಗಿದೆ. ನನ್ನನ್ನು ಈ ಥರದ ಪ್ರಶ್ನೆ ಕೇಳಿದ್ರೆ ಏನು ಹೇಳಲಿ..? ನನಗೂ ಬೆಂಗಳೂರಿಗೂ ಸಂಬಂಧವೇ ಇಲ್ಲ, ನನ್ನ ಜತೆ ಹೆಗ್ಗೋಡಿಗೆ ಬನ್ನಿ; ಅಲ್ಲಿ ನಾನೊಂದು 'ಶ್ರಮಜೀವಿ ಆಶ್ರಮ' ಕಟ್ಟಿದಿನಿ.

ಪ್ರಶ್ನೆ: ನಿಮ್ಮ ಪ್ರಯೋಗಗಳಲ್ಲಿ ತುಂಬಾ ಖುಷಿ ಕೊಟ್ಟಿರುವ ರಂಗಪ್ರಯೋಗ ಯಾವುದು?

ಪ್ರಸನ್ನ: ಸುಮಾರು ಇದಾವೆ. 'ಕದಡಿದ ನೀರು', 'ತಾಯಿ', 'ಹುಲಿಯ ನೆರಳು'. ನನಗೆ ಹೆಚ್ಚು ಖುಷಿ ಕೊಟ್ಟ ನಾಟಕ




ಪ್ರಸನ್ನ ಅವರೊಂದಿಗೆ ಸಂದರ್ಶಕ ಹುಲಿಕುಂಟೆ ಮೂರ್ತಿ

ಲಂಕೇಶರ 'ನನ್ನ ತಂಗಿಗೊಂದು ಗಂಡು ಕೊಡಿ'. ವಿದ್ಯಾರ್ಥಿಯಾಗಿದ್ದಾಗ ಲಂಕೇಶರ ನಾಟಕಗಳಲ್ಲಿ ನಟಿಸಿದ್ದೆ. ಆದರೆ ಅದಾದ ಸುಮಾರು ಇಪ್ಪತ್ತೈದು ವರ್ಷದ ನಂತರ ಕನ್ನಡ ಭವನದ ನಯನದಲ್ಲಿ ಅವರ ನಾಟಕ ನಾನೇ ಮಾಡಿಸಿದ್ದೆ. ಲಂಕೇಶ್ ಬಂದಿದ್ರು ನಾಟಕ ನೋಡಲಿಕ್ಕೆ. ಆ ನಾಟಕದ ಕೇಂದ್ರ ಪಾತ್ರ ಜಗನ್ನಾಥ ಆದರೂ ತಾಯಿಯನ್ನು ಮೇಲೆ ತಂದು, ಕೇಂದ್ರವಾಗಿಟ್ಟುಕೊಂಡು ಒಂದು ಪದವನ್ನೂ ಬದಲಿಸದೆ ವಿಶಿಷ್ಟ ರೀತಿಯ ಪ್ರಯೋಗ ಮಾಡಿದ್ದೆ. ಅವಳ ಮೂಕವೇದನೆಯನ್ನೇ ಮಾತುಗಳನ್ನಾಗಿ ಮಾಡಿದ್ದೆ. ಆ ಕಾರಣಕ್ಕೆ ಅದು ನನಗೆ ಬಹಳ ಖುಷಿ ಕೊಟ್ಟ ನಾಟಕ.

ಪ್ರಶ್ನೆ: ಫುಗಾರ್ಡ್ ನಾಟಕಗಳು ಕನ್ನಡಕ್ಕೆ ಹೆಚ್ಚು ಬಂದಿಲ್ಲ; ಈಗ ನೀವು 'ಮೆಕ್ಕಾ ದಾರಿ' ಮಾಡಿಸುತ್ತಿದ್ದೀರಿ. ಈ ನಾಟಕ ಮತ್ತು ಪ್ರಯೋಗಗಳ ಬಗ್ಗೆ ಹೇಳಿ.

ಪ್ರಸನ್ನ: ಹಿಂದೆ ನಾನೇ ಇಂಗ್ಲಿಷ್‌ನಲ್ಲಿ ಮಾಡಿಸಿದ್ದೆ; ಅದಕ್ಕಿಂತ ಕನ್ನಡದಲ್ಲಿ ಮಾಡೋವಾಗ ನನ್ನನ್ನ ಹೆಚ್ಚು ಕಾಡಿದ ನಾಟಕ ಇದು. ಬ್ರೆಕ್ಟ್‌ನ 'ತಾಯಿ' ನಂತರ ಅಷ್ಟು ಗಟ್ಟಿಯಾದ ಸ್ತ್ರೀ ಪಾತ್ರ ಮತ್ತೆ ನನಗೆ ಕಾಣಿಸಿದ್ದು ಈ 'ಮೆಕ್ಕಾ ದಾರಿ'ಯಲ್ಲಿ. ಇಲ್ಲಿಯೂ 'ತಾಯಿ'ಯಲ್ಲಿ ಆದ ಹಾಗೆ ರಾಜಕೀಯ ಮೇಲಾಟಗಳನ್ನು ಮೀರಿದ ಓರ್ವ ಬಡ, ಶೂದ್ರ ಹೆಂಗಸು ಇದ್ದಾಳೆ. 'ತಾಯಿ'ಯಲ್ಲಿ ತನ್ನ ಮಗನನ್ನ ಕ್ರಾಂತಿಯಿಂದ ಬಚಾವು ಮಾಡಲು ಹೋಗಿ ದೊಡ್ಡ ಕ್ರಾಂತಿಯಲ್ಲಿ ಸಿಕ್ಕಿ ಅವಳೇ ಸ್ವತಃ ದೊಡ್ಡ ಕ್ರಾಂತಿಕಾರಿಯಾದರೆ, 'ಮೆಕ್ಕಾ ದಾರಿ'ಯಲ್ಲಿ ಒಂದು ಗ್ರಾಮೀಣ ಪರಿಸರದಿಂದ ಬಂದವಳು, ಅದರಲ್ಲೂ ವೃದ್ಧೆ, ಗಂಡ ಸತ್ತವಳು ಒಂದು ವಿಚಿತ್ರ ಸಾಮಾಜಿಕ ವಾಸ್ತವಕ್ಕೆ ಎದುರಾಗುವ ಮಹಿಳೆ ಇದ್ದಾಳೆ. ಈ ಪ್ರಕ್ರಿಯೆ ಇದ್ಯಲ್ಲಾ.. ನಾವು ನೋಡಿರುವ ಹಾಗೆ ರಾಜಕೀಯಕ್ಕೆ ಬರುವ ಎಲ್ಲರೂ ಭೂಮಾಲೀಕರ ಕುಟುಂಬದಿಂದಲೋ ಅಥವಾ ನನ್ನ ಹಾಗೆ ಜನಿವಾರ ಕಿತ್ತು ಎಸೆದೋ ಬಂದವರಿರುತ್ತಾರೆ. ಆದರೆ ಇಲ್ಲಿನ ಈ ಹೆಂಗಸು ಹಳೆಯ ವಸ್ತುಗಳನ್ನು ಮರುಬಳಕೆ ಮಾಡುತ್ತಾ, ಶಿಲ್ಪಗಳನ್ನು ಮಾಡುತ್ತಾ.. ಬೆಳಕನ್ನು ಹರಡುತ್ತಾ ಹೊರಡುತ್ತಾಳೆ; ಕತ್ತಲಿಗೆ ಹೆದರುತ್ತಾಳೆ. ಅವಳ ಶಿಲ್ಪಗಳೆಲ್ಲವೂ ಬೆಳಕನ್ನು ಪ್ರತಿಫಲಿಸುತ್ತವೆ; ಅವು ಬೆಳಕಿನ ಕಡೆಗೆ ನಡೆಯುವ ಕಾರಾವಾನ್ ಥರದವು. ಮೆಕ್ಕಾಗೆ ಹೋಗುವ ಕನಸು ಕಾಣತೊಡಗುತ್ತಾಳೆ. ಅವಳ ಪಾಲಿಗದು ಬೆಳಕಿನ ನಗರ. ಇದು ಸಂಪ್ರದಾಯಸ್ಥರಾದ ಆ ಊರಿನ ಜನಕ್ಕೆ ದೈವವಿರೋಧಿಯಂತೆ ಕಾಣುತ್ತದೆ. ಯಾಕೆಂದರೆ ಒಂದು ತುಂಬಿದ ಕ್ರಿಶ್ಚಿಯನ್ ಸಮಾಜದ ನಡುವೆ ಬೇರೊಂದು ಧರ್ಮದ ಪುಣ್ಯಸ್ಥಳವನ್ನು ಬೆಳಕಿನದ್ದು ಎಂದಿವಳು ನಂಬುತ್ತಾಳೆ. ಆದರೆ, ಅವಳು ಯಾವುದನ್ನು ಬಿಡುಗಡೆಯ ದಾರಿ ಎಂದುಕೊಂಡಿದ್ದಳೋ ಅದರಿಂದಲೇ ಅನೇಕ



ಮೆಕ್ಕಾ ದಾರಿ ನಾಟಕದ ಒಂದು ದೃಶ್ಯ

ಕಷ್ಟಗಳಿಗೆ ಸಿಲುಕಿಸಿಬಿಡುತ್ತಾಳೆ. ಊರಿನವರೆಲ್ಲಾ ...
ತಳ್ಳುತ್ತಾರೆ. ಇಂಥಾ ಪರಿಸ್ಥಿತಿಯಲ್ಲಿ ಒಂದು ...
ಹೇಗೆ ಪ್ರತಿಕ್ರಿಯಿಸುತ್ತಾಳೆ, ಹೇಗೆ ಬದಲಾಗುತ್ತಾಳೆ ಅ...
ನಾವೆಲ್ಲರೂ ಗಮನಿಸಬೇಕಾದ ಬಹಳ ದೊಡ್ಡ ...
ಆಮೇಲೆ ಇತ್ತೀಚಿನ ದಿನಗಳಲ್ಲಿ ನಮ್ಮ ವಿಚಾ...
ಹಳ್ಳಿಗೆ ಹೊಂದಿಸಿ ನೋಡುತ್ತೇವೆ; ಆದರೆ ...
ಮಾಡಬಾರದು. ಹಳ್ಳಿಯಲ್ಲಾಗುವ, ಹ...
ಮನಸ್ಥಿತಿಯಲ್ಲಾಗುವ ಬದಲಾವಣೆಗಳು.. ಕೇವಲ ...
ಮೂಲಕ ಅಲ್ಲ, ಅನುಭವದ ಮೂಲಕ ನನ್ನವು ಆ...
ಅದು ನಿಜವಾದ ದಾರಿ ಅಂತ ನನಗನ್ನಿಸುತ್ತಿದೆ.

ಪ್ರಶ್ನೆ: 'ಮೆಕ್ಕಾ ದಾರಿ' ನೀವು ಹೇಳಿದ ...
ನಿಜವಾದ ದಾರಿಯೇ?

ಪ್ರಸನ್ನ: ನಾವು ಎಪ್ಪತ್ತು-ಎಂಭತ್ತರ ದಶಕದಲ್ಲಿ ...
ತಲಹರಟೆ ಮಾಡಿದ್ದವ್ರೋ.. ಅಂದರೆ, ಮಾರ್ಕ್ಸ್...
ಬಂಡಾಯ.. ಮೊದಲಾದವು ಕೇವಲ ತಲೆಹರಟೆಗ...
ಹೃದಯದ ನೋವಾಗಿ ಇವತ್ತು ನಮ್ಮ ಜೊತೆ...
ಮಾಡಬೇಕಾದ ಅಗತ್ಯವಿದೆ. ಅದನ್ನು ಬೇಕಾದರೆ ಪ್ರ...
ಆಶಯ ಅಂತ ಕರೆಯಿರಿ.. ಜ್ಞಾನ ಅನು...
ಅನುಭವವಿಹೀನವಾಗಬಾರದು; ವಿಶ್ವವಿದ್ಯಾಲಯ...
ಆಗಬಹುದು ಅಥವಾ ನಮ್ಮ ನಾಟಕಗಳನ್ನೇ ...
ನಾವೀಗ ನಾಟಕವನ್ನೇ ಮಾಡುತ್ತಿಲ್ಲ; ಎಲ್ಲವನ್ನೂ ಪ್ರ...
ಎನ್ನುತ್ತೇವೆ.. ಪ್ರಯೋಗಾತ್ಮಕವಾಗಿ ಎಂಥ ಮ...
ಮಾಡ್ತೀರಿ ನೀವು..? ಜನರ ಜೊತೆ ಒಂದು ಸಂ...
ಸಾಧ್ಯವಾಗದ ಹೊರತು ನೀವು ಮಾಡಿದ ನ...
ಪ್ರಯೋಜನವೇನು? ಕನ್ನಡದಲ್ಲಿ ನಾಟಕ ಮಾಡು...
ಅಂದಮೇಲೆ ಕನ್ನಡ ಮಾತನಾಡುವ ಜನರ ಜೊತೆ ...
ನಡೆಯಬೇಕು. ಈ ನಾಟಕ ಸ್ವಲ್ಪಮಟ್ಟಿಗೆ ಅದನ್ನು ...
ಅಂತ ನನನಗನ್ನಿಸುತ್ತೆ. ಈ ನಾಟಕದಲ್ಲಿ ಕೆಲಸ ...
ಕಲಾವಿದರು ಒಂದಲ್ಲ ಒಂದು ರೀತಿಯಲ್ಲಿ ಜನ...
ನಿಕಟವಾಗಿ ಸಂಪರ್ಕ ಹೊಂದಿರುವವರು; ...
ಕಾರ್ಯಕರ್ತರು. ದು.ಸರಸ್ವತಿ, ವಾಣಿ ಅಥವಾ ಬೆ...
ರಾಮಕೃಷ್ಣ ಎಲ್ಲರೂ ಅಷ್ಟೇ. ಅಂತಹವರ ಜತೆ...
ಮಾಡಲು ಸಂತೋಷ ಆಗುತ್ತೆ, ಹಾಗಂತ ನಾವು...
ಘೋಷಣೆಗಳನ್ನು ಕೂಗ್ತಾ ಇಲ್ಲ, ನಟನೆಯ ವಿ...
ಹೋಗಿ ಕೆಲಸ ಮಾಡ್ತಿದ್ದೇವೆ ಹಾಗು ಅದು ಸಾ...
ಇದೆ. ಸೊಫೆಸ್ಟಿಕೇಷನ್ ಅನ್ನೋದು ಕೇವಲ ...
ಕಾರ್ನಾಡ್ ನಾಟಕದಲ್ಲಿರುತ್ತೆ, ಅಡಿಗರ ಪದ್ಯ...
ಅನ್ನೋದನ್ನು ಒಡೀಬೇಕಾಗಿದೆ ನಾವು. ಇಲ್ಲೂ...
ಸಾಧ್ಯ ಅನ್ನೋದನ್ನ ತೋರಿಸಬೇಕಾಗಿದೆ.

ಪ್ರಶ್ನೆ: ಈ ದಾರಿಯಲ್ಲಿ ನಿಮಗೆ ಎಂತಹ ಸವಾ...
ಎದುರಾಗಬಹುದು?

ಪ್ರಸನ್ನ: ಖಂಡಿತಾ ಇಲ್ಲೂ ಸಮಸ್ಯೆಗಳಿವೆ; ಏನು...
ಇಂಥ ರಂಗಭೂಮಿ ಕೆಲಸ ಮಾಡುವಾಗ ...
ತಕ್ಷಣ ನಿರೀಕ್ಷೆ ಮಾಡಬಾರದು. ನಾಲು...
ಪ್ರದರ್ಶನಗಳಾಗುವವರೆಗೂ ಹಠ ಹಿಡಿದು...
ಮಾಡಬೇಕು. ಹಾಗೆ ಕೆಲಸ ಮಾಡುವವರ ಜತೆ...
ಕೆಲಸ ಮಾಡಲು ಸಿದ್ಧ. ಅವಸರದ ಒತ್ತಡಗಳಿಗೆ...
ಒಂದು ಹೆಜ್ಜೆ ಟೆಲಿವಿಷನ್‌ನಲ್ಲಿ, ಒಂದ...
ರಂಗಭೂಮಿಯಲ್ಲಿ ಇಟ್ಟುಕೊಂಡು ಕೆಲಸ ಮ...
ಫಲ ಸಿಗೋಲ್ಲ, ನಮ್ಮ ಕನ್ನಡ ರಂಗಭೂಮಿಯಲ್ಲಿ ...
ನಟರೆಲ್ಲಾ 'ಮಹಾನ್' ಆದದ್ದು ಹೀಗೆ. ...
ಪರಿಸ್ಥಿತಿಯಲ್ಲಿ ಅದು ಸಾಧ್ಯವಿಲ್ಲ.

ಪ್ರಶ್ನೆ: ಒಂದು ನಾಟಕಕ್ಕೆ ನಿಜಕ್ಕೂ ಏನೇನು ...

ಪ್ರಸನ್ನ: ಒಂದು ನಾಟಕಕ್ಕೆ ನನ್ನ ಪ್ರಕಾರ ಬೇಕಿ...
ಕೇವಲ ನಟರು, ನಾಟಕ ಹಾಗೂ ಪ್ರೇಕ್ಷಕರು. ...
ಸೆಟ್ಸ್ ಇರಬಾರದು, ಕಾಸ್ಟ್ಯೂಮ್ಸ್ ಇರಬಾರದು...
ಸಣ್ಣ ಸಮುದಾಯಗಳ ನಡುವೆ ಹೋಗಿ ನಾಟಕ...
ಬರುವ ಹಾಗೆ ಇರಬೇಕು. ಜಾತಿ, ಲಿಂಗ, ...
ಹಣಗಳಾಚೆಗೆ ನೋಡುವ ತಾಳ್ಮೆ ಇರುವ ಜನ...
ನಾಟಕ ಪ್ರದರ್ಶನಗೊಳ್ಳಬೇಕು. ಅವರು ರಂಗಶ...
ಕೂತಿರ್ತಾರೋ, ಕಲಾಕ್ಷೇತ್ರದಲ್ಲಿ ಕೂತಿರ್ತಾರೋ, ...
ಹಾಕ್ಕೊಂಡು ಬರ್ತಾರೋ ಅನ್ನೋ ಯಾವುದೂ...
ಮುಖ್ಯ ಅಲ್ಲ.

ಪ್ರಶ್ನೆ: ಹಳ್ಳಿಗಳ ಸಾಮಾಜಿಕ ಹಾಗೂ ...

ಗಳ ಬಗ್ಗೆ ಸ್ವಲ್ಪ ಹೇಳಿ..

ಪ್ರಸನ್ನ: ನನಗೆ ಈಗ ಅರ್ಥ ಆಗ್ತಾ ಇದೆ. ನಾವು ಎಲ್ಲಾ ಕೆಲಸ ಮಾಡಿದ್ದು ಪಾಪಪ್ರಜ್ಞೆಯಿಂದ. ನಾನು ...ನಾಗಿ ಹುಟ್ಟಿದೀನಿ, ಮಧ್ಯಮವರ್ಗದಲ್ಲಿ ಹುಟ್ಟಿದೀನಿ, ...ಪವನ್ನು ಅಂದರೆ ಬ್ರಾಹ್ಮಣ್ಯದ ಪಾಪ - ...ಕೊಳ್ಳೋದಕ್ಕೆ ನಾವು ಬಂಡಾಯವನ್ನೋ, ಇನ್ನೇನನ್ನೋ ...ಕ್ತಿ. ಆದ್ರೆ ಈ ಪಾಪಪ್ರಜ್ಞೆಯಿಂದ ಏನೂ ಆಗಲ್ಲ; ...ನನ್ನು ನಂಬಿದೀರೋ ಅದೇ ರೀತಿ ಬದುಕಬೇಕು. ... ಹಳ್ಳೀಲಿ ಬದುಕೋದು ತುಂಬಾ ಸಂತೋಷ ...ಕಲಾವಿದರಿಗೆ ಆ ನಂಬಿಕೆ, ಕಾನ್ಫಿಡೆನ್ಸ್ ಇಲ್ಲದೆಹೋದ್ರೆ

ಪ್ರಶ್ನೆ: ಆದ್ರೆ ಹಳ್ಳಿಗಳು ಜಾತಿ ಅಸಮಾನತೆಯ ಕೂಪಗಳ ...ಗಿನ್ನೂ ಇದಾವಲ್ಲಾ ಸಾರ್..?

ಪ್ರಸನ್ನ: ನಿಜ. ಹಳ್ಳಿಯನ್ನು ವೈಭವೀಕರಿಸೋದ್ರಲ್ಲಿ ... ಅರ್ಥವೂ ಇಲ್ಲ; ಹಳ್ಳಿಗಳು ಚೆನ್ನಾಗಿ ಇದ್ದಿದ್ರೆ ...ಟೆಗ್ಯಾಕೆ ಬರ್ತಿದ್ರು. ಹಳ್ಳಿಯಿಂದ ಬಡತನದ ಕಾರಣಕ್ಕೆ ...ಪೇಟೆಗೆ ಬರಲಿಲ್ಲ, ಅದು ತಪ್ಪು ಕಲ್ಪನೆ. ಅದರ ...ದ ಕಾರಣ ಸಾಮಾಜಿಕ ಸಂಘರ್ಷ; ಕೊಳಕುತನ. ... ಹಳ್ಳಿಗಳನ್ನು ರೋಮ್ಯಾಂಟಿಸೈಜ್ ಮಾಡಬಾರದು. ...ಅಲ್ಲಿ ಇಷ್ಟೊಂದು ಆವೇಗದ ಬದುಕು ಇಲ್ಲದ್ರಿಂದ ...ಅವರ ಜತೆ ಕೆಲಸ ಮಾಡಿದ್ರೆ, ಹತ್ತೋ ಇಪ್ಪತ್ತೋ ...ಫಲ ಸಿಗುತ್ತೆ ನನಗೀಗ ಹಾಗೆ ಅನ್ನಿಸ್ತಿದೆ. ಪೇಟೆಯಲ್ಲಿ ... ಸಾಧ್ಯವೇ ಇಲ್ಲ, ಇಲ್ಲಿ ಎಲ್ಲವನ್ನೂ ಸಂಕೇತ ...ಬಿಡುತ್ತಾರೆ, ಬಂಡಾಯ, ಸಂಸ್ಕೃತಿ, ಊಟ ಎಲ್ಲವೂ...

ಪ್ರಶ್ನೆ: ಇತ್ತೀಚೆಗೆ ಕರ್ನಾಟಕದ ಪ್ರಜ್ಞೆಯನ್ನು ಕಲಕಿದ ... ವಿದ್ಯಮಾನಗಳು ಮಡೆಸ್ನಾನ ಮತ್ತು ಬಾಲಗಂಗಾಧರ ...ನ ವಚನಗಳ ಕುರಿತ ಚರ್ಚೆ. ಈ ಬಗ್ಗೆ ನಿಮ್ಮ ...ಪ್ರಾಯ?


ಪ್ರಸನ್ನ: ಅದು ತಪ್ಪು ಎನ್ನದೆ ಇನ್ನೇನು ಹೇಳಲಿ? ...'ಚರಕ'ದಲ್ಲಿ ಇನ್ನೂರೈವತ್ತು ಜನ ಕೆಲಸ ಮಾಡ್ತಾರೆ. ...ಬಡ ಹೆಣ್ಣುಮಕ್ಕಳು. ನಮ್ಮಲ್ಲಿ ಮೂರು ಟಾಯ್ಲೆಟ್ ... ಅವುಗಳನ್ನು ಎಲ್ಲರೂ ರೊಟೇಶನ್‌ನಲ್ಲಿ ಕ್ಲೀನ್ ...ಬೇಕು. ನಾವು ಅವರಿಗೆ ಮಡೆಸ್ನಾನ, ಜಾತಿವ್ಯವಸ್ಥೆ ...ಹೇಳಲಿಲ್ಲ. ನಮ್ಮ ಪ್ರಾರ್ಥನಾಮಂದಿರದ ಮುಂದೆ ...ರು ಗಣೇಶಮೂರ್ತಿ ಸ್ಥಾಪಿಸಬೇಕು ಅಂದ್ರು. ನಾನು ..., ಆದ್ರೆ ಅದಕ್ಕೆ ನೀವೇ ಪೂಜೆ ಮಾಡಬೇಕು ...ವೂ ರೊಟೇಶನ್ ಮೂಲಕ ಮಾಡಬೇಕು ಅಂತ ...ದೆ. ಇಂಥ ಕಾರ್ಯಕ್ರಮಗಳ ಮೂಲಕ ...ಸ್ನಾನದಂಥಾ ಸಾಮಾಜಿಕ ಸಂಕಷ್ಟಗಳನ್ನು ಪರಿಹಾರ ...ಕ್ಕೋಬೇಕು. ತಡ ಆದರೂ ಇದು ಒಳ್ಳೆಯ ದಾರಿ. ...ಲ್ಲಾ ಒಂದೇ ಸಲ ಕಿತ್ತು ಹಾಕಿಬಿಡ್ತೀವಿ ಅಂತ ...ದ್ರೆ, ದೇಹದ ಒಂದು ಕಡೆ ಇದ್ದ ಕುರು ಇನ್ನೊಂದು ...ಗುತ್ತೆ ಅಷ್ಟೇ. ಬಾಲಗಂಗಾಧರ ಟೀಮಿನ ಸಮಸ್ಯೆಯೂ ...ದ್ದೇ. ನಾನೊಂದು ಸಲ ಅವರ ಕಾರ್ಯಕ್ರಮದಲ್ಲೇ ...ಅನುಭವದಲ್ಲಿ ಜಾತಿ ಇದ್ಯಪ್ಪ, ನೀವು ಏನೇನೋ ...ದ್ರೆ ನಾನು ಕೇಳಲ್ಲ ಅಂತ ಹೇಳಿದೆ. ಇಂಥಾದ್ದು ...ಸತ್ಯ. ಅಡ್ವಾಣಿ ಸೂಡೋ ಸೆಕ್ಯುಲರಿಸ್ಟ್ ಅಂತ ...ಲ್ಲರನ್ನೂ ಕರೆದಾಗ ಅದರಲ್ಲಿ 20 ಪರ್ಸೆಂಟ್ ಸತ್ಯ ... ಆ ಇಪ್ಪತ್ತು ಪರ್ಸೆಂಟ್ ಸತ್ಯದಲ್ಲಿ ಅವರು ಬದುಕ್ತಾರೆ. ... ಅದನ್ನು ತಗೊಂಡು ತಿದ್ದ್ಕೋಬೇಕು. ಬಾಲಗಂಗಾಧರ ...ವ ಸುಳ್ಳಿನಲ್ಲೂ ಇರಬಹುದಾದ ಸತ್ಯವನ್ನು ತಗೊಂಡು ...ನ್ನು ದೂರ ಇಡಬೇಕು.

ಪ್ರಶ್ನೆ: ಬೆಂಗಳೂರು ಕೇಂದ್ರಿತವಾಗಿ ಸರ್ಕಾರದ ...ಮದಿಂದ ನಡೆಯುತ್ತಿರುವ ರಂಗ ಚಟುವಟಿಕೆ ಬಗ್ಗೆ ... ಹೇಳ್ತೀರಿ? ಅಥವಾ ಈ ಕುರಿತು ನಿಮ್ಮ ಸಲಹೆಗಳು ...ವೆ?

ಪ್ರಸನ್ನ: ನೋಡಿ.. ಸರ್ಕಾರಕ್ಕೆ ಯಾರೂ ಸಲಹೆ ... ಸಾಧ್ಯವಿಲ್ಲ; ಒಳ್ಳೇ ಸರ್ಕಾರಕ್ಕಾಗಲಿ, ಕೆಟ್ಟ ...ಕ್ಕಾಗಲಿ. ನಾವು ಬಂಡಾಯ ಶುರು ಮಾಡಿದ್ದು ...ಡಾಯ ಶುರು ಮಾಡಿದ್ದು ಸರ್ಕಾರದ ವಿರುದ್ಧವಾಗಿ. ... ಚಳವಳಿಗಳೂ ಹುಟ್ಟಿದ್ದು ಸರ್ಕಾರದ ...ವಾಗಿಯೇ. ಆದರೆ, ರಾಮಕೃಷ್ಣ ಹೆಗಡೆ ಅಧಿಕಾರಕ್ಕೆ ...ಗ ನಾವೆಲ್ಲರೂ ಆ ಕಡೆ ಹೋಗಿಬಿಟ್ವಿ. ಈಗ ... ಇದ್ದುಬಿಟ್ಟಿವಿ ಅನ್ನೋ ಭ್ರಮೆಯಲ್ಲಿ ಓಡಾಡ್ತಾ ಇದೀವಿ. ...ರಿಂದ ಹಣ ಬರುತ್ತೆ ಏನೋ ಮಾಡ್ತೀವಿ ಅನ್ನೋದು ... ಸರ್ಕಾರದಿಂದ 'ಸಮುದಾಯ' ಕಟ್ಟೋಕೆ ಆಗುತ್ತಾ? ...ರು ರೂಪಾಯಿಯಲ್ಲಿ ರಾಜ್ಯದ ನಲವತ್ತು ಕಡೆ ...ದು ಕಟ್ಟಿದ್ವಿ, ದೊಡ್ಡದೊಡ್ಡ ನಾಟಕಗಳನ್ನು ಮಾಡಿದ್ವಿ. ... ಇವತ್ತು ಗೊಂದಲದಲ್ಲಿದ್ದೇವೆ. ಈ ಗೊಂದಲ ... ಕೆಲಸ ಮಾಡೋಕೆ ಸಾಧ್ಯ ಇದೆ.

...ದು ಹೇಳ್ತೀನಿ ಬೆಂಗಳೂರು ಬಿಟ್ಟು ಮಾತಾಡಿ, ...ತೋರ್ಸಿಗಳ್ನ ನನ್ನ ಹಳ್ಳಿಗೆ ಬನ್ನಿ, ಅಲ್ಲಿ ನಾನೇನೋ ...ಸರ್ತಾ... ಅದನ್ನು ಗಮನಿಸಿ. ಅದು ಬಿಟ್ಟು, ...ಡಬೇಕು. ಯಾವುದೋ ಅಕಾಡೆಮಿ ಅಧ್ಯಕ್ಷ ... ಬದಲಾಗಿ ... ನಾವು ಅಲ್ಲಿಗೆ ಹೋಗ...

ಮೆಕ್ಕಾ ದಾರಿ




ಹೆಲೆನ್ ಹಳ್ಳಿಗಾಡಿನ ಒಂಟಿ ಮುದುಕಿ, ವಿಧವೆ ಹಾಗೂ ಕಲಾವಿದೆ. ಇವಳ ಕಲಾಜೀವನವು ತೀರ ತಡವಾಗಿ, ಅಂದರೆ ವಯಸ್ಸು ಕಳೆದ ನಂತರ, ವೈಧವ್ಯ ಬಂದನಂತರ, ಆರಂಭವಾದದ್ದು. ಇತ್ತ ಜರಾಮೃತ್ಯುಗಳನ್ನೆದುರಿಸಲಾರದೆ, ಅತ್ತ ಒಂಟಿತನದ ಬಾಳುವೆಯನ್ನು ಸಹಿಸಲಾರದೆ ಕಲಾಸೃಷ್ಟಿಯಲ್ಲಿ ತನ್ನ ಬಿಡುಗಡೆಯ ಹಾದಿಯನ್ನು ಕಂಡುಕೊಳ್ಳುತ್ತಾರೆ ಹೆಲೆನ್. ಹಳೆಯಕಬ್ಬಿಣ, ಗಾಜಿನಚೂರು, ಒಡೆದ ಪಿಂಗಾಣಿಚೂರು, ಸಿಮೆಂಟು ಮರಳು ಇತ್ಯಾದಿ ಮರುಬಳಕೆ ಸಾಮಗ್ರಿಗಳನ್ನೇ ಬಳಸಿ ಆಕೆ ಅಸಾಧಾರಣವಾದ ಹಾಗೂ ಜಾನಪದ ಮಾದರಿಯ ಶಿಲ್ಪಗಳನ್ನು ತನ್ನ ಸುತ್ತಲೂ ಸೃಷ್ಟಿಸಿಕೊಂಡು ಅವುಗಳ ನಡುವೆ ಬದುಕುತ್ತಿದ್ದಾಳೆ. ಅವಳ ಶಿಲ್ಪಗಳ ವೈಶಿಷ್ಟ್ಯವೆಂದರೆ, ದೀಪದ ಬೆಳಕು ಬಿದ್ದಾಗ ಅವು ಅಸಾಧಾರಣವಾಗಿ ಹೊಳೆಯುತ್ತವೆ ಹಾಗೂ ಪರಸ್ಪರ ಪ್ರತಿಫಲಿಸುತ್ತ ಅದ್ಭುತ ರಮ್ಯ ಲೋಕವೊಂದನ್ನು ಸೃಷ್ಟಿಸುತ್ತವೆ. ತನ್ನ ಈ ಅದ್ಭುತ ರಮ್ಯ ಲೋಕವನ್ನವಳು ಏಕಾಂಗಿಯಾಗಿ ತನ್ನದೇ ಕೈಗಳಿಂದ ಸೃಷ್ಟಿಸಿಕೊಂಡಿದ್ದಾಳೆ.

ಅವಳ ಶಿಲ್ಪಗಳಿಗೊಂದು ಘನವಾದ ಉದ್ದೇಶವಿದೆ. ಅವು ಕತ್ತಲೆಯನ್ನು ಹೊಡೆದುಹಾಕುವ ಪ್ರಯತ್ನ ಮಾಡುತ್ತವೆ ಹಾಗೂ ಬೆಳಕನ್ನು ಹುಡುಕಿಕೊಂಡು ಹೊರಡುತ್ತವೆ. ಅವಳ ಪ್ರಕಾರ ಅವಳ ಪಾತ್ರಗಳು, ಮೆಕ್ಕಾದತ್ತ ಪಯಣ ಬೆಳೆಸುವ ಅರಬರ ಕ್ಯಾರವಾನ್‌ಗಳ ಮಾದರಿಯಲ್ಲಿ ಪೂರ್ವದ ಬೆಳಕಿನತ್ತ ಹೊರಟಿವೆ. ಅವಳ ಶಿಲ್ಪಸಮೂಹದ ಕ್ಯಾರವಾನಿನಲ್ಲಿ, ಚಿತ್ರವಿಚಿತ್ರ ಮಾನವರಿದ್ದಾರೆ ಹಾಗೂ ಒಂಟೆಗಳು, ಗೂಬೆಗಳು, ನವಿಲುಗಳು ಇತ್ಯಾದಿ ಪ್ರಾಣಿಗಳು ಪುರಾಣಸದೃಶವಾಗಿ ನೆರೆದಿವೆ.

ಈ ನಾಟಕದ ಕತೆ ಒಂದು ನಿಜ ಘಟನೆಯೂ ಹೌದು. ಕತೆ ನಡೆಯುವುದು ದಕ್ಷಿಣ ಆಫ್ರಿಕೆಯಲ್ಲಿ, ದಕ್ಷಿಣ ಆಫ್ರಿಕೆಯ ಉತ್ತರಭಾಗದ ಗ್ರಾಮೀಣ ಪ್ರದೇಶವೊಂದರಲ್ಲಿ ಆಗಿಹೋದ ಒಬ್ಬ ಮಹಾನ್ ಕಲಾವಿದೆ ಇವಳು. ದಕ್ಷಿಣ ಆಫ್ರಿಕೆಯ ನೊಬೆಲ್ ಪ್ರಶಸ್ತಿ ವಿಜೇತ ನಾಟಕಕಾರ ಅತೋಲ್ ಫುಗಾರ್ಡ್ ಬರೆದ 'ರೋಡ್ ಟು ಮೆಕ್ಕ' ಎಂಬ ನಾಟಕದ ಭಾವಾನುವಾದ 'ಮೆಕ್ಕಾ ದಾರಿ'. ಈಕೆ ಸೃಷ್ಟಿಸಿದ ಶಿಲ್ಪಗಳು, ಈಕೆ ಬದುಕಿದ್ದ ಮನೆ, ಎಲ್ಲವನ್ನೂ ಅಲ್ಲಿನ ಸರ್ಕಾರವು ದಕ್ಷಿಣ ಆಫ್ರಿಕಾದ ಬಹುಮುಖ್ಯ ಕಲಾವಸ್ತು ಸಂಗ್ರಹಾಲಯವನ್ನಾಗಿ ಮಾಡಿ ಕಾಯ್ದುಕೊಂಡು ಬಂದಿದೆ.

ಹೆಲೆನ್ನಳ ದುರಂತವೆಂದರೆ, ತನ್ನ ಮರುಬಳಕೆ ಶಿಲ್ಪಗಳಿಂದಾಗಿ, ತನಗೇ ಅರಿವಿಲ್ಲದಂತೆ ಅವಳು ತನ್ನ ಸುತ್ತಲ ಸಮುದಾಯದ ಅನುಮಾನಕ್ಕೆ ಗುರಿಯಾಗಿದ್ದಾಳೆ. ಅವಳಿದ್ದ ಗ್ರಾಮವು ರೂಢಿಗತ ಕ್ರೈಸ್ತ ಸಮಾಜಕ್ಕೆ ಸೇರಿದ್ದು; ಅಲ್ಲಿ ಬಿಳಿಯ ಆಫ್ರಿಕಾನೇರ್ ರೈತರು ಹಾಗೂ ಕರಿಯ ಕೂಲಿಯಾಳುಗಳು ಬದುಕಿದ್ದಾರೆ. ನಮ್ಮದೇ ಭಾರತೀಯ ಮಾದರಿಯ ಒಂದು ಗ್ರಾಮ ವ್ಯವಸ್ಥೆ ಅದು. ಆ ಊರವರಿಗೆ-ಅವರೆಲ್ಲರೂ ಇವಳ ಬಾಲ್ಯ ಸಂಗಾತಿಗಳೇ ಹೌದು- ಇವಳ 'ಮೆಕ್ಕ', ಗೂಬೆ, ಒಂಟೆ, ಬೆಳಕು, ಇತ್ಯಾದಿಗಳು ಕಲಾಕೃತಿಗಳಾಗಿ ಕಾಣುವ ಬದಲು ಕ್ರೈಸ್ತ ವಿರೋಧಿ ಪಾಖಂಡಿತನದ ಅಭಿವ್ಯಕ್ತಿಯಾಗಿ ಕಾಣಿಸುತ್ತದೆ. ಹೆಲೆನ್ ಒಬ್ಬ ಧರ್ಮಭ್ರಷ್ಟಳಾದ ಹಾಗೂ ಅರೆಹುಚ್ಚಿಯಾದ ಮುದುಕಿಯಂತೆ ಕಾಣತೊಡಗುತ್ತಾಳೆ. ಊರ ಹುಡುಗರು ರಾತ್ರಿ ಹೊತ್ತು ಅವಳ ಮನೆಯ ಮೇಲೆ ಕಲ್ಲು ತೂರತೊಡಗುತ್ತಾರೆ. ಹೆಲೆನ್ನಳಿಗೆ ಏಕಾಂಗಿತನ ದುಸ್ಸಹವಾಗುತ್ತದೆ, ಅವಳ ಅಸಾಧಾರಣ ಕಲಾಸೃಷ್ಟಿ ಅವಳಿಗೇ ಮುಳುವಾಗತೊಡಗುತ್ತದೆ. ಇದು ನಾಟಕದ ಹಿನ್ನೆಲೆ.


ಮೆಕ್ಕಾ ದಾರಿ ನಾಟಕದ ಮಹತ್ವವಿರುವುದು ಇದರ ಎರಡು ಸ್ತ್ರೀ ಪಾತ್ರಗಳಲ್ಲಿ, ಸ್ತ್ರೀವಾದಿ ಚಿಂತನೆಯನ್ನು ಹಲವು ಮಜಲುಗಳತ್ತ ಕೊಂಡೊಯ್ಯಬಲ್ಲ ಒಂದು ಅಸಾಧಾರಣ ನಾಟಕವಿದು, ಜೊತೆಗೆ ಶ್ರಮಜೀವನದ ಚಿತ್ರಣವೂ ಹೌದು. ಹೆಲೆನ್ ಯುವತಿಯಲ್ಲ, ಸುಂದರಿಯಲ್ಲ, ಮಾತುಗಾರ್ತಿಯಲ್ಲ, ಬಂಡಾಯಗಾರ್ತಿಯಲ್ಲ, ಪೇಟೆಯ ಹೆಂಗಸಲ್ಲ ಅಥವಾ ಬೌದ್ಧಿಕ ಕಸರತ್ತಿನ ಕಲಾವಿದೆಯೂ ಅಲ್ಲ. ಈಕೆ ರೂಢಿಸಿಕೊಂಡಿರುವುದು ಶ್ರಮದ ಕಲೆಯನ್ನು, ಮರುಬಳಕೆ ಶಿಲ್ಪಗಳನ್ನು. ಹೆಲೆನ್‌ಳ ಅರೆಸುಟ್ಟ ಜರ್ಝರಿತ ಕೈಗಳು ಆಧುನಿಕ ಕಲಾವಂತಿಕೆಯ ಪರಿಕಲ್ಪನೆಗೇ ಸವಾಲು ಒಡ್ಡಬಲ್ಲ ಒಂದು ಮಹಾನ್ ಉಪಮೆಯಾಗಿ ನಮಗೆ ಕಾಣುತ್ತವೆ. ಪ್ರಾಯಶಃ ಮ್ಯಾಕ್ಸಿಂಗಾರ್ಕಿಯ ಕಾದಂಬರಿ 'ತಾಯಿ'ಯ ನಂತರದಲ್ಲಿ ಅಷ್ಟೇ ಸಮರ್ಥವಾಗಿ ಮೂಡಿಬಂದಿರುವ ಮತ್ತೊಂದು ಸ್ತ್ರೀಪಾತ್ರವಿದು ಎಂದರೆ ಅತಿಶಯೋಕ್ತಿಯಾಗಲಾರದು.



'ತಾಯಿ' ಕಾದಂಬರಿ ರಚಿತವಾದ ಆ ಯುಗವು ಬಡವರ ಪ್ರತಿಭಟನೆಯ ಯುಗ. ಇದು ಜಾಗತೀಕರಣದ ಹಣದುಬ್ಬರದ ಯುಗ, ಸೊಕ್ಕಿನ ಯುಗ! ಜಾಗತೀಕರಣದ ಸೊಕ್ಕು ಅದೆಂತಹದ್ದೆಂದರೆ, ಕಲಾವಂತಿಕೆಯ ಹಿರಿಮೆಯನ್ನೆ ಅದು ಹೊಸಕಿಹಾಕಿದೆ, ಕಲೆ ಎಂಬುದನ್ನು ಮಾರುಕಟ್ಟೆಯ ಯಕಶ್ಚಿತ್ ಸರಕನ್ನಾಗಿಸಿಬಿಟ್ಟಿದೆ. ಇಂದಿನ ಕಲಾಕೃತಿಗಳು ಸೋಪಿನ ಡಬ್ಬಿಗಳ ಮೇಲೆ, ನಿರೋಧಿನ ಪೊಟ್ಟಣಗಳ ಮೇಲೆ ಟಿವಿ ಜಾಹೀರಾತುಗಳ ನಡುವೆ, ಮೂಗುತೂರಿಸಲು ಹಪಹಪಿಸುತ್ತಿವೆ.

ಕಲಾವಿದರು ಬರಿದೆ ತಲೆ 'ಹರಟೆ' ಮಾಡುವ ಹಾಗೂ ಅನುಭವಹೀನರಾದ ಬೌದ್ಧಿಕ ಕ್ರಿಮಿಗಳಾಗತೊಡಗಿದ್ದಾರೆ, ದಂಡುದಂಡಾಗಿ ನಗರ ಸೇರಿಕೊಳ್ಳತೊಡಗಿದ್ದಾರೆ. ಕಲಾವಂತಿಕೆಯ ಇಂದಿನ ಒಟ್ಟು ಪರಿಸ್ಥಿತಿಗೇ ಸವಾಲಾಗಿ ನಿಲ್ಲುತ್ತಾಳೆ ಹೆಲೆನ್. ಅವಳು ಹೀಗೆ ನಿಲ್ಲುತ್ತಾಳೆ ಎಂಬುದೇ ಅವಳ ಏಕಾಂಗಿತನವೂ ಹೌದು, ಅವಳ ದುರಂತವೂ ಹೌದು. ಹೆಲೆನಳನ್ನು ಚಿತ್ರಿಸುವ ಮೂಲಕ ನಾವು ನಮ್ಮದೇ ಏಕಾಂಗಿತನಕ್ಕೆ ದನಿಗೂಡಹೊರಟಿದ್ದೇವೆ.

● ಪ್ರಸನ್ನ



ದಾಭೋಲ್ಕರ್‌ರನ್ನು ನೆನೆದು...

ಮನಸ್ಸಿನೊಳಗೆ ಕಲ್ಲಾಗಿದ್ದ
ದೇವರ ಕಲ್ಪನೆ
ಅಂದು...
ಪಿಸ್ತೂಲಿನೊಳಗಿನ ಬುಲೆಟ್ಟಾಗಿ
ತಾನೂ ಒಂದು ಮಾರಕಾಸ್ತ್ರವೆಂದು
ನಿಜರೂಪದ ದರ್ಶನ ನೀಡಿದ್ದು ಮಾತ್ರ,
ಬಯಲಾದ ಪವಾಡವೇ ಸರಿ!
* * *
ಇದುವರೆಗೆ
ಹಾಲು, ತುಪ್ಪದ ಅಭಿಷೇಕದಲ್ಲಿ
ತೃಪ್ತಿ ಹೊಂದುತ್ತಿದ್ದ ನಿಮ್ಮ ದೇವರುಗಳಿಗೆ
ಅಂದು
ನಾಸ್ತಿಕರ ನೆತ್ತರು ಬೇಕಾಯಿತೆ?
ಗೋಮಾಂಸ ತಿಂದರೇನೆ ನಂಜು ಕಾರುವ
ಹೊಟ್ಟೆಬಾಕ ಬಾಬಾಗಳೆ...
ನಿಮ್ಮ ದೇವರ
ನೆತ್ತರ ದಾಹದ ಬಗ್ಗೆ ಏನೆನ್ನುವಿರಿ?
* * *
ದಾಭೋಲ್ಕರರ ಹತ್ಯೆಯಾಗಿದೆ
ಆ ಸೇತುವೆಯ ಮೇಲೆ
ಮಡಿವಂತ ಪೂಜಾರಿಗಳೆ...
ಕೊಂಚ ದಿನಗಳ ಮಟ್ಟಿಗಾದರೂ
ಅತ್ತಗೆ ಓಡಾಡಬೇಡಿ
ಅಲ್ಲಿ ಚೆಲ್ಲಿದ ನೆತ್ತರಿಗೆ ಮೈಲಿಗೆಯಾದೀತು!
* * *
ಪೂಜಾರಿಯೊಬ್ಬ ಕೇಳಿದನಂತೆ-
"ನೀನು ಬಾಯಲ್ಲಿ ಚಾಕೋಲೇಟ್ ಹಾಕಿರೋದು
ಸೇದಿದ ಸಿಗರೇಟಿನ ವಾಸನೆ ಬರಬಾರದೆಂದಲ್ಲವೆ?"
ದಾಭೋಲ್ಕರರ ಶಿಷ್ಯ ಉತ್ತರಿಸಿದನಂತೆ-
"ಹೌದು ಸ್ವಾಮಿ, ಸರಿಯಾಗಿ ಹೇಳಿದಿರಿ
ಅಂದಹಾಗೆ,
ನೀವು ನಿಮ್ಮ ದೇವರ ಸುತ್ತಲೂ
ಪರಿಮಳದ ಊದುಬತ್ತಿ ಹೊತ್ತಿಸಿ
ಸುಗಂಧಭರಿತ ಹೂಗಳನ್ನು ಚೆಲ್ಲುವಿರಲ್ಲವೆ...
ನಿಮ್ಮ ದೇವರೇನು ಗಾಂಜಾ ಸೇದುವರೆ?!"
* * *
"ಕಾಯಿಲೆ ಬೀಳದೆ,
ಹಾಸಿಗೆಯಲ್ಲಿ ನರಳಾಡದೆ
ಒಳ್ಳೆಯ ಮರಣವನ್ನೇ ಪಡೆದ ದಾಭೋಲ್ಕರ್"
ಎಂದು ಉದ್ಗರಿಸಿದ
ವರ್ಷಗಳಿಂದ ಹಾಸಿಗೆ ಹಿಡಿದ
ಧಾರ್ಮಿಕ ಸನಾತನಿಯೊಬ್ಬ
ದೇವರ ಮೇಲೆಯೇ ಸಂಶಯಪಟ್ಟನಂತೆ!
* * *
ದಾಭೋಲ್ಕರ್‌ರಿಗೆ ಹೆದರಿ ಭೂಗತನಾಗಿ
ಅದಕ್ಕೂ 'ಜೀವಚ್ಛಮಾಧಿ'ಯೆಂದು ಕರೆದು
ಕೊನೆಗೂ
ಜೀವಸಮೇತ ಹೊರಬಂದ ಪವಾಡಪುರುಷನೊಬ್ಬ
"ಅರೆ! ದಾಭೋಲ್ಕರ್‌ರ ಹತ್ಯೆಯಾಯಿತೆ!"
ಎಂದು ಉದ್ಗರಿಸಿ ಅತೀವ ಸಂತಸದಿಂದ
ಹೃದಯಾಘಾತದಿಂದ ಸತ್ತೇ ಬಿಟ್ಟನಂತೆ!


■ ಎಲ್.ಎನ್. ಕಟೀಲ್

ಪತ್ನಿ ಪೀಡಿತರ ಕತೆ-ವ್ಯಥೆ 6

ಮೀನಾಕ್ಷಿಗೆ ಕನ್ನಡ ಬರುವುದಿಲ್ಲ, ಹಾಗಾಗಿ ಪೊಲೀಸ್ ಠಾಣೆಗೆ ಹೋದಾಗೆಲ್ಲಾ ಬೇರೊಬ್ಬರನ್ನು ಜೊತೆಗೆ ಕರೆದುಕೊಂಡು ಹೋಗ್ತಾಳೆ. ಅವಳು ಊರಿಗೆ ಹೋಗುವ ಮೊದಲು ಮಹೇಶನ ಮನೆಯಲ್ಲಿ ಇದ್ದಷ್ಟೂ ದಿನ, ನಿತ್ಯ ಒಂದಲ್ಲ ಒಂದು ಕಾರಣಕ್ಕೆ ಜಗಳ ತೆಗೆದು ಮಹೇಶನನ್ನು ಹೆದರಿಸುತ್ತಲೇ ಇದ್ದಳು. ಹೀಗಾಗಿ ದಿನವಿಡೀ ಮಹೇಶ ಹೆದರಿಕೆಯಲ್ಲೇ ಕಾಲ ಕಳೀತಿದ್ದ. ಅವಳು ಊರಿಂದ ಬಂದಮೇಲೆ ಯಾವಾಗ ಸ್ಟೇಷನ್‌ದಿಂದ ಫೋನ್ ಬಂತೋ ಅವನಿಗೆ ಖಚಿತವಾಯಿತು ಮತ್ತೆ ಏನೋ ನಡೆದಿದೆ ಎಂದು. ಠಾಣೆಗೆ ಹೋದಾಗ ಪೊಲೀಸರು ಬಾಯಿಗೆ ಬಂದಂತೆ ಅವನನ್ನು ಬೈದು 'ಏನೋ ಅಯೋಗ್ಯ ಮದುವೆ ಆಗಿಬಿಟ್ಟಿದ್ರೆ ಏನೋ; ಅಷ್ಟು ಸುಲಭ ಅಂದ್ಕೊಂಡ್ಯಾ, ಮರ್ಯಾದೆಯಿಂದ ಅವಳನ್ನು ಮನೆಗೆ ಕರೆದುಕೊಂಡು ಹೋಗು' ಎಂದು ಬಯ್ಯುತ್ತಿದ್ದರು. ನಾನು ಅಲ್ಲಿಗೆ ಹೋಗಿ ಮಾತಾಡಿ "ನೋಡ್ರಿ ಇದು ಗಂಡಹೆಂಡತಿ ವಿಚಾರ. ಯಾರು ಎಲ್ಲಿರಬೇಕು ಅನ್ನುವುದನ್ನು ಅವರೇ ತೀರ್ಮಾನ ಮಾಡಿಕೊಳ್ತಾರೆ. ಮುಂದಿನದೇನಿದ್ದರೂ ಕೋರ್ಟಿನಲ್ಲಿ ಬಗೆಹರಿಸಿಕೊಳ್ತಿವಿ. ಈ ವಿಷಯ ಇಲ್ಲಿಗೇ ಬಿಡಿ" ಎಂದಾಗ ಅವರಿಗದು ಅಷ್ಟಾಗಿ ಹಿಡಿಸಲಿಲ್ಲ, ಪ್ರತಿಯೊಂದು ಬಗೆಯ ಸಮಸ್ಯೆಗೂ ಅದರದೇ ಆದ ಪ್ರತ್ಯೇಕ ಪರಿಹಾರದ ಸ್ಥಳಗಳಿರುತ್ತವೆ. ನನ್ನ ಪ್ರಕಾರ, ಗಂಡಹೆಂಡತಿಯ ಜಗಳಗಳಿಗೆ, ಅಕಸ್ಮಾತ್ ಅವು ತೀವ್ರ ಸ್ವರೂಪದ ಇಲ್ಲವೆ ಗಂಭೀರವಾದದ್ದಾಗಿಲ್ಲದೇ ಇದ್ದರೆ ಖಂಡಿತವಾಗಿಯೂ ಪೊಲೀಸ್ ಸ್ಟೇಷನ್ ಸರಿಯಾದ ಜಾಗವಲ್ಲ, ಪೊಲೀಸರಲ್ಲಿ ಬಹಳಷ್ಟು ಜನ, (ಕೆಲವರನ್ನು ಹೊರತುಪಡಿಸಿ) ವಕೀಲರು ಮಧ್ಯಪ್ರವೇಶ ಮಾಡಿದರೆ ಅದನ್ನು ತಮ್ಮ ಕಾರ್ಯಾಚರಣೆಯಲ್ಲಿ ಮೂಗು ತೂರಿಸುವಿಕೆ ಎಂದು ಭಾವಿಸುತ್ತಾರೆ.

ಇಂಥವರಿಂದಾಗಿ ಮೊದಲೇ ಹೆಂಡತಿ ಕೈಯಲ್ಲಿ ಹಣ್ಣಾದ ಗಂಡಸರು ದುಪ್ಪಟ್ಟು ಹಿಂಸೆ ಅನುಭವಿಸುತ್ತಾರೆ. ನಾನು ಕೋರ್ಟಿನಲ್ಲಿ ಬಗೆಹರಿಸಿಕೊಳ್ಳುತ್ತೇವೆ ಎಂದಾಗ ಮೀನಾಕ್ಷಿ ಹಾಗೂ ಅವಳ ಜೊತೆ ಬಂದವರು ಒಪ್ಪಿಕೊಳ್ಳುವ ಹಂತದಲ್ಲಿದ್ದರು. ಆದರೆ ಸಬ್‌ಇನ್ಸ್‌ಪೆಕ್ಟರ್ ಮಧ್ಯ ಪ್ರವೇಶಿಸಿ ತಾನಾಗಿ ಮಾತಾಡಿ ಅವಳಿಗೆ ಗೊತ್ತಿಲ್ಲದ ಅನೇಕ ದಾರಿಗಳನ್ನು ಅವಳಿಗೆ ಪರೋಕ್ಷವಾಗಿ ತಿಳಿಸತೊಡಗಿದ. "ನೋಡೋ ಅವಳನ್ನು ಮನೆಗೆ ಬರ್ಬೇಡಾ ಎನ್ನಲು ನಿನಗೆ ಹಕ್ಕಿಲ್ಲ, ಅವಳೇನಾದರೂ ಹಾಗಂತ ನಿನ್ನ ಮೇಲೆ ಕಂಪ್ಲೇಟ್ ಕೊಟ್ಟರೆ ನಿನ್ನ ಒದ್ದು ಒಳಗ್ಹಾಕ್ತೀನಿ. ಮದುವೆ ಆದ್ಮೇಲೆ ಮುಗೀತು. ಅವಳ ಎಲ್ಲಾ ಖರ್ಚು ಜವಾಬ್ದಾರಿ ನಿಂದೇ. ಅವಳು ಇಲ್ಲೇ ಇರ್ತೀನಿ ಅಂದರೆ ಇಟ್ಕೋಬೇಕು ತಿಳೀತಾ" ಎಂದಾಗ ಮೀನಾಕ್ಷಿಯ ಜೊತೆ ಬಂದ ವ್ಯಕ್ತಿ ಅವಳಿಗೆ ತಿಳಿಸಿ ಹೇಳಿದ. ಕೂಡಲೇ ತನ್ನ ನಟನಾ ಕೌಶಲ್ಯ ಮೆರೆದ ಮೀನಾಕ್ಷಿ ಠಾಣೆಯಲ್ಲೇ ಉದ್ದಗೆ ಕಾಲಿಗೆ ಬಿದ್ದು "ನಾನು ಬೆಂಗಳೂರು ಬಿಟ್ಟು ಹೋಗಲ್ಲ, ನಿಮ್ಮ ಮನೆಯಲ್ಲೇ ಇರೋದು. ನೀವು ಗಂಜಿ ಹಾಕಿದರೂ ತಿಂದು ಬದುಕ್ತೀನಿ" ಎಂದು ಅಳಲು ಶುರುಮಾಡಿದಳು. ಆ ಕ್ಷಣದಲ್ಲಿ ಮಹೇಶ ಅದಕ್ಕೊಪ್ಪದಿದ್ದರೆ ಅವನ ಮೇಲೆ ಕಂಪ್ಲೇಂಟ್ ದಾಖಲಿಸುವ ಎಲ್ಲಾ ತಯಾರಿಯನ್ನು ಎಸ್.ಐ. ಮಾಡಿದ್ದ, ನಮಗೆ ಇನ್ನೂ ಬೇಲ್ ಸಿಕ್ಕಿಲ್ಲ, ಅಂಥದ್ದರಲ್ಲಿ ಮತ್ತೆ ತೊಂದರೆ ಮಾಡಿಕೊಳ್ಳುವುದು ಬೇಡ ಎಂದುಕೊಂಡು ಕೊನೆಗೆ, ಅವಳು ಇಲ್ಲೇ ಇರುವುದಾದರೆ ಅವಳಿಗೆ ಬೇರೆ ಮನೆ ಮಾಡಿಕೊಟ್ಟು ಮಹೇಶ ಅವಳ ಬೇಸಿಕ್ ಖರ್ಚುಗಳನ್ನು ನೋಡಿಕೊಳ್ಳುವಂತೆ ಒಂದು ವ್ಯವಸ್ಥೆ ಮಾಡಲಾಯಿತು. ಅದೇ ರೀತಿ ಇಬ್ಬರೂ ತಮ್ಮ ಹೇಳಿಕೆಗಳನ್ನು ಕೊಟ್ಟು, ಒಬ್ಬರಿಗೊಬ್ಬರು ಫೋನಿನಿಂದಾಗಲಿ, ನೇರವಾಗಿ ಆಗಲಿ ತೊಂದರೆ ಕೊಡದೆ, ತಮ್ಮ ಪಾಡಿಗೆ ಇದ್ದುಕೊಂಡು ಕೋರ್ಟಿನಲ್ಲಿ ಪರಿಹಾರ ಪಡೆದುಕೊಳ್ಳುತ್ತೇವೆ ಎಂದು ಬರೆದುಕೊಟ್ಟರು.

ಒಂದು ವಿಷಯವಂತೂ ಗೊತ್ತಿತ್ತು, ಮೀನಾಕ್ಷಿಗೆ ಇದರಿಂದ ಸಮಾಧಾನವಾಗಿಲ್ಲ ಎಂದು. ಅವಳ ಮಾನಸಿಕ ಸ್ಥಿತಿ ಬಹಳ ಬೇಗ ಬದಲಾಗುತ್ತದೆ. ಅಲ್ಲದೆ ಮಹೇಶನಿಂದ ದೂರ ಇದ್ದು ಅವಳು ಏನನ್ನೂ ಸಾಧಿಸಲು ಆಗುವುದಿಲ್ಲ, ಇಂತಹ ಅಸಹಾಯಕ ಪರಿಸ್ಥಿತಿ ಅವಳನ್ನು ಬಹಳ ಬೇಗ ಕೆರಳಿಸುತ್ತದೆ. ಮತ್ತೆ ಏನಾದರೂ ಮಾಡಿಯೇ ಮಾಡುತ್ತಾಳೆ ಎಂದು ನಾವು ಬೇಲ್ ಪ್ರಕ್ರಿಯೆ ಮುಂದುವರಿಸಿ ಕೊನೆಗೂ ಬೇಲ್ ಪಡೆದೆವು. ಅದರ ಮರುದಿನವೇ ಠಾಣೆಯಿಂದ ಮತ್ತೆ ಮಹೇಶನಿಗೆ ಫೋನ್ ಬಂತು. ಆತ ಅಲ್ಲಿಗೆ ಹೋದಾಗ ಮೀನಾಕ್ಷಿ 'ತನ್ನ ಊಟಕ್ಕೆ ಒಳ್ಳೆಯ ಅಕ್ಕಿ ಕೊಟ್ಟಿಲ್ಲ' ಎಂದು ಮಹೇಶನ ವಿರುದ್ಧ ಎಸ್.ಐ.ಗೆ ಎದುರು ದೂರು ಕೊಟ್ಟಿದ್ದಳು. "ಅಲ್ಲ ಮೇಡಂ ನನಗೆ ಬರೋ ಸಂಬಳದಲ್ಲಿ ನಾವೇನು ಬಾಸುಮತಿ ಇಲ್ಲ ಸೋನಾ ಮಸೂರಿ ಅಕ್ಕಿ ತಿನ್ನೋಕಾಗುತ್ತಾ, ನಾನು ನಮ್ಮ ತಂದೆ ಎಂಥಾ ಅಕ್ಕಿ ತಿಂತಿವೋ ಅದನ್ನೇ ಅವಳಿಗೂ ಕೊಟ್ಟಿದ್ದು" ಎಂದು ಮಹೇಶ ಹೇಳಿದರೆ ಅಲ್ಲಿ ಅವನ ಮಾತು ಕೇಳುವವರಾರೂ ಇರಲಿಲ್ಲ, ಮೀನಾಕ್ಷಿ ಹಾಗೂ ಅವಳ ಸಂಬಂಧಿಗಳು ಸ್ವಲ್ಪ ಹೊತ್ತು ಇನ್ಸ್‌ಪೆಕ್ಟರ್ ಜೊತೆ ಇದ್ದು ಹೊರಬಂದಾಗ ಏನನ್ನೋ ತೀರ್ಮಾನಿಸಿದಂತೆ ಹೊರಬಂದ ಇನ್ಸ್‌ಪೆಕ್ಟರ್ ಮಹೇಶನ ಮೇಲೆ ವರದಕ್ಷಿಣೆ ಕಿರುಕುಳದ ಕೇಸು ದಾಖಲಿಸುವಂತೆ ತನ್ನ ಕೆಳಗಿನ ವ್ಯಕ್ತಿಗೆ ಹೇಳಿಹೋದ. ಕೂಡಲೇ ಮೀನಾಕ್ಷಿಯಿಂದ ಕೆಲ ಮಾಹಿತಿ ಪಡೆದು, ತಮ್ಮ ಬುದ್ಧಿಯನ್ನು ಸ್ವಲ್ಪ ಬೆರಸಿ ಮಹೇಶ ಹಾಗೂ ಅವನ ಕುಟುಂಬದ ಎಲ್ಲಾ ಸದಸ್ಯರ ಮೇಲೂ ವರದಕ್ಷಿಣೆ ಕಿರುಕುಳ (498ಎ) ಹಾಗೂ ಪ್ರಾಣ ಬೆದರಿಕೆ (506) ಕೇಸನ್ನು ದಾಖಲಿಸಿದರು. ಬರೀ ಅಕ್ಕಿ ಸರಿ ಇಲ್ಲ ಎಂದು ಬಂದಿದ್ದ ಮೀನಾಕ್ಷಿ ವರದಕ್ಷಿಣೆ ಕೇಸು ಹಾಕಿದ್ದಳು. ಆಗ ಅಲ್ಲಿಗೆ ಹೋಗಿ ಮಹೇಶನ ಜಾಮೀನು ಆದೇಶ ಕೊಟ್ಟಾಗ ಠಾಣೆಯಲ್ಲಿ ಏನೋ ಗುಸುಗುಸು ಶುರುವಾಯ್ತು. "ಏನು ಮೇಡಂ ಅಡ್ವಾನ್ಸ್ ಜಾಮೀನು ತಂದಿದ್ದೀರಲ್ಲಾ, ನಮ್ಮ ಮೇಲೆ ಅಷ್ಟೂ ನಂಬಿಕೆ ಇರಲಿಲ್ಲವಾ? ನೀವಿನ್ನು ಹೋಗಿ. ಇನ್ನೇನು ಅರೆಸ್ಟಂತೂ ಮಾಡುವುದಿಲ್ಲ" ಎಂದರು. ಆಯ್ತೆಂದು ಬಂದರೆ ಮಹೇಶನನ್ನು ಕರೆದು ಎಸ್.ಐ. "ಏನೋ ಮಗನೆ ಅಡ್ವಾನ್ಸ್ ಬೇಲ್ ತಗೋತಿ ಏನೋ. ಸಿಕ್ಕೇ ಸಿಗ್ತಿಯಾ ಎಲ್ಲಿಗ್ಹೋಗ್ತಿಯಾ ನೋಡ್ಕೋತೀನಿ" ಎಂದು ಹೆದರಿಸಿ ಅವನಿಂದ 3,000 ರೂ. ಇಸಿದುಕೊಂಡು ಮನೆಗೆ ಕಳಿಸಿಕೊಟ್ಟ. ಅಷ್ಟಕ್ಕೇ ಮುಗಿಯಲಿಲ್ಲ, ದಿನಬೆಳಗಾದರೆ ಮಹೇಶನಿಗೆ ಫೋನ್ ಮಾಡುವುದು, ಅನವಶ್ಯಕ ಪ್ರಶ್ನೆ ಕೇಳುವುದು, ವಿನಾಕಾರಣ ಸ್ಟೇಷನ್‌ಗೆ ಬರಲು ಹೇಳುವುದು, ಪ್ರತಿ ಸಲ ಹೋದಾಗಲೂ ಹಣ ಕಿತ್ತುಕೊಳ್ಳುವುದು ಎಲ್ಲಾ ನಡೆಯಿತು.




ಈ ಎಲ್ಲದರ ಮಧ್ಯೆ ಸಿಕ್ಕು ಮಹೇಶನಿಗೆ ನೆಮ್ಮದಿಯಿಂದ ಸ್ವಲ್ಪ ಸಮಯ ಕಳೆಯುವುದೇ ಅಪರೂಪ ಎಂಬಂತಾಗಿದೆ. ಇದೆಲ್ಲ ಆದ ಸ್ವಲ್ಪ ದಿನದಲ್ಲಿ ಅದೇನು ಆಯಿತೊ ಗೊತ್ತಿಲ್ಲ, ಒಮ್ಮೆಗೇ ಮೀನಾಕ್ಷಿ ಮಹೇಶನಿಗೆ ಫೋನ್ ಮಾಡಿ, "ನಾನು ನಿನಗೆ ಅನ್ಯಾಯ ಮಾಡಿದೆ. ದಯವಿಟ್ಟು ಕ್ಷಮಿಸು, ನಾನು ಕೊಟ್ಟ ಕಂಪ್ಲೇಂಟ್ ವಾಪಸು ತಗೋತಿನಿ" ಎಂದು ಹೇಳಿದಾಗ ಅವನಿಗೆ ನಂಬಲೇ ಆಗಲಿಲ್ಲ, ಆತ ನನಗೆ ಇದರ ಬಗ್ಗೆ ಹೇಳಿದಾಗ, ಒಳ್ಳೆಯದು ಆದರೆ ಪೊಲೀಸರು ಹಾಗಾಗಲು ಬಿಡುವುದಿಲ್ಲ, ನಾವು ಮುಂದಿನದಷ್ಟೇ ವಿಚಾರ ಮಾಡೋಣ ಎಂದೆ. ಆದರೆ ಪಾಪ ಅವನಿಗೇನೋ ನಂಬಿಕೆ, ಕೇಸು ವಾಪಸು ತಗೋಬಹುದು ಎಂದು. ಮೀನಾಕ್ಷಿ ಜೊತೆ ಮಹೇಶ್ ಠಾಣೆಗೆ ಹೋದಾಗ ಎಸ್.ಐ. ಖಡಾಖಂಡಿತವಾಗಿ ಮೀನಾಕ್ಷಿಯ ನಿರ್ಧಾರವನ್ನು ತಳ್ಳಿಹಾಕಿ "ಹಾಗೆ ಮಾಡೋಕೆ ಬರಲ್ಲ, ಈಗ ಏನಿದ್ದರೂ ನಾವು ಚಾರ್ಜ್‌ಶೀಟ್ ಹಾಕಲೇಬೇಕು" ಎಂದು ಹೇಳಿದ. ಆಗ ಮಹೇಶ್ ನನಗೆ ಫೋನ್ ಮಾಡಿ 'ಹೌದಾ ಮೇಡಂ' ಎಂದು ಕೇಳಿದ ಮತ್ತು ಎಸ್.ಐ. ಜೊತೆ ಮಾತಾಡಲು ಫೋನ್ ಕೊಟ್ಟ. "ಅಲ್ಲಾ ಸರ್ ಮೀನಾಕ್ಷಿಯ ಹೇಳಿಕೆ ಪಡೆದು ಅದರ ಆಧಾರದ ಮೇಲೆ 'ಬಿ' ರಿಪೋರ್ಟ್ ಹಾಕಬಹುದಲ್ಲಾ" ಎಂದರೆ, "ಅಲ್ಲಾ ಮೇಡಂ ಎರಡು ಲಕ್ಷದ ಬೆಲೆಯ ಕೆಲಸವನ್ನು ಸುಮ್ಮನೆ ಮಾಡೋಕ್ಕೆ ಹೇಳ್ತಿರಲ್ಲಾ, ನಾನೇನಾದ್ರು ಹಾಗೆ ಮಾಡಿದರೆ, ನಮ್ಮ ಸೀನಿಯರ್‌ಗಳು ನನ್ನನ್ನು ಸುಮ್ಮನೆ ಬಿಡ್ತಾರಾ? ನಾನೊಬ್ಬನೇ ದುಡ್ಡು ತಿಂದಿದ್ದೀನಿ ಅಂದ್ಕೋತಾರೆ. ಅದೆಲ್ಲಾ ಆಗಲ್ಲ ಮೇಡಂ. ನಾನು ಚಾರ್ಜ್‌ಶೀಟ್ ಹಾಕ್ತೀನಿ. ನನ್ನ ಕೆಲಸ ಮಾಡ್ತೀನಿ, ನೀವು ಕೋರ್ಟಿನಲ್ಲಿ ಅದೇನು ಮಾಡ್ಕೋತೀರೋ ಮಾಡ್ಕೊಳ್ಳಿ. ದಯವಿಟ್ಟು ಇದರ ಬಗ್ಗೆ ಹೆಚ್ಚಿಗೆ ಮಾತಾಡಬೇಡಿ" ಎಂದು ಮಾತು ಮುಗಿಸಿದ. ಅವತ್ತೆ ಎಸ್.ಐ. ಮನಸ್ಸು ಮಾಡಿದ್ದರೆ ಹಸನಾಗಬಹುದಾಗಿದ್ದ ಮಹೇಶನ ಭವಿಷ್ಯ ಮತ್ತೆ ಅಯೋಮಯವಾಗಿ ಹೋಯ್ತು, ಅಷ್ಟರಲ್ಲೇ ಊರಿಗೆ ಬಂದ ಮೀನಾಕ್ಷಿಯ ತಂದೆತಾಯಿ "ನೀನೇನಾದ್ರೂ ಕಂಪ್ಲೇಂಟ್ ವಾಪಸ್ಸು ತಗೊಂಡರೆ ನಮ್ಮ ಪಾಲಿಗೆ ಸತ್ತಂತೆಯೇ" ಎಂದು ಅವಳನ್ನು ಹೆದರಿಸಿ ಮತ್ತೆ ಪರಿಸ್ಥಿತಿಯನ್ನು ಯಥಾ ಸ್ಥಿತಿಗೆ ತಂದು ನಿಲ್ಲಿಸಿದ್ದಾರೆ. ಇಂದಿಗೆ ಮಹೇಶನ ಮದುವೆ ಆಗಿ ಆರು ತಿಂಗಳುಗಳಾಗಿವೆ. ಪೊಲೀಸ್ ಸ್ಟೇಷನ್‌ಗೆ ತಿರುಗಿ ತಿರುಗಿ ಅವನಲ್ಲಿ ಮದುವೆ ಎಂಬ ವ್ಯವಸ್ಥೆಯ ಬಗ್ಗೆ ನಂಬಿಕೆಗಳೇ ಹೊರಟುಹೋಗಿವೆ. ಅಲ್ಲದೆ ಮತ್ತೆ ಮೀನಾಕ್ಷಿಯ ಹೊಲಸು ಎಸ್‌ಎಂಎಸ್‌ಗಳು ಶುರುವಾಗಿವೆ. "ಮೇಡಂ ಆತ್ಮಹತ್ಯೆ ಮಾಡಿಕೊಳ್ಳಬೇಕು ಅನಿಸ್ತಿದೆ, ಜೀವನ ಬೇಜಾರಾಗಿದೆ" ಎಂದು ಆತ ಹೇಳುವಾಗ ಸಮಾಧಾನದ ಮಾತುಗಳಿಗೆ ತಡಕಾಡುವಂತಾಗುತ್ತವೆ.

ಮೀನಾಕ್ಷಿಯ ಥರ ಇರುವ ಬೇಕಾದಷ್ಟು ಗಂಡಸರನ್ನು ನಾವು ನೋಡಿರುತ್ತೇವೆ ಇಲ್ಲ ಕೇಳಿರುತ್ತೇವೆ. ಪ್ರೀತಿಸು ಎಂದು ಹುಡುಗಿಯನ್ನು ಕಾಡಿ ಚಿತ್ರಹಿಂಸೆ ಕೊಡುವವರು, ಮದುವೆ ಆದ ಹೆಂಡತಿ ಮೇಲೆ ತಮ್ಮ ಬಲಪ್ರಯೋಗ ಮಾಡಿ ಹೊಡೆದು ಕೊಲ್ಲುವವರು, ಹಿಂಸೆ ಕೊಟ್ಟು ಮಜಾ ಅನುಭವಿಸುವವರು ಇವನ್ನೆಲ್ಲ ದಿನನಿತ್ಯ ಕೇಳುತ್ತಲೇ ಇರುತ್ತೇವೆ. ಅಂತಹ ಹೊತ್ತಿನಲ್ಲಿ ಮಹಿಳೆ ಸ್ವಲ್ಪ ಧೈರ್ಯ ಹಾಗೂ ಗಟ್ಟಿ ಮನಸ್ಸು ಮಾಡಿದರೆ ಅವಳ ಸಹಾಯಕ್ಕೆ ಕಾನೂನು, ಸಂಘ ಸಂಸ್ಥೆಗಳು ಮುಂತಾದವು ದೊರೆಯುತ್ತವೆ. ಎಷ್ಟೋ ಸಲ ನಿಜವಾಗಿ ನೊಂದ ಮಹಿಳೆಗೂ ಪೊಲೀಸರಿಂದ ಕಿರುಕುಳ ಸಿಕ್ಕ ತನಗೆ ಉದಾಹರಣೆಗಳಿವೆ. ಅವಳು ತನಗೆ ತೊಂದರೆ ಕೊಟ್ಟ ಪೊಲೀಸರ ಮೇಲಧಿಕಾರಿ ಅಥವಾ ಇನ್ಯಾವುದೋ ಉನ್ನತ ಅಧಿಕಾರಿಯನ್ನು ಸಂಪರ್ಕಿಸಬಹುದು ಇಲ್ಲ ಬೇರೆ ಯಾವುದೋ ಮಾಧ್ಯಮದ ಮೂಲಕವಾದರೋ ತನ್ನ ಸಹಾಯಕ್ಕೆ ಜನರನ್ನು ಹೊಂದಿಸಬಹುದು. ಮೀನಾಕ್ಷಿಯಂತಹ ವಿಕ್ಷಿಪ್ತ ಮನಸ್ಸಿನ ಹೆಂಗಸರು ಮತ್ತು ಗಂಡನ ವಿರುದ್ಧ ಕಾನೂನಿನ ದುರ್ಬಳಕೆ ಮಾಡುವವರು ಬಹಳ ಕಡಿಮೆಯೇ ಇರಬಹುದು. ಆದರೆ ಅಂತಹವರಿಂದ ತೊಂದರೆಗೆ ಒಳಗಾದ ಗಂಡಸರಿಗೆ ಮಾತ್ರ ಯಾವುದೇ ಕಾನೂನಿನ ನೆರವು ಇಲ್ಲ, ದಲಜೀತ್‌ನ ಕಥೆ ಕೂಡ ಇದಕ್ಕೆ ಹೊರತಾಗಿಲ್ಲ.

ದಲ್‌ಜೀತ್ ಮೂಲತಃ ದೆಹಲಿಯವನಾದರೂ ಕಳೆದ 12 ವರ್ಷಗಳಿಂದ ಕೆಲಸದ ನಿಮಿತ್ತ ಬೆಂಗಳೂರಿನಲ್ಲೇ ಇದ್ದಾನೆ. ಉತ್ತರ ಭಾರತದ ಮಧ್ಯಮ ವರ್ಗದ ಸಂಪ್ರದಾಯಸ್ಥ ತಂದೆತಾಯಿಗೆ ಮೂರನೇ ಮಗ ಆತ. ತಂದೆಯ ಮನೆಯಲ್ಲಿ ಈ ಮಧ್ಯಮ ವರ್ಗಕ್ಕೇ ಅಭಿಶಾಪವಾದ ವರದಕ್ಷಿಣೆಯಂತಹ ಕೆಟ್ಟ ಪದ್ಧತಿಗೆ ಬಲಿಯಾಗಿ ಡೈವೋರ್ಸ್ ಪಡೆದು, ಆರ್ಥಿಕ ಮುಗ್ಗಟ್ಟಿನಿಂದಾಗಿ ಮಗುವಿನ ಕಸ್ಟಡಿಯನ್ನು ಕಳೆದುಕೊಂಡು ಮನೆ ಸೇರಿರುವ ಹಿರಿಯ ಅಕ್ಕ ಇದ್ದಾಳೆ. ಜೊತೆಗೆ ಅಪಘಾತದಲ್ಲಿ ಗಂಡನನ್ನು ಕಳೆದುಕೊಂಡು, ಗಂಡನ ಮನೆಯವರ ಯಾವ ಸಹಾಯವೂ ಸಿಗದೆ ತನ್ನ ಮೂರು ಮಕ್ಕಳನ್ನು ಕರೆದುಕೊಂಡು ತವರು ಸೇರಿರುವ ಎರಡನೆ ಅಕ್ಕ ಇದ್ದಾಳೆ. ಇವರೊಂದಿಗೆ ಕಷ್ಟಪಟ್ಟು ಸಂಸಾರ ನಡೆಸುತ್ತಿರುವ ವಯಸ್ಸಾದ ತಂದೆತಾಯಿ. ಇಂತಹ ಹಿನ್ನೆಲೆಯಿಂದ ಬಂದ ದಲ್‌ಜೀತ್‌ಗೆ ದೇಶದ ಯಾವ ಭಾಗ ಆದರೂ ಸರಿ ದುಡಿಮೆ ಮಾಡಲೇಬೇಕು ಎಂಬ ಅನಿವಾರ್ಯತೆ ಇದ್ದದ್ದು ಸಹಜ. ಈ ಎಲ್ಲ ಜವಾಬ್ದಾರಿಗಳನ್ನು ನಿಭಾಯಿಸುವಷ್ಟರಲ್ಲಿ ದಲ್‌ಜೀತ್‌ಗೆ ಮದುವೆಯ ವಯಸ್ಸು ಸರಿಯತೊಡಗಿತ್ತು, ಆತನಿಗೆ 34 ವರ್ಷಗಳಾದಾಗ ಆತನ ಸ್ನೇಹಿತನೊಬ್ಬ ಮಾತಾಡುತ್ತ ತನ್ನ ಹೆಂಡತಿಯ ಹತ್ತಿರದ ಸಂಬಂಧದ ಹುಡುಗಿಯ ಪ್ರಸ್ತಾಪ ಮುಂದಿಟ್ಟ. "ನೋಡು ಹುಡುಗಿ ಸ್ವಲ್ಪ ಕಪ್ಪು, ನಿನಗೆ ಗೊತ್ತಲ್ಲ, ಉತ್ತರ ಭಾರತದ ಜನ ಮೈಬಣ್ಣ ಹಾಗೂ ಸೌಂದರ್ಯಕ್ಕೆ ಎಷ್ಟು ಪ್ರಾಮುಖ್ಯತೆ ಕೊಡ್ತಾರೆ ಅಂತ. ಆದ್ದರಿಂದಲೇ ಇಲ್ಲಿಯವರೆಗೆ ಅವಳಿಗೆ ಮದುವೆ ಆಗಿಲ್ಲ, ಅವಳು ನಿನಗಿಂತ 4 ವರ್ಷ ದೊಡ್ಡವಳು. ಒಳ್ಳೆ ಹುಡುಗಿ, ಮದುವೆ ಆಗು" ಎಂದಾಗ ದಲ್‌ಜೀತ್‌ನ ಮನಸ್ಸು ಕರಗಿತು. ಇಬ್ಬರು ಸಹೋದರಿಯರ ಜೀವನದ ದುರಂತಗಳಿಂದ ಕುಗ್ಗಿದ್ದ ಆತ ಕೂಡಲೇ ಮದುವೆಗೆ ಒಪ್ಪಿದ. ಮದುವೆಗೆ ಮುಂಚೆ ಹುಡುಗಿ ನೀಲಿಮಾಳನ್ನು ಭೆಟ್ಟಿ ಆದಾಗ ದಲ್‌ಜೀತ್‌ಗೆ ಅವಳ ತವರುಮನೆಯವರ ಅಂತಸ್ತು ಶ್ರೀಮಂತಿಕೆ ಎಲ್ಲ ನೋಡಿ ಕೊಂಚ ದಿಗಿಲಾಯಿತು. ಆದರೆ ಅವರೆಲ್ಲ ಅವನನ್ನು ಬಹಳವಾಗಿಯೇ ಮೆಚ್ಚಿಕೊಂಡರು. ಸರಳವಾಗಿ ಮದುವೆಯೂ ಆಯಿತು. ಮುಂದೆ ಆರು ತಿಂಗಳಲ್ಲಿ ನೀಲಿಮಾ ಗರ್ಭಿಣಿ ಆದಾಗ ದಲ್‌ಜೀತ್ ಹಾಗೂ ಅವನ ತಂದೆತಾಯಿಯ ಸಂತೋಷಕ್ಕೆ ಮಿತಿಯೇ ಇರಲಿಲ್ಲ, ಕುಟುಂಬದಲ್ಲಿ ಕೊನೆಪಕ್ಷ ಒಬ್ಬರದಾದರೂ ಸಂಸಾರ ನೆಟ್ಟಗೆ ನಡೆದಿದೆ ಅಷ್ಟು ಸಾಕು ಎಂದು ನಿಟ್ಟುಸಿರುಬಿಟ್ಟರು. ನೀಲಿಮಾಗೆ ಗಂಡು ಮಗು ಹುಟ್ಟಿದಾಗ ಅವಳ ಮನೆಯವರೂ ಸೇರಿ ಎಲ್ಲರೂ ಸಂಭ್ರಮ ಪಟ್ಟರು.

ಸುಮಾರು ಎರಡು ವರ್ಷ ಎಲ್ಲ ಸರಿಯಾಗಿ ಇತ್ತು, ಬರಬರುತ್ತಾ ನೀಲಿಮಾ ದಲ್‌ಜೀತ್‌ನಿಂದ ಕೊ... ದೂರದೂರವೇ ಇರತೊಡಗಿದಳು. ಬಹುಶಃ ಯಾವುದ... ಕಾರಣಕ್ಕೆ ಬೇಜಾರಾಗಿರಬಹುದು ಎಂದುಕೊಂಡು ... ಅವಳನ್ನು ಖುಷಿಪಡಿಸುವ ಸಲುವಾಗಿ ಅವಳ ಹು... ಹಬ್ಬದದಿನ ಮನೆಯಲ್ಲಿ ಒಂದು ಸರ್‌ಪ್ರೈಸ್ ಪಾ... ಹಮ್ಮಿಕೊಂಡ. ಅಚಾನಕ್ಕಾಗಿ ಅವಳ ಹಾಗೂ ದಲ್‌ಜೀ... ಸ್ನೇಹಿತರು ಮನೆಗೆ ಬರಲು ಪ್ರಾರಂಭಿಸಿದಾಗ ನೀಲಿ... ಬಹಳ ಖುಷಿಪಟ್ಟಳು. ಇಡೀ ದಿನ ಸಂತೋಷದ... ಕಳೆಯಿತು. ರಾತ್ರಿ ದಲ್‌ಜೀತ್‌ನನ್ನು ತಬ್ಬಿ ನೀಲಿಮಾ "ಇ... ನನಗೆ ಬಹಳ ಖುಷಿಯಾಗಿದೆ. ನಾನೆಂದೂ ಈ ದಿನ... ಮರೆಯುವುದಿಲ್ಲ" ಎಂದಾಗ ಪಟ್ಟ ಶ್ರಮ ಸಾರ್ಥಕವಾಯಿ... ಎಂದುಕೊಂಡ. ಮರುದಿನ ಮುಂಜಾನೆ, ಮೊದ... ನಿರ್ಧರಿಸಿದಂತೆ ನೀಲಿಮಾ ತನ್ನ ತವರು ಮನೆಗೆ ಹೋಗ... ತಯಾರಾದಳು. ದಲ್‌ಜೀತ್ ಅವಳನ್ನು ಹಾಗೂ ... 15 ತಿಂಗಳ ಮಗುವನ್ನು ಅವಳ ತವರಿಗೆ ಬಿಟ್ಟು ಆಫೀ... ಹೋದ. ಒಂದು ವಾರಕ್ಕಾಗಿ ಎಂದು ಹೋದ ನೀಲಿ... ಅದೇಕೆ ಅಷ್ಟೊಂದು ಬ್ಯಾಗ್‌ಗಳನ್ನು ಒಯ್ದಳು ಎ... ಆತ ವಿಚಾರಿಸಲೇ ಹೋಗಲಿಲ್ಲ, ಒಂದೇ ಊರಲ್ಲಿದ್ದ... ಎರಡು ದಿನಗಳಿಂದ ನೀಲಿಮಾಳ ಫೋನ್ ಬರದೇ ಇ... ತಾನೇ ವಿಚಾರಿಸಲು ಹೋದ. ಅಲ್ಲಿದ್ದವರ ವರ್ತನೆ... ಬದಲಾಗಿತ್ತು, ನೀಲಿಮಾ ಸೇರಿದಂತೆ ಯಾರೂ ಆತನೊಂ... ಮಾತಾಡಲಿಲ್ಲ, ಏನೂ ತಿಳಿಯದ ಆತ ನಂತರ ನೋ... ಕೊಂಡರಾಯ್ತು ಎಂದು ಮನೆಗೆ ಬಂದ. ಯಾವುದ... ಪೂಜೆ ಇದೆ ಬನ್ನಿ ಎಂದು ನೀಲಿಮಾಳ ತಂದೆ ಕರೆದ... ದಲ್‌ಜೀತ್‌ನ ತಂದೆ ತಾಯಿ ದೆಹಲಿಯಿಂದ ಬಂದಿದ್ದ... ಅವರೊಂದಿಗೆ ಮನೆಯಲ್ಲಿ ಆರಾಮವಾಗಿ ಕಾಲಕಳೆಯು... ಸಮಯದಲ್ಲಿ ಬಂದ ಪೊಲೀಸರು ಮೂವರನ್ನೂ ಅ... ಮಾಡಿ ಠಾಣೆಗೆ ಕರೆದೊಯ್ದರು. ಅಲ್ಲಿಗೆ ಹೋ... ಗೊತ್ತಾಗಿದ್ದು ನೀಲಿಮಾ, ದಲ್‌ಜೀತ್ ಹಾಗೂ ಅ... ತಂದೆತಾಯಿಯ ಮೇಲೆ ವರದಕ್ಷಿಣೆ ಕಿರುಕುಳದ ಕ... ಹಾಕಿದ್ದಾಳೆ ಹಾಗೂ ಆತನಿಂದ ಡೈವೋರ್ಸ್ ಕ... ಬಯಸುತ್ತಿದ್ದಾಳೆ ಅಂತ. ದಲ್‌ಜೀತ್‌ಗೆ ಭೂ... ಕುಸಿದಂತಾಯ್ತು, ಅದ್ಯಾಕೆ ನೀಲಿಮಾ ಅಂಥ ನಿರ್ಧಾ... ತಗೊಂಡಳು ಎಂಬುದೇ ಅವನಿಗೆ ಅರ್ಥವಾಗಲಿಲ್ಲ, ಅ... ಕುಟುಂಬದ ಅಂತಸ್ತಿಗೆ ತಕ್ಕಂತೆ ದಲ್‌ಜೀತ್‌ನ ಕುಟು... ಇಲ್ಲ ಎಂಬುದು ಅವನಿಗೆ ಗೊತ್ತಿತ್ತು, ಆದರೆ ಅ... ಇತರ ಸಂಬಂಧಿಗಳ ಎದುರು ಇದರಿಂದಾಗಿ ನೀಲಿ... ಕೀಳರಿಮೆ ಅನುಭವಿಸುತ್ತಿದ್ದಾಳೆ ಎಂಬುದು ಅವ... ಗೊತ್ತಿರಲಿಲ್ಲ, ಇಷ್ಟಕ್ಕೆ ಸುಮ್ಮನಾಗದ ಆಕೆ ಡೈವೋರ್ಸ್... ಅರ್ಜಿ ಸಲ್ಲಿಸಿ ಜೊತೆಗೆ ಕೌಟುಂಬಿಕ ದೌರ್ಜನ್ಯ ಕಾಯ್ದೆ... ಅಡಿಯಲ್ಲಿ ಕೂಡ ಕೇಸು ದಾಖಲಿಸಿ ತಿಂಗಳಿಗೆ ... ಸಾವಿರ ರೂಪಾಯಿ ಮೆಂಟೆನನ್ಸ್ ಆರ್ಡರ್ ಪಡೆದ... ಅವಳು ಡೈವೋರ್ಸ್ ಹಾಕುವ ಮೊದಲೇ ದಲ್‌ಜ... ಹೆಂಡತಿಯ ಜೊತೆ ಬದುಕುವ ಇಚ್ಛೆ ವ್ಯಕ್ತಪಡಿಸಿ ಕ... ಹಾಕಿದ್ದ ಆದರೆ ತನ್ನ ಗುರಿ ಮುಟ್ಟುವಲ್ಲಿ ಅವಳು ತೋರಿ... ಉತ್ಸಾಹದ ಎದುರು ಆತನದು ಸಾಕಾಗಲಿಲ್ಲ, ಕೆಟ್ಟ ಸಮ... ಬಂದರೆ ಒಟ್ಟಾಗಿ ಬರುತ್ತದೆ ಎಂದು ಹೇಳುವು... ಕೇಳಿದ್ದೇವೆ. ಆದರೆ ಅದು ಬಂದಾಗ, ಅನುಭವಿಸುವವ... ನೋಡಿದಾಗ ಅದರ ನಿಜವಾದ ರೂಪ ಗೊತ್ತಾಗು... ಈ ಮಧ್ಯೆ ದಲ್‌ಜೀತ್‌ನ ತಂದೆತಾಯಿಯ ಆರೋ... ಬಹಳೇ ಕೆಟ್ಟಾಗ ಅವರನ್ನು ನೋಡಿಕೊಳ್ಳಲು ಉ... ಹೋದ ಆತನ ಆರೋಗ್ಯ ಕೂಡ ಹದಗೆಡತೊಡ... ತೀವ್ರ ಮಾನಸಿಕ ಉದ್ವೇಗ, ಮನೋಕ್ಷೋಭೆ ಆದ... ಆತ ಬೆಂಗಳೂರಿಗೆ ಬಂದು ಡಾಕ್ಟರ್‌ಗೆ ತೋರಿಸಿ... ಅಡ್ಮಿಟ್ ಆಗಲು ಹೇಳಿದರು. ಆ ಸಮಯದಲ್ಲಿ ಅ... ಕೆಲಸ ಮಾಡುತ್ತಿದ್ದ ಕಂಪನಿಯವರು ವಿನಾಕಾರಣ ಅವ... ಕೆಲಸದಿಂದ ತೆಗೆದು ಹಾಕಿದಾಗ ಸುಳಿಗೆ ... ಬಲಿಪಶುವಾದಂತಾಗಿದ್ದ. "ಈ ಹಂತದಲ್ಲಿ ಸಾಯಬ... ಅಂತ ನಿರ್ಧಾರ ಮಾಡಿದ್ದೆ ಮೇಡಂ. ಆದರೆ ಸಾಯ... ಮೊದಲು ಎಲ್ಲಾ ಮನೆ ಮಂದಿಯ ಫೋಟೋ ಕೈ... ಹಿಡಿದಾಗ ನನ್ನ ತಂದೆ ತಾಯಿ ಹಾಗೂ ಮಗನ ... ನೋಡಿ ದುಃಖ ಉಕ್ಕಿ ಬಂತು, ನಾನು ಸಾಯಲ್ಲ ಹೋ... ಡ್ತೀನಿ ಅಂತ ಆವಾಗಲೇ ನಿರ್ಧಾರ ಮಾಡಿದೆ" ಎ... ಆತ ಹೇಳುವಾಗ ಒತ್ತಡಕ್ಕೆ ಒಳಗಾಗಿ ಆತ್ಮಹತ್ಯೆ ಮಾ... ಕೊಳ್ಳುವ ನೂರಾರು ಜನರ ಆ ಕ್ಷಣದ ಮಾನಸಿಕ... ಹೇಗಿರಬಹುದು ಎಂದು ನೆನೆದು ಭಯವಾಯಿ... ಇದೆಲ್ಲದರ ಜೊತೆ ಮಗನನ್ನು ನೋಡಲು ಕೋ... ಅವನಿಗೆ ಅನುವು ಮಾಡಿಕೊಟ್ಟಿರುವುದನ್ನು ವಿರೋ... ನೀಲಿಮಾ ಬೇರೆ ಕೋರ್ಟಿನಲ್ಲಿ ಅದನ್ನು ರದ್ದುಗೊಳಿಸು... ಅರ್ಜಿಸಿದ್ದಾಳೆಂದು ದಲ್‌ಜೀತ್‌ಗೆ ಗೊತ್ತಾದಾಗ "ಮೆ... ನನ್ನನ್ನು ಯಾಕೋ ಸ್ಪರ್ಮ್ ಡೋನರ್ ತರಹ ಉಪಯೋ... ಸಿಕೊಳ್ಳಲಾಗಿದೆ ಎಂಬ ಭಾವನೆ ಬರುತ್ತಿದೆ" ಎಂದ. ಆ ನಿಮಿಷ ಅದರ ಸಾಧ್ಯಾಸಾಧ್ಯತೆಗಳ ಬಗ್ಗೆ ನೆನೆದು ಆ ಮಟ್ಟಕ್ಕೂ ಮನುಷ್ಯರು ಹೋಗಬಹುದು ಎಂಬ ಸಂಶಯ ನಿಜವಾಗಿಯೂ ಮೂಡಿಹೋಯಿತು. ■



● ರಾಜಲಕ್ಷ್ಮೀ ಅಂಕಲಗಿ

ತ್ರ್ಯ ಮತ್ತು ಬಂಧನ
ಹೆಣೆದುಕೊಂಡ ಅನುಸಂಧಾನ
ತ್ರ್ಯದೊಳಗೆ ಬಂಧನ ಬಂಧಿ
ಧನದೊಳಗೆ ಸ್ವಾತಂತ್ರ್ಯ ಬಂಧಿ
ಲಾಗದ ಬಂಧ
ಕವಾಗದ ಬಂಧ
ಂಧ

ಬಂಧನದ ಗುಹೆಯೊಳಗೆ ಹೋಗಿ
ಡಿದೆ.
ಸ್ವಾತಂತ್ರ್ಯದ ಗುಹೆಯ ಬಾಗಿಲಿತ್ತು
ವಿತ್ತು, ಕತ್ತಲೆಯಿತ್ತು.

ತ್ರ್ಯದ ಗುಹೆಯೊಳಗೆ ಹೋಗಿ ಸಂತಸಪಟ್ಟೆ
ಬೆಳಕಿತ್ತು ಪುಳಕವಿತ್ತು
ಧನದ ಕತ್ತಲು ಚೆಲ್ಲುತ್ತಾ
ಲು ಮುಚ್ಚುತ್ತಿತ್ತು.

ಧನ ಮತ್ತು ಸ್ವಾತಂತ್ರ್ಯ ಒಂದನ್ನೊಂದು ಹಿಂಬಾಲಿಸುತ್ತವೆ
ಧನದ ನೆರಳು ಸ್ವಾತಂತ್ರ್ಯ
ತ್ರ್ಯದ ನೆರಳು ಬಂಧನ
ಸಲ್ಪಟ್ಟ ಕೋಳಿ ಭ್ರೂಣ
ಟ್ಟೆಯೊಡೆದು ಸ್ವತಂತ್ರವಾಗುತ್ತದೆ
ಒದೆತದ ಸಾವಿನದ ಭಯದಲ್ಲಿ ಬಂಧಿತವಾಗುತ್ತದೆ
ಧನಗಳನ್ನು ಹಡೆಯುತ್ತದೆ, ಸ್ವಾತಂತ್ರ್ಯವನ್ನು ಪಡೆಯುತ್ತದೆ
ತ್ರ್ಯವನ್ನು ಹಡೆಯುತ್ತದೆ, ಬಂಧನದೊಳಗೆ ಕಾಲಿಡುತ್ತದೆ.

ಧನ ಅತ್ಯಂತ ಕಠಿಣವೂ
ತ್ರ್ಯ ಅತ್ಯಂತ ಸಿಹಿಯೂ ಮಧುರವೂ
ದು ನಾನಂದುಕೊಂಡೆ
ದೂ
ಧನದ ಗರ್ಭದೊಳಗೆ ಸ್ವಾತಂತ್ರ್ಯದ ಭ್ರೂಣ
ತ್ರ್ಯದ ಗರ್ಭದೊಳಗೆ ಬಂಧನದ ಭ್ರೂಣ.

ಧನದಲ್ಲಿ ಬದುಕುವವರೆಲ್ಲ ನಿರಾಶರೂ
ತ್ರ್ಯದಲ್ಲಿ ಬದುಕುವವರೆಲ್ಲ ಗರ್ವಿತರೂ
ಕಾಗಬೇಕು?
ಧನದೊಳಗೆ ಗರ್ವದ ಬೀಜವೂ
ತ್ರ್ಯದೊಳಗೆ ನಿರಾಶೆಯ ಬೀಜವೂ
ಮಲಿರುವಾಗ
ಧನದಲ್ಲಿ ಬದುಕುವಾಗ ಭರವಸೆಯಿರಲಿ
ತ್ರ್ಯದಲ್ಲಿ ಬದುಕುವಾಗ ಎಚ್ಚರವಿರಲಿ

ದು
ರೆ
ಧನ ಮತ್ತು ಸ್ವಾತಂತ್ರ್ಯಗಳು
ಸವೇ ಗೊತ್ತಾಗದ



ಅಸಂಖ್ಯಾತ ಬಾಗಿಲುಗಳ ತೆರೆದು ಹೋಗಬೇಕಾದ
ಕ್ಷಿತಿಜ ದೂರದ ಗುಹೆಯಿದ್ದಂತೆ
ಯಾವುದು ಬಂಧನ?
ಯಾವುದು ಸ್ವಾತಂತ್ರ್ಯ?
ಯಾವುದು ಸ್ವಾತಂತ್ರ್ಯ?
ಯಾವುದು ಬಂಧನ?
ಬಂಧನದ ಗಡಿಯೆಲ್ಲಿ? ಸ್ವಾತಂತ್ರ್ಯದ ಆರಂಭವೆಲ್ಲಿ?
ಸ್ವಾತಂತ್ರ್ಯದ ಗಡಿಯೆಲ್ಲಿ? ಬಂಧನದ ಹೊಸ್ತಿಲೆಲ್ಲಿ?
ಅದೂ ಕೂಡ ಕಾಲ-ದೇಶ-ವ್ಯಕ್ತಿಗೆ ಬಂಧಿಸಲ್ಪಟ್ಟ ಬೆಳಕು

ಸಂಸಾರ ಬಂಧನವಾದಾಗ ಸನ್ಯಾಸ ಮುಕ್ತಿ
ಸನ್ಯಾಸವೇ ಬಂಧನವಾದಾಗ ಸಂಸಾರ ಮುಕ್ತಿ
ಜಾತಿ ಬಂಧನದಲ್ಲಿ ಪ್ರೀತಿ ಮುಕ್ತಿ
ಪ್ರೀತಿ ಬಂಧನದಲ್ಲಿ ಬಂಧನವೇ ಮುಕ್ತಿ.

ನಾವು ನಡೆಯುತ್ತಿರುವುದು
ಬಂಧನ ಮತ್ತು ಸ್ವಾತಂತ್ರ್ಯದ ಹಾದಿ
ನಾವು ಕಳೆಯುತ್ತಿರುವುದು
ಬಂಧನ ಮತ್ತು ಸ್ವಾತಂತ್ರ್ಯದ ಗಳಿಗೆಗಳು

ಅಸಂಖ್ಯಾತ ರೂಪದ ಬಂಧನಗಳು
ಅಸಂಖ್ಯಾತ ವಿಧದ ಸ್ವಾತಂತ್ರ್ಯಗಳು
ಆವರಿಸಿಕೊಳ್ಳುವ. ನಿವಾರಿಸಿಕೊಳ್ಳುವ
ಜೀವಿಗಳು ನಾವು.

ಬಂಧನಕ್ಕೆ ಭಯವನ್ನೂ
ಸ್ವಾತಂತ್ರ್ಯಕ್ಕೆ ನಿಟ್ಟುಸಿರನ್ನೂ
ಹೊದಿಸಿ ಕೂತು ಬಿಡುತ್ತೇವೆ.
ಬಂಧನಕ್ಕೆ ಚೆಲುವನ್ನೂ
ಸ್ವಾತಂತ್ರ್ಯಕ್ಕೆ ಒಲವನ್ನೂ ಮರೆತುಬಿಡುತ್ತೇವೆ.

ಸ್ವಾತಂತ್ರ್ಯ ಮತ್ತು ಬಂಧನ

ಬಂಧನದೊಳಗೆ ಬಂಧಿಯಾಗುವುದಷ್ಟೇ ಅಲ್ಲ
ನಾವು
ಸ್ವಾತಂತ್ರ್ಯದೊಳಗೂ ಬಂಧಿಯಾಗುತ್ತೇವೆ.
ಬಂಧನ ನಮ್ಮನ್ನಾವರಿಸಿಕೊಳ್ಳುವುದಲ್ಲ
ನಾವೂ ಬಂಧನವನ್ನಾವರಿಸಿಕೊಳ್ಳುತ್ತೇವೆ.
ಸ್ವಾತಂತ್ರ್ಯವನ್ನಷ್ಟೇ ನಾವು ಆಹ್ವಾನಿಸುವುದಲ್ಲ
ಬಂಧನವನ್ನೂ ಆಹ್ವಾನಿಸುತ್ತೇವೆ.

ಎಲ್ಲಾ ಬಣ್ಣಗಳೂ ಬಿಳಿಯಲ್ಲಿ ಬಂಧಿತವಾಗಿವೆ
ಎಲ್ಲಾ ಪ್ರಪಂಚಗಳೂ ಕಪ್ಪಲ್ಲಿ ಬಂಧಿತವಾಗುತ್ತವೆ
ಬೆರಳು ಬಿಗಿಯುತ್ತಿವೆ
ಹಸಿರು ನೀಲಿ ಕೆಂಪು
ಸರಳುಗಳು ಒಳಗೆ ಹೂತು ಬಣ್ಣಬಣ್ಣದ ಚಿತ್ತಾರ
ಮಾತು
ನಕ್ಷತ್ರದೊಳಗೆ ಹೂವು ನೆಡುವುದು ಯಾವಾಗ?
ಭೂಮಿಯೊಳಗೆ ಬೇರು ಬಿಡುವುದು ಯಾವಾಗ?

ಗಾಳಿಯ ಎಲ್ಲ ಮಾತುಗಳೂ
ಧೂಳಿನ ಎಲ್ಲ ನೋಟಗಳೂ
ಕತ್ತಲೆಯ ಕಳೆಯುವುದು ಯಾವಾಗ?
ನೈಜತೆ ಮತ್ತು ದೃಷ್ಟಿಯ ಅಂತರವ
ಮುಚ್ಚುವುದು ಯಾವಾಗ?
ಕನ್ನಡಕದ ಅಂಗಡಿಯವನೆ? ವೈದ್ಯನೆ?

ನಾನು ಹಾಡುಗಳಿಗೆ ತಿಣುಕಾಡುತ್ತೇನೆ
ಬಂಧನದೊಳಗೆ
ನೀನು ತಾಳಗಳ ಹಾಕುತ್ತೀ
ಅಟಿಕಡೆಯ ಸೆಲ್‌ನೊಳಗೆ
ಇನ್ನಾರೋ ತಂಬೂರಿಯ ನುಡಿಸುತ್ತಾರೆ
ಮಂಪರಿನೊಳಗೆ
ತೂಗಾಡುವ ವೇದಿಕೆಯೊಳಗೆ
ಯಾರ್ಯಾರೋ ಹೆಜ್ಜೆಗಳ ಹಾಕುತ್ತಾರೆ.
ಆಕಾಶ ನೋಡುತ್ತಾ ನೆಲದಲ್ಲಿ
ಅಲೆಗಳ ಮೀಟುತ್ತಾ ಸಮುದ್ರದಲ್ಲಿ
ಕೆಳಕೆಳಗೆ ಅಗೆಯುತ್ತಾ ಗಣಿಗಳಲ್ಲಿ
ಹೊರಬರಲಾಗದ ಬೇಲಿಗಳಲ್ಲಿ

ಚಿಕಿತ್ಸೆಯಲರಿಯದ ಸರಪಳಿಗಳಲ್ಲಿ
ಕೈಗೆ ಸಿಗದೆ ತೂಗುವ ಕತ್ತಿಯ ಕೆಳಗೆ
ಹಾಲುಕೊಡದೆ ತೂಗುವ ತೊಟ್ಟಿಲೊಳಗೆ
ತಲೆದೂಗುತ್ತಾರೆ.

ಕಣ್ಣುಗಳೊಳಗೆ ಬೆಳದಿಂಗಳ ತುಂಬಿಕೊಂಡು
ಉಸಿರು ಬಿಗಿಹಿಡಿದರೆ
ಸ್ವಾತಂತ್ರ್ಯದೊಳಗೆ ಬಂಧನ ಹರಿಯುತ್ತದೆ
ಬಂಧನದೊಳಗೆ ಸ್ವಾತಂತ್ರ್ಯ ಹರಿಯುತ್ತದೆ.

ಪ್ರವಾಸ ನಿರಂತರ
ತಡೆಯೆಂಬುದು ಮರಳು
ಆದರೆ ಎಚ್ಚರವಿರಬೇಕಾದ್ದು ಅಗತ್ಯ
ಗೋಡೆಗಳು ಬಲಿಗಳ ಕೇಳುತ್ತವೆ.
ವೈರಾಣುಗಳು ಉಸಿರನ್ನು ನಿಲ್ಲಿಸಿಬಿಡಬಹುದು
ನರಗಳೇ ದುರ್ಬಲವಾಗಿ ಬಿಟ್ಟರೆ
ರಕ್ತಪ್ರವಾಹವೇ ಬಂಧಿಸಲ್ಪಟ್ಟು
ನಡಿಗೆಯೇ ನಿಂತುಬಿಡುತ್ತದೆ

ತಡೆಗಳು ಮನಸ್ಸುಗಳ ಕೆಡವಬಹುದು
ಚಿಂತನೆಗಳು ಧೂಳಾಗುವುದು
ಮನಸ್ಸುಗಳೂ ಹೋಳಾಗುವುದು
ಹಿಡಿದ ಕೈಗಳು ಬೇರಾಗುವುದು
ನುಡಿದ ಮಾತುಗಳು ಛಿದ್ರವಾಗುವುದು
ನಕ್ಷತ್ರಗಳೆಲ್ಲ ಕಣ್ಣಾಪಾಪೆಯಿಂದೆದ್ದು ನಡೆದುಬಿಟ್ಟರೆ

ಬದುಕಿರುವುದು ಮಾತ್ರಾ ಚೇತನವಲ್ಲ
ನಡಿಗೆ ಮಾತ್ರಾ ಚಲನೆಯಲ್ಲ
ಭರವಸೆ ಮಾತ್ರಾ ಬೆಳಕಲ್ಲ
ಚಿಂತನೆ ಮಾತ್ರಾ ದಿಕ್ಕಲ್ಲ
ಮಾತುಗಳೇ ಸ್ವರ್ಗವಲ್ಲ
ಕೃತಿಗಳೇ ದೀಪವಲ್ಲ
ಆಕೃತಿಗಳೇ ಮಾದರಿಯಲ್ಲ


ಸಾಂಗತ್ಯ ಮತ್ತು ನೆನಪು
ನೆನಪಿನ ಸಾಂಗತ್ಯ
ಚರಿತ್ರೆಯ ಸಾಂಗತ್ಯ
ಭೂಮಿಯಾಳದಿಂದ ಆಕಾಶ ಚುಕ್ಕಿಯೆಡೆಗೆ
ಚಿಮ್ಮಿಸಬಹುದು ಬಂಧಿಸಲ್ಪಡುವ ಚೇತನವನ್ನು

ಬೆಳಕಿನಿಂದ ಕತ್ತಲೆಯ ಬೇಟೆಯಾಡುವುದು
ಕತ್ತಲೆಯಿಂದ ಬೆಳಕ ಸೆರೆಹಿಡಿಯುವುದು
ಮಕ್ಕಳಾಟವಲ್ಲ

ತಡೆಗಳು ಕುಸಿದು ಬೀಳುತ್ತಿವೆ


■ ಬಿ.ಜಿ.ಕೆ., ಪಶ್ಚಿಮಘಟ್ಟ

...ತಂತ್ರ ಚಿಂತನೆ



...ವತ್ತಿಗೂ ಭಾರತೀಯ ಮನಸ್ಸು ಸ್ವತಂತ್ರವಾಗಿಲ್ಲ, ನನ್ನ ...ದಲ್ಲಿ ಸ್ವತಂತ್ರವಾದ ಮನಸ್ಸು ಅಂದರೆ, ನಾವು ...ಗಳಿಂದ ಕಲಿತದ್ದು, ಜನರನ್ನು ನೋಡಿ ತೀರ್ಮಾನಿಸಿದ್ದು, ...ಯುವರ ಅಭಿಪ್ರಾಯ ಕೇಳಿ ತಲೆದೂಗಿದ್ದು ಇವೆಲ್ಲವನ್ನು ... ವಿಚಾರಿಸುವ ಶಕ್ತಿ ಇಷ್ಟೇ ಆದರೆ ಸಾಕಾಗುವುದಿಲ್ಲ. ...ನ್ನೆ ನಾನು ಒಂದು ಪುಸ್ತಕ ಓದಿದೆ. ಅದು ತರುಣ ... ಜೀವಿಯೊಬ್ಬ ಸಂಗ್ರಹಿಸಿದ ವಿವಿಧ ಲೇಖಕರ ...ಯಗಳ ಪುಸ್ತಕ. 'ಮುಗಿಯುತ್ತಿರುವ ಶತಮಾನದಲ್ಲಿ ... ಯಾವುದು ಅತ್ಯಂತ ಪ್ರಭಾವಶಾಲಿ ಅಂಶವಾಗಿ ಕಂಡಿತು?' ಎಂಬ ... ಅನೇಕರು ನಿಯತಕಾಲಿಕಗಳ ಮಟ್ಟದ ಉತ್ತರ ಹೇಳುತ್ತಾರೆ. ವಿದೇಶಿ ...ಷೆ ಸಂಪರ್ಕದಿಂದ ನಮ್ಮ ಸಾಹಿತ್ಯ ಲಾಭ ಪಡೆಯಿತು ಎನ್ನುವುದರಿಂದ ... ವಿದೇಶಿ ಭಾಷೆ ನಮ್ಮ ಭಾಷೆಯನ್ನು ಕೊಂದಿತು ಎಂದು ಕೆಲವರು ...ತ್ತಾರೆ. ಇವರೆಲ್ಲರ ಅಭಿಪ್ರಾಯದಲ್ಲಿ ಸತ್ಯಾಂಶವಿದೆ. ಆದರೆ ವಿದೇಶಿ ...ದಿಂದಾಗಿ ನಮ್ಮ ಸಂಸ್ಕೃತಿ ತನ್ನ ಸಂಪತ್ತನ್ನು ವೃದ್ಧಿಪಡಿಸಿಕೊಳ್ಳುವುದು ...ತ್ತೆ ಎನ್ನುವುದಕ್ಕೆ ಇವರಲ್ಲಿ ಉತ್ತರವಿಲ್ಲ.

...ಯ ದೇಶಗಳ ನಡುವಿನ ... ವಿಚಿತ್ರ ಘರ್ಷಣೆ, ಪ್ರೀತಿ ... ವಿಕಾಶದಲ್ಲಿ ...ವಿಕಾಸಗೊಳ್ಳಬಹುದು. ...ಒಂದು ಭಾಷೆ' ಇದೆ ...ದು ಗೊತ್ತಾಗುವುದು ನಮ್ಮ ...ಿಂದ ಭಿನ್ನವಾದದ್ದು ... ನಮ್ಮ ಭಾಷೆ ಕೂಡ ... ನುಡಿಕಟ್ಟುಗಳನ್ನು ...ಳ್ಳುತ್ತದೆ. ಹಾಗೆಯೇ ... ವಿಜ್ಞಾನ, ತತ್ವ



ಸಮಾಜಶಾಸ್ತ್ರ ಕಂಡೊಡನೆ ಅವನ್ನು ಭಾಷೆಯ ಮೂಲಕ ಕೂಡ ತನ್ನದಾಗಿ ಮಾಡಿಕೊಳ್ಳಲು ಪ್ರಯತ್ನಿಸುತ್ತದೆ. ಹಾಗೆಯೇ ವಿನಾಶ ಕೂಡಾ ಸಾಧ್ಯ. ಕಾನೂನುಕಟ್ಟಳೆಗಳ ಪರಿಚಯವೇ ಇಲ್ಲದ ಜನ ಇದ್ದಕ್ಕಿದ್ದಂತೆ ಅರ್ಥವೇ ಇಲ್ಲದೆ ಕೋರ್ಟಿಗೆ ಅಲೆಯುವುದನ್ನು ಒಂದು ಉದಾಹರಣೆಯಾಗಿ ತೆಗೆದುಕೊಳ್ಳಬಹುದು.

ಚಿಂತನೆ ಪಾಂಡಿತ್ಯ ಮತ್ತು ಅತ್ಯಂತ ಸರಳ ಪಕ್ಷಿಗಳಿಂದ ಬರಬಹುದು; ವಿಚಾರವಂತ ಗೊಡ್ಡಾದಂತೆ ಮಣ್ಣು ತನ್ನ ನಿರಂತರ ಸಸ್ಯ ಪ್ರೇಮ, ಜೀವಪ್ರೇಮದಿಂದ ಹೊಸ ಜೀವ ಕೊಡಬಹುದು. ಅಮೆರಿಕದ ತೆರಿಗೆಪದ್ಧತಿ ಥೋರೋನನ್ನು ವಾಲ್ಡನ್ ಸರೋವರಕ್ಕೆ ಕಳಿಸಿತು; ಲಂಡನ್‌ನ ಸಂಕೀರ್ಣ ನಿರ್ಜೀವತೆ ವರ್ಡ್ಸ್‌ವರ್ತ್‌ನನ್ನು ಪ್ರಕೃತಿಯ ಮಡಿಲಿಗೆ ಕಳಿಸಿತು. ಜೀವವನ್ನು ಪೊರೆಯುವ ಶಕ್ತಿ ಒಂದು ನದಿಗೆ ಇರುತ್ತದೆ. ಇವೆಲ್ಲ ಗೊಂದಲವನ್ನು ಧ್ಯಾನಿಸುವವನು ತನಗೇನಾಗುತ್ತಿದೆ ಎನ್ನುವುದನ್ನು ತಿಳಿಯಲು ಯತ್ನಿಸುತ್ತಾನೆ. ಅದೇ ನಿಜವಾದ ವಿಚಾರ, ಯೋಚನೆ.

ಕ್ರಾಂತಿಕಾರಿ ಮತ್ತು ಸಹಜ ಮಾನವ

ಯಾವುದು ಸಾಧ್ಯ ಮತ್ತು ಯಾವುದು ಕೇವಲ ಕ್ರಾಂತಿಯ ಬೊಬ್ಬೆ ಎಂದು ತಿಳಿದಿದ್ದರೆ ಮಾತ್ರ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವುದಕ್ಕೆ ಆಗುತ್ತದೆ. ನಾವು ಪತ್ರಿಕೆಯ ಮೂಲಕ ನಮ್ಮ ಅಭಿಪ್ರಾಯಗಳ ಬಗ್ಗೆ ಜನರ ಮನವೊಲಿಸಲು ಪ್ರಯತ್ನಿಸುವುದನ್ನು ನೀವು ಗಮನಿಸಿರಬಹುದು. ಅನೇಕ ಜಗದ್ಗುರುಗಳು ನಿಜವಾದ ಜಗದ್ಗುರುಗಳಾಗಿದ್ದಾಗಲೇ ತಮ್ಮ ನೋವನ್ನು ಹೇಳಿಕೊಂಡರೆ ಅವರ ಮಾತಿಗೆ ಬೆಲೆ ಇರುತ್ತದೆ; ಜಗದ್ಗುರುವೊಬ್ಬ ಎಲ್ಲವನ್ನೂ ಬಿಟ್ಟವನಂತೆ ದರ್ಶಿಸಿದರೆ ಅವನ ಬಗ್ಗೆ ಜನಕ್ಕೆ ಅನುಮಾನ ಶುರುವಾಗುತ್ತದೆ. ಇದು ಒಂದು ವ್ಯವಸ್ಥೆಯ ಪ್ರಶ್ನೆ. ನೀವು ವ್ಯವಸ್ಥೆಯನ್ನು ಹಠಾತ್ತನೆ ಬದಲಾಯಿಸುವುದಕ್ಕೆ ಲೆನಿನ್, ಸ್ಟಾಲಿನ್ ರೀತಿಯಲ್ಲಿ ಜನರನ್ನು ಕೊಂದುಹಾಕಬೇಕಾಗುತ್ತದೆ. ಕೊಲ್ಲುವವ ಮಾನುಷಿಕನಾಗಿ ಸೃಷ್ಟಿಸುವವನ ಕೆಲಸವನ್ನು ಬಿಡಬೇಕಾಗುತ್ತದೆ. ನಮ್ಮ ನಕ್ಸಲೈಟ್‌ಗಳನ್ನೇ ತೆಗೆದುಕೊಳ್ಳಿ, ಅವರು ಕೊಲ್ಲುತ್ತ ಹೋದರೆ ಅವಿತುಕೊಳ್ಳುತ್ತಾ ಹೋಗಬೇಕಾಗುತ್ತದೆ.

ಪೊಲೀಸರಿಗೆ ಸಿಕ್ಕೊಡನೆ ಜೈಲು ಅವರಿಗಾಗಿ ಕಾಯುತ್ತಿರುತ್ತದೆ. ಹೀಗಾಗಿ ನಕ್ಸಲೈಟರು, ಉಗ್ರ ಕಮ್ಯುನಿಸ್ಟ್ ಸಿದ್ಧಾಂತಿಗಳು ಯಥಾಸ್ಥಿತಿವಾದಿಗಳಾಗಿ ಬದುಕಬೇಕಾಗುತ್ತದೆ. ಆಕಾಶ ಮುಟ್ಟಲು ಹಾರಿದವನ ಕಾಲು ಮುರಿದುಕೊಳ್ಳಬೇಕಾಗುತ್ತದೆ. ಇದು ಮನುಷ್ಯನ ಸಮಸ್ಯೆ. ಎಲ್ಲ ಮಾನವರೂ ಇದನ್ನು ಒಂದಲ್ಲ ಒಂದು ಸಲ ಎದುರಿಸಿರುತ್ತಾರೆ. ಆದ್ದರಿಂದ ಅನೇಕ ಮಿದುಳುಜೀವಿಗಳು ಚಿಂತಿಸುವ ಹಂತದಲ್ಲೇ ಇದ್ದು ಬಿಡುತ್ತಾರೆ. ಚಿಂತೆ ಅನುಷ್ಠಾನಕ್ಕೆ ಇಳಿಯುವಾಗ ಎಲ್ಲರೂ ಎಚ್ಚರ ವಹಿಸಬೇಕಾಗುತ್ತದೆ. ನೀಟ್ಷೆ ತರಹದವರು ಬುದ್ಧಿಜೀವಿಗಳು; ಅವರಿಗೆ ಕಾಣಿಸಿದ್ದು ವಿಶೇಷ ಅರ್ಥಗಳಿಂದ ಕೂಡಿರುತ್ತದೆ. ಆದರೂ ಈ ನೀಟ್ಷೆ ವಿಚಿತ್ರ ರೀತಿಯಲ್ಲಿ ಹಿಟ್ಲರನ ಹುಟ್ಟಿಗೆ ಕಾರಣನಾದ. ಈತನ ಆಳದ ಕಪ್ಪು ಖಂಡ **He-man** ನನ್ನು ಸೃಷ್ಟಿಸಲು ಪ್ರೇರೇಪಿಸಿತು. **He-man** ಎಲ್ಲ ಧರ್ಮವನ್ನು, ದೇವರನ್ನು ಪ್ರಶ್ನಿಸುವ ಭಯಂಕರ ಪುರುಷ. ಈತನ ಪೂರ್ವಗ್ರಹವೇ ಈತನ ಸಿದ್ಧಾಂತ.

ಕಾರ್ಲ್‌ಮಾರ್ಕ್ಸ್ ಈ ದೃಷ್ಟಿಯಲ್ಲಿ ವಿಚಿತ್ರ ಮನುಷ್ಯ. ಈತನ ತತ್ವ ನಿಜಜೀವನಕ್ಕೆ ಅನ್ವಯಿಸುವಂತೆ ಇರುತ್ತದೆ; ಇದನ್ನು ಅನುಷ್ಠಾನಕ್ಕೆ ತರಬೇಕೋ ಬೇಡವೋ ಎಂಬ ಪ್ರಶ್ನೆ ಮನುಷ್ಯರನ್ನು ಕಾಡುತ್ತದೆ. ಹೀಗೆ ದ್ವಂದ್ವದ ಸ್ಥಿತಿಯಲ್ಲಿರುವ ಮನುಷ್ಯನಿಗಾಗಿ ಈ ಮಾರ್ಕ್ಸ್ 'ಕಮ್ಯುನಿಸ್ಟ್ ಮ್ಯಾನಿಫೆಸ್ಟೋ' ಬರೆದ. ಈ ಚಿಂತನಕಾರ ತನ್ನ ತತ್ವದ ಅಂದರ್-ಬಾಹರ್‌ಗಳ ಬಗ್ಗೆ ಯೋಚಿಸಿರಲಿಲ್ಲ. ಆದ್ದರಿಂದ ಮಾರ್ಕ್ಸ್ ಲಕ್ಷಾಂತರ ಜನರ ಸಾವಿಗೆ ಕಾರಣನಾದ; ಕೊನೆಗೂ ವಿಫಲನಾದ. ಈತ ಬರೆದಾಗ ಒಂದು ಪುಸ್ತಕ ಬದ್ಧ ರೀತಿ ಇರಲಿಲ್ಲ, ಒಂದು ವ್ಯವಸ್ಥೆ ಬಿದ್ದು ಎಲ್ಲರನ್ನೂ ನಡುಗಿಸಿತು.

'ಯುಟೋಪಿಯಾ' ಬರೆದ ಮೋರ್ ಈ ರೀತಿಯ ಅಪಾಯಕಾರಿ ವ್ಯಕ್ತಿಯಾಗಿರಲಿಲ್ಲ, ಆತನ ಶೈಲಿಯೇ ಸಹನೆಯದು; ಪ್ರೀತಿಯದು. ಆತ ಎಂದೂ 'ಯುಟೋಪಿಯಾ' ಬರಬೇಕು ಎಂದು ಹೇಳಿಕೊಳ್ಳಲಿಲ್ಲ. ಇವೆಲ್ಲ ದೊಡ್ಡ ಮಾತಾಯಿತು. ಮನುಷ್ಯರು ಸಣ್ಣ ತೆವಲು, ಸಣ್ಣ ಮಾತಿನಲ್ಲೇ ನೆಮ್ಮದಿಯಾಗಿ ಬದುಕಿ ಹೊರಟುಹೋಗುತ್ತಾರೆ ಎನ್ನುವುದು ನಮಗೆಲ್ಲ ಗೊತ್ತಿದ್ದರೆ ಒಳ್ಳೆಯದು. ಜನಸಾಮಾನ್ಯರನ್ನು ಭೀಕರ ಲೋಕಕ್ಕೆ ಕರೆದೊಯ್ಯುವುದು ಕಷ್ಟ. ಆದ್ದರಿಂದ ಅವರ ಮನವೊಲಿಸುವ ಎಲ್ಲರೂ ನಿಜಕ್ಕೂ ಸಾಧ್ಯವಾಗುವ, ಅವರು ಮಾಡಬಹುದಾದ ಕೆಲಸಗಳಿಂದಲೇ ಆರಂಭಿಸಿ ಅವರನ್ನು ಒಪ್ಪಿಸುವುದು ಒಳ್ಳೆಯದು.


ಜೂನ್ 30, 1999

ರಂಗ-ಅಂತರಂಗ

ರಂಗ ಚಳವಳಿ ಮೂಲಕ ಅಸ್ಮಿತೆ ಕಟ್ಟಿಕೊಟ್ಟ 'ರಂಗಸಂಪದ

ಆಧುನಿಕ ಮರಾಠಿ ಸಂಗೀತ ನಾಟಕಗಳ ಜನಕ ಅಣ್ಣಾ ಸಾಹೇಬ ಕಿರ್ಲೋಸ್ಕರ್ ಬೆಳಗಾವಿ ಜಿಲ್ಲೆ ಗುರ್ಲ ಹೊಸೂರಿನವರು. ಬೆಳಗಾವಿಯ ಸರದಾರ ಹೈಸ್ಕೂಲಿನಲ್ಲಿ ಅವರು ಮತ್ತು ಅವರ ಶಿಷ್ಯ, ನಾಟ್ಯಕಾರ ಗೋವಿಂದ ಬಲ್ಲಾಳ ದೇವಲ ಶಿಕ್ಷಕರಾಗಿದ್ದರು. ಅಣ್ಣಾ ಸಾಹೇಬರ ಮೇಲೆ ಕನ್ನಡದ ಸಣ್ಣಾಟ ಶ್ರೀಕೃಷ್ಣ ಪಾರಿಜಾತದ ದಟ್ಟ ಪ್ರಭಾವವಿದೆ. ಪಾರಿಜಾತದ ಹಾಡು-ಕರ್ನಾಟಕ ಶೈಲಿ ಸಂಗೀತವನ್ನು ತಮ್ಮ 'ಸಂಗೀತ ಸೌಭದ್ರ', 'ಸಂಗೀತ ಶಾಕುಂತಲ' ರಂಗ ಪ್ರಯೋಗಗಳಿಗೆ ಯಶಸ್ವಿಯಾಗಿ ಕಸಿಗೈದು ಬಳಸಿದ್ದಾರೆ. ನಂತರ ಬೆಳೆದುಬಂದ ಬಾಲಗಂಧರ್ವರ ಮರಾಠಿ ರಂಗ ಪ್ರಯೋಗಗಳು ಬೆಳಗಾವಿ, ಕಾರವಾರ ಹಾಗೂ ಉತ್ತರ ಕರ್ನಾಟಕದ ಮೇಲೆ ಗಾಢ ಪರಿಣಾಮ ತಂದವು. ನಿಧಾನಕ್ಕೆ ಕನ್ನಡ ವೃತ್ತಿರಂಗಭೂಮಿಯ ಹಲವಾರು ಕಂಪನಿಗಳು ನಾಟಕ ಪ್ರಯೋಗಗಳನ್ನು ಬೆಳಗಾವಿ ಪರಿಸರದಲ್ಲಿ ನಡೆಸುತ್ತ ಬಂದವು. ಸ್ವಾತಂತ್ರ್ಯ ಪೂರ್ವ ಮತ್ತು ಉತ್ತರಾರ್ಧದಲ್ಲಿ ಕನ್ನಡ ಕಂಪನಿ ನಾಟಕ, ಸಣ್ಣಾಟಗಳು ಬೆಳಗಾವಿ ಪರಿಸರದಲ್ಲಿ ಸಕ್ರಿಯಗೊಂಡಿದ್ದರೆ ಮರಾಠಿಯ ತಮಾಷಾ ಎಂಬ ಜನಪದ ಆಟ ಮತ್ತು ಆಧುನಿಕ ಮರಾಠಿ ನಾಟಕಗಳ ಪ್ರಭಾವೀ ವೈವಿಧ್ಯಮಯ ಪ್ರಯೋಗಗಳೂ ನಡೆಯುತ್ತಿದ್ದವು. ಮರಾಠಿಯ ವ್ಯಾವಸಾಯಿಕ ಮತ್ತು ಪ್ರಾಯೋಗಿಕ ನಾಟಕಗಳು ತನ್ನ ಆಶಯ, ತಂತ್ರ, ಶೈಲಿ ಅಭಿವ್ಯಕ್ತಿಗಳಿಂದ ಪ್ರೇಕ್ಷಕರಿಗೆ ವೈವಿಧ್ಯಮಯ ರಸಾನುಭವ ನೀಡುತ್ತಿದ್ದವು. ನಮ್ಮ ಕಂಪನಿ ನಾಟಕಗಳಲ್ಲಿ ದೊರೆಯದ ಒಂದಕ್ಕಿಂತ ಹೆಚ್ಚಿನ ಬಗೆಯ ವಿಶಿಷ್ಟತೆಗಳು ಅಲ್ಲಿ ಆಕರ್ಷಣೀಯವಾಗಿರುತ್ತಿದ್ದವು. ಸಮಕಾಲೀನ ಜ್ವಲಂತ ಸಮಸ್ಯೆಗಳನ್ನು, ಘಟನೆಗಳನ್ನು; ರಾಜಕೀಯ-ಸಾಮಾಜಿಕ ವ್ಯಂಗ್ಯವನ್ನು ನಾಟಕಕ್ಕೆ ಅಳವಡಿಸುತ್ತ ಒಂದು 'ಜಾಗರ'ವನ್ನು ಮಾಡುವ ಮರಾಠಿ ನಾಟಕಗಳಿಗೆ ಕನ್ನಡ, ಮರಾಠಿ ಪ್ರೇಕ್ಷಕ ಭಾಷಾಭೇದವಿಲ್ಲದೆ ಮುಗಿಬೀಳುತ್ತಿದ್ದ, ಆದರೆ ಕನ್ನಡದ ಸಾಹಿತ್ಯಿಕ, ಸಾಂಸ್ಕೃತಿಕ ಮತ್ತು ರಂಗಭೂಮಿ ವಾತಾವರಣ ಹೇಳಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ, ಕೆಎಲ್ಇ ಶಿಕ್ಷಣ ಸಂಸ್ಥೆ ಮತ್ತು ನಾಗನೂರ ಮಠದ ಕನ್ನಡ ಸೇವೆ ಬಿಟ್ಟರೆ ಒಂದು ಮೃತ ಸಂಸ್ಕೃತಿಯೇ ರಾರಾಜಿಸುತ್ತಿತ್ತು, ಇವತ್ತಿಗೂ ಮರಾಠಿಗರು ಮೂರು ರಂಗಮಂದಿರಗಳನ್ನು ಇಟ್ಟುಕೊಂಡಿದ್ದಾರೆ. ಕನ್ನಡಿಗರ ಚಿಂದೋಡಿ ಲೀಲಾ ರಂಗಮಂದಿರವನ್ನು ದೂರದ ಚಿಂದೋಡಿ ಲೀಲಾ ಅವರು ಇಲ್ಲಿಗೆ ಬಂದು ಕಟ್ಟಿಸಿಕೊಟ್ಟರು. ಸರ್ಕಾರದ ಕುಮಾರ ಗಂಧರ್ವ ರಂಗಮಂದಿರವು ಅದರದ್ದೇ ಆದ ಅನೇಕ ನ್ಯೂನತೆಗಳಿಂದ ನರಳುತ್ತಿದೆ.






ಎಪ್ಪತ್ತರ ದಶಕದಲ್ಲಿ ಇಂಥ ಪ್ರತಿಕೂಲ ಸನ್ನಿವೇಶದಲ್ಲಿ ಆಧುನಿಕ ಹೊಸ ಅಲೆ ಕನ್ನಡ ನಾಟಕ ಕಟ್ಟಿಕೊಡುವ ಧೈರ್ಯ ಮಾಡಿದವರು ಶ್ರೀಪತಿ ಮಂಜನಬೈಲು ಅವರು. ಅದು ಆದದ್ದು ಹೀಗೆ. 1965 ರಲ್ಲಿ ಆದಾಯ ತೆರಿಗೆ ಕಚೇರಿಗೆ ಡಿ.ಟಿ. ಚೆನ್ನಕೇಶವಮೂರ್ತಿ ಬಂದರು. ಇಲ್ಲಿನ ಹವ್ಯಾಸಿ ಕಲಾವಿದರನ್ನು ಕಷ್ಟಪಟ್ಟು ಸೇರಿಸಿ 'ನಟಸಂಪದ' ಎಂಬ ಹವ್ಯಾಸಿ ತಂಡ ಕಟ್ಟಿದರು. ಅವರ ಮೊದಲ ನಾಟಕ 'ಪ್ರಪಂಚ ಪಾಣಿಪತ್ತು' ಪ್ರಯೋಗ ಕಂಡಿತು. 'ಜೈಸಿದ ನಾಯ್ಕ' ಮತ್ತೊಂದು. ಇದಲ್ಲದೇ ಬೆಂಗಳೂರು, ಮೈಸೂರು ತಂಡಗಳ ನಾಟಕಗಳನ್ನು ಪ್ರಯೋಗಿಸಿ ಬೆಳಗಾವಿ ಪ್ರೇಕ್ಷಕರಿಗೆ ಆಧುನಿಕ ನಾಟಕ ಪ್ರಯೋಗಗಳ ಹೊಸ ಅನುಭವ ದೊರಕುವಂತೆ ಮಾಡಿದರು. ಬೆಳಗಾವಿ ರಂಗ ಚಳವಳಿಗೆ 'ಜೈಸಿದ ನಾಯ್ಕ' ಹೊಸ ತಿರುವು ನೀಡಿತು. ಈ ನಾಟಕದಿಂದ ಶ್ರೀಪತಿ ಮಂಜನಬೈಲು ಅವರ ಪ್ರವೇಶವಾಯಿತು. ಡಿಸೆಂಬರ್, 1960 ರಲ್ಲಿ ಎಂ.ಕೆ. ದೇಶಪಾಂಡೆ ಅವರ ಅಧ್ಯಕ್ಷತೆಯಲ್ಲಿ ಶ್ರೀಪತಿ ಕಾರ್ಯದರ್ಶಿಯಾಗಿ 'ರಂಗ ಸಂಪದ' ತಂಡವು ಉದಯಕ್ಕೆ ಬಂತು. ಅದು ತನ್ನ ಉದಯ ಸಂಭ್ರಮದಲ್ಲಿಯೇ 'ಆಸ್ಫೋಟ', 'ಹ್ಯಾಮ್ಲೆಟ್', 'ಉದ್ಭವ', 'ಕರುಮಾಯಿ' ನಾಟಕಗಳ ರಂಗೋತ್ಸವ ಜರುಗಿಸಿತು. ಇವು ಹೊರಗಿನ ತಂಡಗಳ ಪ್ರಯೋಗಗಳು. ರಂಗ ಸಂಪದವು 'ಉತ್ತಮ ಪ್ರಭುತ್ವ ಲೊಳಲೊಟ್ಟೆ' ಎಂಬ ನಾಟಕವನ್ನು ಆಡಿತು.

ಶ್ರೀಪತಿ ಮಂಜನಬೈಲು, ಗುರುನಾಥ ಕುಲಕರ್ಣಿ ಮತ್ತು ಆರ್.ಬಿ. ಕಟ್ಟಿಯವರ ಜತೆಗೂಡಿ ಹಲವಾರು ಯೋಜನೆ ಸಿದ್ಧಪಡಿಸಿದರು. ಸ್ಥಳೀಯ ಕಲಾವಿದರಿಗೆ ರಂಗ ತರಬೇತು ನೀಡುವುದು ಅದರಲ್ಲೊಂದು. 1982 ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಸಹಯೋಗದೊಂದಿಗೆ ... ಏರ್ಪಡಿಸಿದರು. ಇದರ ಫಲಶ್ರುತಿ ಆಗಿ 'ಗರ್ಭಗು... 'ಕದಡಿದ ನೀರು' ಮತ್ತು 'ಏವಂ ಇಂದ್ರಜಿತ' ನಾಟಕ... ಯಶಸ್ವಿ ಪ್ರಯೋಗ ನಡೆಸಿದವು. ಆರಂಭದಲ್ಲಿ ಬೆರಳೆಣಿ... ಪ್ರೇಕ್ಷಕರೆದುರು ನಾಟಕಗಳನ್ನು ಕಟ್ಟಿಕೊಟ್ಟ ರಂಗ ಸಂಪ... ನಿಧಾನವಾಗಿ ಪ್ರೇಕ್ಷಕ ಸಮುದಾಯ ಅಧಿಕವಾಗತೊಡ... ಯಾವ ಮರಾಠಿ ನಾಟಕಗಳಿಗೆ ಕನ್ನಡ ಪ್ರೇ... ಹೋಗುತ್ತಿದ್ದನೋ ಅದೇ ಕನ್ನಡ ರಂಗಪ್ರಯೋಗ... ಪ್ರಯೋಗಶೀಲ ಗುಣಕ್ಕೆ ಮರಾಠಿ ಮನಸ್ಸುಗಳು ಸ್ಪಂದಿಸಿ...

ಶ್ರೀಪತಿ ಮಂಜನಬೈಲುರವರು ನಾಟಕದ ... ಎಂಥದ್ದಿರಬೇಕು? ಅದು ಇಲ್ಲಿಯ ಪ್ರೇಕ್ಷಕ... ರುಚಿಸಬಲ್ಲುದೆ? ಎಂದೆಲ್ಲ ತಲೆಕೆಡಿಸಿಕೊಳ್ಳದೆ ತು... ಸಂಕೀರ್ಣವಾದ ನಾಟಕಗಳನ್ನು ನಿರ್ದೇಶಿಸಿಕೊಟ್ಟದ್ದಿದೆ. ಬಂತೊಂದಾನಿ', 'ಮೃಗಜಲ', 'ಎಸ್. ಮಿಸ್ಟರ್ ಪಂಡಿತ... 'ರಿಹರ್ಸಲ್', 'ದಿಂಡಿ'ಗಳು ಅವರ ಅತ್ಯಂತ ಯ... ನಾಟಕಗಳು. ಕಂತಿನ ಮೇಲೆ 50 ರೂ.ಗೆ ಸೈಕಲ್ ಬ... ಪಡೆದು ಎಲ್ಐಸಿ, ಪಿಡಬ್ಲ್ಯೂಡಿ ಕಾಲೇಜುಗಳಿಗೆ ಅ... ಕಲಾವಿದರನ್ನು ಶೋಧಿಸಿ, ಪ್ರೇಕ್ಷಕರನ್ನು ಹುರಿದು...

ದಾಬೋಲ್ಕರ್ ಹತ್ಯೆಯಲ್ಲಿ ಅಚ್ಚರಿಯೇನಿದೆ?



ಮಹಾರಾಷ್ಟ್ರದ ಖ್ಯಾತ ವಿಚಾರವಾದಿ, ಮೂಢನಂಬಿಕೆ ವಿರೋಧಿ ಹೋರಾಟಗಾರ ನರೇಂದ್ರ ದಾಬೋಲ್ಕರ್‌ರನ್ನು ದುಷ್ಕರ್ಮಿಗಳು ಹತ್ಯೆಗೈದದ್ದು ನಿಜಕ್ಕೂ ಖಂಡನಾರ್ಹ ವಿಚಾರ. ಅವರು ಹಿಡಿದಿರುವಂತಾದ್ದೇ ಅಪಾಯಕಾರಿ ಹಾದಿ. ತನಗೆ ಜೀವ ಬೆದರಿಕೆ ಇದ್ದಿರುವುದರ ಸ್ಪಷ್ಟ ಅರಿವು ಅವರಿಗೂ ಇತ್ತು, ದಾಬೋಲ್ಕರರ ಹತ್ಯೆಗೆ ಸಂಬಂಧಿಸಿ ನಾಡಿನ ಹಿರಿಯ ವಿಚಾರವಾದಿ ನರೇಂದ್ರ ನಾಯಕ್ ಅವರು ಮಾತಾಡುತ್ತಾ ತಾನೂ ದುರುಳರಿಂದ ಇಂತಹ ಪ್ರಾಣಾಪಾಯವನ್ನು ಎದುರಿಸಿದ್ದೆ ಎಂದಿದ್ದರು. ಒಂದು ರೀತಿಯಲ್ಲಿ ಇವೆಲ್ಲ ನಿರೀಕ್ಷಿತವೇ ಆಗಿತ್ತು. ಯಾಕೆಂದರೆ, ಒಕ್ಕಣ್ಣರ ರಾಜ್ಯದಲ್ಲಿ ಎರಡು ಕಣ್ಣನ್ನು ಹೊಂದಿರುವುದೇ ಅಪರಾಧ ತಾನೆ?


ತಮಾಷೆಯೆಂದರೆ, ಆವತ್ತು ಬೆನ್ನೆಹಿಂದೆ ನಿಲ್ಲದೇ ದೂರೀಕರಿಸಿದ ಸನಾತನವಾದಿಗಳು ಇವತ್ತು ವಿಶ್ವವಿಖ್ಯಾತಿ ಪಡೆದವರೆಂಬ ಕಾರಣಕ್ಕೆ ಹೈಜಾಕ್ ಮಾಡಲ್ಪಟ್ಟಿರುವ ಸ್ವಾಮಿ ವಿವೇಕಾನಂದರೂ ಕೂಡ ಆ ಕಾಲದಲ್ಲಿ ಇಂತಹ ಮೌಢ್ಯಗಳ ವಿರುದ್ಧ ಧ್ವನಿ ಎತ್ತಿದವರೇ ಆಗಿದ್ದರು. ಕೇರಳದಲ್ಲಿನ ಜಾತೀಯತೆ ಕಂಡು ಇದೊಂದು "ಹುಚ್ಚರ ಸಂತೆ" ಎಂದು ಖಾವಿಧಾರಿಯಾಗಿದ್ದುಕೊಂಡೇ ಹಿಂದೂ ಧರ್ಮದ ಈ ಕಂದಾಚರಣೆಯ ವಿರುದ್ಧ ಉಗಿದು ಬಂದಿದ್ದರು.

ಶತಾಯುಷಿಯಾಗಿ ತುಂಬುಜೀವನ ನಡೆಸಿದ್ದ ಎ.ಎನ್. ಮೂರ್ತಿರಾಯರ 'ದೇವರು' ಕೃತಿ ತುಂಬಾ ಪ್ರಸಿದ್ಧವಾದುದು. ಸಾಂಪ್ರದಾಯಿಕ ಕುಟುಂಬದ ಹಿನ್ನೆಲೆಯಿಂದ ಬಂದ ಅವರನ್ನು ಕೆಲವರು "ಈ ನಿನ್ನ ಅಪನಂಬಿಕೆಯನ್ನು ಇತರರಿಗೆ ಯಾಕೆ ಹರಡುತ್ತಿದ್ದೀ?" ಎಂದು ಪ್ರಶ್ನಿಸುತ್ತಿದ್ದರಂತೆ. ಅವರೇ ಆ ಕೃತಿಯಲ್ಲಿ ಹೇಳಿರುವಂತೆ "ದೇವರ ಕುರಿತು ನನಗೇನೂ ದ್ವೇಷವಿಲ್ಲ. ಎಲ್ಲರಿಗೂ ಒಳಿತನ್ನುಂಟುಮಾಡುವನೆಂಬ ಆ ದೇವರು ನಿಜಕ್ಕೂ ಇದ್ದಿದ್ದರೆ ಎಷ್ಟು ಚೆನ್ನಾಗಿತ್ತು? ಆದರೆ ಹಾಗಿಲ್ಲವಲ್ಲ ಎಂಬ ವಿಷಾದ ನನ್ನಲ್ಲಿದೆ" ಎಂದಿದ್ದರು. ಎಚ್.ಎನ್. ಆಗಲಿ, ಮೂರ್ತಿರಾಯರಾಗಲಿ, ಸಾಯಿಬಾಬಾನ ಪವಾಡ ಬಯಲು ಮಾಡಲು ಹೊರಟ ಪಿಸಿ ಸರ್ಕಾರ್ ಆಗಲಿ, ದಾಬೋಲ್ಕರ್ ಆಗಲಿ, ನರೇಂದ್ರ ನಾಯಕ್‌ರೇ ಆಗಲೀ ಇವರಿಗೆಲ್ಲ ದೇವರ ವಿರೋಧ ಕಟ್ಟಿಕೊಂಡು ಆಗಬೇಕಾದದ್ದು ಏನೂ ಇಲ್ಲ. ಜನರಲ್ಲಿರುವ ದೇವರು-ಧರ್ಮ- ನಂಬಿಕೆಗಳೆಂಬ ದೌರ್ಬಲ್ಯಗಳ ಹೆಸರಲ್ಲಿ ನಡೆಯುತ್ತಿರುವ ಹಾಗು ನಡೆಸಲಾಗುತ್ತಿರುವ ಮೌಢ್ಯಗಳನ್ನು ನೋಡಿಯೂ ಕೂಡ ಸುಮ್ಮನೆ ಕುಳಿತುಕೊಳ್ಳುವ ಜಾಯಮಾನವೂ ಇವರದ್ದಲ್ಲ, ದುರದೃಷ್ಟವಶಾತ್ ಇಂತಹ ಸತ್ಕಾರ್ಯಕ್ಕಾಗಿ ಹಿರಿಯ ದಾಬೋಲ್ಕರರಂತವರ ಬಲಿದಾನವೂ ನಡೆಯುತ್ತದೆ. ಆದರೂ ದಾಬೋಲ್ಕರರಂತವರ ಅಗತ್ಯ ಇಂದು ಹಿಂದೆಂದಿಗಿಂತಲೂ ಹೆಚ್ಚಿದೆ ಎಂದೇ ಅನಿಸುತ್ತಿದೆಯಲ್ಲವೇ?


- ಶಶಿ ಪುತ್ತೂರು, ದಕ

ದಾಬೋಲ್ಕರ್ ಹತ್ಯೆ ಒಂದು ಘೋರ ಅನ್ಯಾಯ. ಸನತನವಾದ, ಹಿಂದೂ ಕೋಮುವಾದ ಎಂದು ನಮ್ಮ ಸಮಾಜವನ್ನು ಮೂಢನಂಬಿಕೆಗಳಿಂದ ತುಂಬುತ್ತಿರುವ ಆರೆಸ್ಸೆಸ್ ಮನಸ್ಸುಗಳೇ ಈ ಹತ್ಯೆಯ ಹಿಂದಿವೆ. ವಿಚಾರವಾದ ಎಂದು ಮಾತನಾಡಿದರೆ 'ಹುಷಾರ್' ಎಂಬ ಎಚ್ಚರಿಕೆಯನ್ನು ಈ ಹತ್ಯೆ ಸಮಾಜಕ್ಕೆ ರವಾನಿಸಿದೆ. ಇದಕ್ಕೆಲ್ಲಾ ಮುಕುಟವಿಟ್ಟಂತೆ ಮೋದಿಯ ಕುರಿತು ಪ್ರಚಾರದ ಭರಾಟೆಯೂ ಮಿತಿಮೀರುತ್ತಿದೆ. ಆದರೆ ಇನ್ನಷ್ಟು ದಾಬೋಲ್ಕರ್‌ಗಳು ರೂಪುಗೊಳ್ಳುತ್ತಾರೆ ಎಂಬ ಸತ್ಯ ಈ ಮೂಢರಿಗೆ ಹೇಗೆ ಅರ್ಥವಾಗಬೇಕು?

- ರವಿಕುಮಾರ್, ಹಾಸನ




ಹೊಗಳಿಕೆ ತೆಗಳಿಕೆ




ಶಾರುಕ್ ಖಾನ್‌ನ ಕಲ್ಪಿತ ಮಂಗಳೂರು ನಂಟು

ಪತ್ರಿಕೆಯಲ್ಲಿ 'ಚೆನ್ನೈ ಎಕ್ಸ್‌ಪ್ರೆಸ್' ಎಂಬ ಹಿಂದಿ ಚಿತ್ರದ ವಿಮರ್ಶೆಯಲ್ಲಿ ಬಾಲಿವುಡ್ ಬಗ್ಗೆ ಸ್ಪಂದನಾ ಅವರು ಹೇಳಿರುವ ಕೆಲವು ಕಹಿ ಸತ್ಯಗಳು ಸರಿಯಾಗಿವೆ. ... ಚಿತ್ರರಂಗದವರು ದಕ್ಷಿಣ ಭಾರತೀಯರನ್ನು ಯಾವಾ... ತಾತ್ಸಾರದಿಂದಲೇ ನೋಡುತ್ತಾರೆ. ದಕ್ಷಿಣದ ನಾಯಕ... ಎಷ್ಟೇ ಪ್ರತಿಭಾವಂತನಾಗಿರಲಿ, ಎಷ್ಟೇ ಸುಂದರಾಂ... ಆಗಿರಲಿ ಅವನಿಗೆ ಹಿಂದಿ ಚಿತ್ರರಂಗದಲ್ಲಿ ಸರಿ... ಗೌರವ ಮತ್ತು ಅವಕಾಶ ಸಿಗುವುದೇ ಇಲ್ಲ (ದ... ನಟಿಯರಿಗೆ ಮಾತ್ರ ಸ್ಥಾನ ಸಿಕ್ಕಿದೆ). ಇದಕ್ಕೆ ... ಉದಾಹರಣೆ ಪ್ರತಿಭೆಯ ಗಣಿಯಾಗಿದ್ದ ಸ್ಫುರ... ಕಮಲಹಾಸನ್. ಇವರನ್ನು ಹಿಂದಿ ಚಿತ್ರರಂಗದ ... ಹಿತಾಸಕ್ತಿಗಳು ಯಶಸ್ವಿಯಾಗಲು ಬಿಡಲೇ ಇಲ್ಲ. ಶಾ... ಖಾನನಿಗೆ ಮಂಗಳೂರಿನೊಂದಿಗೆ ಯಾವ ... ಇರದಿದ್ದರೂ ತಾನು ಮಂಗಳೂರಿನಲ್ಲಿ ಹುಟ್ಟಿದ್ದು ... ಸುಳ್ಳು ಸುದ್ದಿಯನ್ನು ಸೃಷ್ಟಿಸಿ ಪತ್ರಿಕೆಗಳಲ್ಲಿ ಪ... ಮಾಡಲಾಯಿತು ಎಂದು ಮುಂಬಯಿಯ ಪತ್ರಿ... ಬರೆದಿವೆ. ಇದಕ್ಕೂ ಹಿಂದಿ ಚಿತ್ರರಂಗದವರ... ಸುಪಿರಿಯಾರಿಟಿಯೇ ಕಾರಣ.

ಆದರೆ ಹೆಚ್ಚಾಗಿ ಪಂಜಾಬಿ ಹಿನ್ನೆಲೆಯ ಕಥೆ...





...ಯೋಗಗಳನ್ನು ಕಟ್ಟಿಕೊಟ್ಟಿದ್ದಾರೆ. ಗೃಹಮಂಡಳಿಯಲ್ಲಿ ...ೀಗ ನಿರ್ವಹಿಸುತ್ತ ಹಗಲು ಕಳೆವ ಇವರು ...ಗುತ್ತಿದ್ದಂತೆ ರಂಗಭೂಮಿಯ ಬಣ್ಣದ ಕನಸುಗಳಿಗೆ ...ಕ್ರಿಯಾಗುತ್ತಿದ್ದರು. ಜಯತೀರ್ಥ ಜೋಶಿ 'ಸತ್ತವರ ...' ಮಾಡಿಸಿದರು. ಜೋಶಿ ಅವರು ಬದುಕಿನ ...ಮಲ್ಲಿ 'ಜಿ.ಕೆ. ಮಾಸ್ತರರ ಪ್ರಣಯ ಪ್ರಸಂಗ', 'ವಾಸಾಂಸಿ ...ಣಿ' ನಾಟಕವನ್ನು ರಂಗ ಸಂಪದಕ್ಕೆ ಕಟ್ಟಿಕೊಟ್ಟರು. ...ನ್ನಡ ರಂಗ ಪ್ರಯೋಗಗಳಲ್ಲಿ ಮಹತ್ವದ ಅಭಿವ್ಯಕ್ತಿಗಳು. ...ಂದ್ರಕಾಂತ ಕುಸನೂರ, ರಂಗ ಸಂಪದ, ಶ್ರೀಪತಿ ...ಜನಬೈಲು-ಒಂದು ಅವಿನಾಭಾವ ಸಂಬಂಧ. ...ಾರರ ಬಹುತೇಕ ಯಶಸ್ವಿ ನಾಟಕಗಳನ್ನ ಶ್ರೀಪತಿ ...ಸಂಪದದಿಂದ ಪ್ರಯೋಗಿಸಿದ್ದಾರೆ. 'ರಿಹರ್ಸಲ್' ಮತ್ತು ...' ಚರ್ಚೆಗೆ ಈಡಾದ ನಾಟಕಗಳು. ಇವು ಶ್ರೀಪತಿಗೂ ... ತಂದವು. 'ದಿಂಡಿ' ಮಹಾರಾಷ್ಟ್ರದಲ್ಲೂ ಪ್ರಯೋಗ ...ು. ರಂಗ ಸಂಪದದ ಯಶಸ್ವಿ ಪ್ರಯೋಗಗಳಲ್ಲಿ ...ತು', 'ಬೆಸುಗೆಗೊಳ್ಳದ ಹಳಿಗಳು' 'ಘಾಶಿರಾಮ ...ಾಲ', 'ನನ್ನ ತಂಗಿಗೊಂದು ಗಂಡು ಕೊಡಿ', ...ಮಂಡಲ', 'ಆ ಊರು ಈ ಊರು' 'ಖರೋಬರ' ಮಹತ್ವವಾದವು. ಇವುಗಳಲ್ಲಿ ಬಹುತೇಕ ಪ್ರಯೋಗಗಳು ಶ್ರೀಪತಿ ನಿರ್ದೇಶನ ಪಡೆದವು. ಕೃಷ್ಣಮೂರ್ತಿ ಕವತ್ತಾರ್, ಅಶೋಕ ಬಾದರದಿನ್ನಿ, ಜಯತೀರ್ಥ ಜೋಶಿ ಅಂಥವರ ಪ್ರಯೋಗ ಸಾಧ್ಯತೆಗಳನ್ನು ಇಲ್ಲಿ ಕಲಾವಿದರು, ಪ್ರೇಕ್ಷಕರು ಕಂಡಿದ್ದಾರೆ. ನೀನಾಸಂ, ಸಾಣೆಹಳ್ಳಿ ತಿರುಗಾಟಗಳ ಉತ್ಸವ ಏರ್ಪಡಿಸುವುದರೊಟ್ಟಿಗೆ, ಮರುತಿರುಗಾಟಗಳು, ಕಾರಂತ, ಕಾರ್ನಾಡರ ನಾಟಕೋತ್ಸವಗಳನ್ನು ಹಮ್ಮಿದ ಶ್ರೇಯ ರಂಗ ಸಂಪದಕ್ಕಿದೆ. ಇತ್ತೀಚೆಗೆ ಹುಲುಗಪ್ಪ ಕಟ್ಟಿಮನಿ ಅವರ ಕೈದಿಗಳ ನಾಟಕೋತ್ಸವ, ಎನ್‌ಎಸ್‌ಡಿಯ ರಾಜ್ಯಮಟ್ಟದ ಮಕ್ಕಳ ರಂಗೋತ್ಸವವನ್ನು ರಂಗ ಸಂಪದ ಬೆಳಗಾವಿ ಜನರಿಗೆ ನೀಡಿದೆ.

ರಂಗ ಸಂಪದಕ್ಕೆ ಶ್ರೀಪತಿ ಮತ್ತು ಆತನ ಸ್ನೇಹಿತರು ಕೊಟ್ಟ ಅಪರೂಪದ ಕೊಡುಗೆ ಏನೆಂದರೆ ಪ್ರೇಕ್ಷಕ ಸದಸ್ಯರು. ಆಸಕ್ತ ಪ್ರೇಕ್ಷಕರ ಮನೆಮನೆ ಅಲೆದು ಈ ಗೆಳೆಯರು ಅಂದಾಜು ನಾಲ್ಕುನೂರಕ್ಕೂ ಅಧಿಕ ಕಾಯಂ ಪ್ರೇಕ್ಷಕರನ್ನು ಕಟ್ಟಿಕೊಟ್ಟಿದ್ದಾರೆ. ವರ್ಷಕ್ಕೆ ಒಬ್ಬರಿಗೆ ಇಂತಿಷ್ಟು, ಇಬ್ಬರಿಗೆ ಇಂತಿಷ್ಟು (ಈಗ ಒಬ್ಬರಿಗೆ 150/- ಇಬ್ಬರಿಗೆ 250/- ರೂ) ಎಂದು ಹಣ ಪಡೆದು ಎಂಟರಿಂದ ಹತ್ತು ನಾಟಕಗಳನ್ನು ತೋರಿಸುವುದು. ಇದು ಈಗಲೂ ಮುಂದುವರೆದಿದೆ. ಬೆಳಗಾವಿಯಲ್ಲಿ ಆಧುನಿಕ ರಂಗಭೂಮಿಗೆ ಚಳವಳಿ ಸ್ವರೂಪ ಕೊಟ್ಟ ರಂಗ ಸಂಪದ ಮತ್ತು ಶ್ರೀಪತಿ ಮಂಜನಬೈಲು ಅವರ ಕಾರ್ಯ ಸ್ಮರಣೀಯ. ಅವರೂ ಬೆಳೆದರು, ರಂಗ ಸಂಪದವನ್ನೂ ಬೆಳೆಸುವುದರ ಮೂಲಕ ಹಲವಾರು ಕಲಾವಿದರನ್ನೂ ಸೃಷ್ಟಿಸಿದರು. ಮೂವತ್ತಕ್ಕೂ ಅಧಿಕ ವಸಂತಗಳನ್ನು ಕಂಡ ಈ ತಂಡಕ್ಕೆ ಒಂದು ಶಾಶ್ವತ ನೆಲೆ ದಕ್ಕಬೇಕಿದೆ. ರಂಗಚಟುವಟಿಕೆ ನಡೆಸಲು ಒಂದು ಜಾಗೆಯನ್ನು ಸರ್ಕಾರ ನೀಡಿದರೆ ಅಲ್ಲೊಂದು ರಂಗಮಂದಿರ ಕಟ್ಟಿ ನಿರಂತರ ನಾಟಕ ಪ್ರಯೋಗ, ಚರ್ಚೆ, ಸಂವಾದ ನಡೆಸಲು ಅನುಕೂಲವಾಗಬಹುದು. ಒಂದು ಸಮಾಜ ಆರೋಗ್ಯಪೂರ್ಣ, ಸ್ವಾಸ್ಥ್ಯದಿಂದ ಕ್ರಿಯಾಶೀಲವಾಗಿರಬೇಕಾದರೆ ಅಲ್ಲೊಂದು ರಂಗಸಂಸ್ಕೃತಿ ಮೊಳೆದು ಹೆಮ್ಮರವಾಗಬೇಕು. ಅಲ್ಲಿಯ ಆ ನೆರಳಲ್ಲಿ ಒಂದು ಸುಂದರ ಸೌಹಾರ್ದದ ಮನುಜ ಕುಲ ತಲೆಯೆತ್ತಬೇಕು. ಇದು ರಂಗ ಸಂಪದದ ಆಶಯವೂ ಹೌದು. ಇದು ಸಾಕಾರಗೊಳ್ಳುವುದೇ? ಕಾದು ನೋಡೋಣ.

■ ಡಾ. ಡಿ.ಎಸ್. ಚೌಗಲೆ



ನಾಯಕಿಯರ ಬದಲಿ ವ್ಯವಸ್ಥೆ



ಸಾಧಾರಣವಾಗಿ ನಾಯಕಿಯೊಬ್ಬಳು ಚಿತ್ರರಂಗದಿಂದ ತೆರೆಮರೆಗೆ ಸರಿಯುತ್ತಿರುವ ಸಂದರ್ಭದಲ್ಲೇ ತನ್ನ ತಂಗಿಯನ್ನು ನಾಯಕಿಯಾಗಿ ಚಿತ್ರರಂಗಕ್ಕೆ ಪರಿಚಯಿಸುತ್ತಾಳೆ. ಉದಾಹರಣೆಗೆ ಮಾಲಾಶ್ರೀ ತೆರೆಮರೆಗೆ ಸಾಗುವಾಗ ಆಕೆಯ ತಂಗಿ ಭಾರತಿಯನ್ನು, ಪೂಜಾ ಗಾಂಧಿ ನೇಪಥ್ಯಕ್ಕೆ ಹೋಗುವುದು ಅನಿವಾರ್ಯವಾದಾಗ ತಂಗಿ ರಾಧಿಕಾಳನ್ನು, ಸಂಜನಾಗೆ ಅವಕಾಶಗಳು ಸಿಗದಿದ್ದಾಗ ತನ್ನ ಸಹೋದರಿ ನಿಕ್ಕಿಯನ್ನು ಚಿತ್ರರಂಗಕ್ಕೆ ಪರಿಚಯಿಸಿದ್ದು ನಿಮಗೆಲ್ಲ ಗೊತ್ತೇ ಇದೆ. ಆದರೆ ಅಕ್ಕನ ಬೆಂಬಲದೊಂದಿಗೆ ಚಿತ್ರರಂಗಕ್ಕೆ ಬಂದ ಈ ತಂಗಿಯಂದಿರು ಬೆಳ್ಳಿತೆರೆಯ ಮೇಲೆ ಹೆಚ್ಚು ಕಾಲ ವಿಜೃಂಭಿಸಲಿಲ್ಲ ಎಂಬುದು ಬೇರೆ ಮಾತು.

ಈಗ ಈ ಮೇಲಿನ ಟ್ರೆಂಡ್‌ಗೆ ವಿರುದ್ಧವಾಗಿ ತಂಗಿಯೊಬ್ಬಳು ತನ್ನ ಅಕ್ಕನನ್ನು ಚಿತ್ರರಂಗಕ್ಕೆ ಪರಿಚಯಿಸುತ್ತಿದ್ದಾಳೆ. ಈಕೆ ಬೇರೆ ಯಾರೂ ಅಲ್ಲ, 'ಬುಲ್‌ಬುಲ್' ಖ್ಯಾತಿಯ ನಾಯಕಿ ರಚಿತಾ ರಾಮ್. ಈಕೆ ನಟಿಸಿದ ಮೊದಲ ಚಿತ್ರ ಈಗಷ್ಟೇ ಶತದಿನೋತ್ಸವ ಆಚರಿಸುತ್ತಿದೆ. ಆಕೆಯ ಎರಡನೇ ಚಿತ್ರ ಸೆಟ್ಟೇರುವ ಮೊದಲೇ ಆಕೆಯ ಅಕ್ಕ ನಿತ್ಯಾ ರಾಮ್ ನಾಯಕಿಯಾಗಿ ಎಂಟ್ರಿ ಕೊಟ್ಟಿದ್ದಾಳೆ.

ಅಂದಹಾಗೆ, ನಿತ್ಯಾ ಈಗಾಗಲೇ ಮದುವೆಯಾಗಿ ಸಂಸಾರ ಜೀವನ ನಡೆಸುತ್ತಿರುವವಳು. ಮದುವೆಯಾಗಿದ್ದರೂ ಈಕೆಗೆ ಈಗ ನಾಯಕಿಯ ಪಟ್ಟ ಬರುತ್ತಿರುವುದು ಆಶ್ಚರ್ಯವಾಗಿ ಕಾಣಿಸುತ್ತಿದೆ. ನಿತ್ಯಾ ರಾಮ್ ಕೂಡ ತಂಗಿ ರಚಿತಾ ರಾಮ್ ತರಹ ಉತ್ತಮ ಭರತನಾಟ್ಯಪಟು ಮಾತ್ರವಲ್ಲ, ಅನೇಕ ಧಾರಾವಾಹಿಗಳಲ್ಲಿ ನಾಯಕಿಯಾಗಿ ನಟಿಸಿದ ಅನುಭವವನ್ನು ಹೊಂದಿದ್ದಾಳೆ. ನಿತ್ಯಾ ಈಗ ನಾಯಕಿಯಾಗಿ ನಟಿಸುತ್ತಿರುವ ಚಿತ್ರದ ಹೆಸರು 'ಮುದ್ದು ಮನಸ್ಸೆ'.

...ಯ ಚಿತ್ರಗಳನ್ನು ನೋಡಿ ನೋಡಿ ಬೇಸತ್ತಿದ್ದ ...ರಿಗೆ 'ಚೆನ್ನೈ ಎಕ್ಸ್‌ಪ್ರೆಸ್' ಚಿತ್ರ ಒಂದು ಚೇತೋಹಾರಿ ...ನಷ್ಟೆ ಅಷ್ಟೇ. ಹಾಗೆ ಮುಂಬೈಯಲ್ಲಿ ಎಲ್ಲರೂ ...ನ ಪ್ರಶ್ನೆ ಒಂದೇ 'ಬಾಲಿವುಡ್'ನಲ್ಲಿ ಹೆಚ್ಚಾಗಿ ಪಂಜಾಬಿ ...ತ್ರಿ ಹಾಗೂ ಪಠಾಣರೇ ಏಕೆ ತುಂಬಿದ್ದಾರೆ? ಇತರ ... ಭಾರತೀಯ ರಾಜ್ಯಗಳವರಿಗೂ ಬಾಲಿವುಡ್‌ನಲ್ಲಿ ... ಅನ್ಯಾಯ ಏಕಾಗುತ್ತಿದೆ? (ಅಮಿತಾಭ ಬಚ್ಚನ್ ...ಅರ್ಧ ಪಂಜಾಬಿ, ಆತನ ತಾಯಿ ಪಕ್ಕಾ ಪಂಜಾಬಿ). ...ಯ ಕಲೆ ಮತ್ತು ಪ್ರತಿಭೆ ಕೇವಲ ಪಂಜಾಬಿ ಹಾಗು ...ರಲ್ಲಿ ಮಾತ್ರವೇ ಕೇಂದ್ರೀಕೃತವಾಗಿದೆಯೇ? ದಿಲ್ಲಿ ... ಉತ್ತರ ಪ್ರದೇಶದಲ್ಲಿ ಹೀಗೊಂದು ನಾಣ್ಣುಡಿಯಿದೆ: ...ಾಬಿ ಖತ್ರಿ ಹಾಗೂ ಬನಿಯಾಗಳು ನಾಲ್ಕು ಜನ ...ದರೆ ಸಾಕು ಅವರು ಇತರರ ಹಕ್ಕಿನ ಅನ್ನವನ್ನೆಲ್ಲ ...ಬಿತ್ತಾರೆ' ಎಂದು.

- ಪ್ರತೀಶ್ ಕೆ ಕುಲಕರ್ಣಿ, ಮುಂಬೈ

ಪತ್ನಿ ಪೀಡಿತರು...

...ಆರೋಗ್ಯಪೂರ್ಣ ಚರ್ಚೆ

...ಾಜಲಕ್ಷ್ಮಿ ಅಂಕಲಗಿಯವರ ಲೇಖನ ಸರಣಿ ...ವಾದಾಗಿನಿಂದ ಈ ಕುರಿತು ಬರುತ್ತಿರುವ ಪರ ...ೋಧದ ಪ್ರತಿಕ್ರಿಯೆಗಳನ್ನು ಓದುತ್ತಿದ್ದೇನೆ. ನಾನು ...ದಂತೆ ಡಾ.ವಾಸುರವರು ಬಹಳ ಸಂಯಮದಿಂದ ...ುಸುವಂತಹ ವ್ಯಕ್ತಿತ್ವದವರು. ಮೊನ್ನೆ ಮಂಗಳೂರಿನಲ್ಲಿ ... ಕಾರ್ಯಕ್ರಮದಲ್ಲಿ ಅವರು ಸಿಕ್ಕಿದ್ದಾಗ ...ಮುನ್ಸಿಪರ ಒಂದು ರೂ. ಅಕ್ಕಿ ಕಾರ್ಯಕ್ರಮದ ... ಟಿವಿ ವಾಹಿನಿ ಚರ್ಚೆಯಲ್ಲಿ ಅವರು ಮಾತಾಡಿದ ...ಬಗ್ಗೆ ಒಳ್ಳೆ ಮಾತುಗಳನ್ನು ಆಡಿದ್ದೆ. 'ಸೋಮಾರಿಗಳು' ...ರೆಗಳಂತಹ ರೆಡಿಮೇಡ್ ಮಾತುಗಳಿಂದ ಒಂದು ... ಸಾಗುತ್ತಿದ್ದ ಚರ್ಚೆಯ ದಿಕ್ಕನ್ನ ಯಾವ ಆವೇಶಕ್ಕೂ ...ಗದೇ ಕೂಲಾಗಿ ಸರಿದಾರಿಗೆ ತಂದು ನಿಲ್ಲಿಸಿ ಅದನ್ನು ...ವಾಗಿ ಅವರು ಮಾತನಾಡಿದ್ದರು. ಅಂತಹ ಕೂಲ್ ...ವರನ್ನು ಅಂಕಲಗಿಯವರ ಆರಂಭದ ಲೇಖನವೇ ... ಮಾಡಿದ್ದು ವಿಶೇಷ.

... ಲೇಖನವನ್ನು ಬರೆಯುತ್ತಿರುವವರು ಹಾಗು ...ವಾರ ಪ್ರಕಟಿಸುತ್ತಿರುವ ಪತ್ರಿಕೆಯ ಪ್ರಧಾನ ...ರನ್ನು ಇಬ್ಬರೂ ಕೂಡ ಮಹಿಳೆಯರೇ ಹಾಗು ... ಸಹಜವಾಗಿ ನಾವು ಅದರಿಂದಾರಂಭವಾಗಿ ... ಸಂಪಾದಕರ ಎಲ್ಲಾ ವಿರೋಧದ ಪ್ರತಿಕ್ರಿಯೆಗಳಿಗೆ ... ಇವರಿಬ್ಬರುಗಳು "The end"ಎನ್ನುವ ರೀತಿಯಲ್ಲಿ ಸಮರ್ಥನೆಯ ಉತ್ತರಗಳನ್ನು ಎಲ್ಲೂ ಹೇಳಲು ಹೋಗದೇ ಈ ಕುರಿತ 'ಮುಕ್ತ ಚರ್ಚೆ'ಗೆ ಅವಕಾಶ ಮಾಡಿಕೊಟ್ಟಿರುವುದು ಸ್ವಾಗತಾರ್ಹ. ಯಾಕೆಂದರೆ ಇಲ್ಲಿ ಎತ್ತಲಾಗಿರುವ ವಿಚಾರವೇ ಆ ರೀತಿಯ ಸೂಕ್ಷ್ಮದ್ದಾಗಿದೆ. 'ಇದಮಿತ್ಥಂ' ಎಂದು ಯಾರೂ ಕೂಡ ಸುಲಭವಾಗಿ ಹೇಳಲಾಗದು. ವಾಸುರವರ ಅಭಿಪ್ರಾಯ ಎಷ್ಟು ಸರಿಯೋ ಅದೇ ರೀತಿ ಬೆಳಗಲಿಯವರದ್ದೂ ಕೂಡ.

- ರವಿ ಪುತ್ತೂರು, ದಕ




ತಕ್ಷಣವೇ ನಿಲ್ಲಿಸಿ

ಲಂಕೇಶ್ ಪತ್ರಿಕೆ ಓದುಗಳಾದ ನಾನು ನಮ್ಮ ಕಾಲೇಜಿನಲ್ಲಿರುವ ಹಲವು ನಿಯತಕಾಲಿಕೆಗಳು ಉಪಯೋಗಕ್ಕೆ ಬಾರದವು ಎಂದಾಗ ಕೋಪಗೊಳ್ಳುವವರು ಇದ್ದಾರೆ. ಆದರೆ ಲಂಕೇಶ್ ಪತ್ರಿಕೆಯು ಎಲ್ಲಾ ದಮನಿತರ, ಶೋಷಿತರ ಧ್ವನಿ ಆಗಿರುವಂತಹ ಪತ್ರಿಕೆ. ಆದರೆ ಇತ್ತೀಚೆಗೆ ಪ್ರಕಟಗೊಳ್ಳುತ್ತಿರುವ 'ಪತ್ನಿ ಪೀಡಿತರ ಕಥೆ-ವ್ಯಥೆ' ನಿಜಕ್ಕೂ ಬೇಸರ ತಂದಿದೆ. ಖಂಡಿತವಾಗಿಯೂ ಪುರುಷರಿಗೂ ಶೋಷಣೆ ಉಂಟಾಗುತ್ತದೆ ಅನ್ನುವುದು ಒಪ್ಪಲೇಬೇಕಾದ ವಿಚಾರವಾದರೂ ನೂರಕ್ಕೆ ಒಂದು ಭಾಗ ಅಷ್ಟೇ. ಮಹಿಳೆಯರ ಮೇಲಿನ ದೌರ್ಜನ್ಯ ಈಗಿನಿಂದಲ್ಲ, ಹಿಂದಿನಿಂದಲೂ ನಡೆಯುತ್ತಲೇ ಬಂದಿದೆ. ಹೀಗಿರುವಾಗ ಈ 'ಕಥೆ-ವ್ಯಥೆ'ಯು ಶೋಷಣೆ ಎಂಬುದು ಪುರುಷ ಮತ್ತು ಮಹಿಳೆ ಇಬ್ಬರು ಅನುಭವಿಸುತ್ತಿರುವ ವಿಷಯವಾಗಿ ಕಾಣಿಸುತ್ತಿದೆ. ಮಹಿಳೆಯರ ಮೇಲಿನ ಶೋಷಣೆಯ ಕರಾಳತೆಯನ್ನು ಸಹಜವಾಗಿಯೇ ಜನರು ನೋಡುವಂತೆ ಮಾಡುತ್ತಿದೆ. ಇದು ಒಳ್ಳೆಯ ಬೆಳವಣಿಗೆ ಅಲ್ಲವೆಂದು ನನಗೆ ಅನ್ನಿಸುತ್ತಿದೆ. ಈ ಅಂಕಣವನ್ನು ಇಲ್ಲಿಗೆ ನಿಲ್ಲಿಸುವ ಮುಖಾಂತರ ಸಮಾಜದ ಸ್ವಸ್ತ್ಯವನ್ನು ಕಾಪಾಡಬೇಕೆಂದು ಸಂಪಾದಕರಲ್ಲಿ ಮನವಿ.

-ಕಾವ್ಯ ಸಮತಾಳ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬೆಂಗಳೂರು

ಮೌಲ್ಯಗಳನ್ನು ಬಲಿಕೊಟ್ಟ ಗೌಡರು

2002ರ ಕನಕಪುರ ಲೋಕಸಭಾ ಕ್ಷೇತ್ರದ ಉಪಚುನಾವಣೆ ಸಮಯ. ಮಾಜಿ ಪ್ರಧಾನಿ ದೇವೇಗೌಡರು ಸ್ಪರ್ಧಿಸಿದ್ದರು. ನನಗೆ ಆಗ ಮೊದಲ ಮತದಾನದ ಸಂಭ್ರಮ. ದಿ. ಎಚ್. ಕರಿಯಪ್ಪ ಕಾಲದಿಂದಲೂ ಕಾಂಗ್ರೆಸ್ಸಿಗರಾಗಿದ್ದ ನನ್ನ ಅಪ್ಪ, ಮಾಜಿ ಪ್ರಧಾನಿ, ಮಣ್ಣಿನ ಮಗ, ಜೊತೆಗೆ ಕುಲಬಾಂಧವ ಎಂಬ ಅಭಿಮಾನದಿಂದ ದೇವೇಗೌಡರಿಗೆ ಮತ ನೀಡುವಂತೆ ಹೇಳಿದ್ದರು. ಅಪ್ಪನ ಮಾತಿನಂತೆ



ಮತದಾನ ಮಾಡಿದ್ದೆ. ತನ್ನೆಲ್ಲ ತತ್ವ, ಮೌಲ್ಯಗಳೆಲ್ಲವನ್ನೂ ಹಂತಹಂತವಾಗಿ ಬಲಿ ಕೊಡುತ್ತ ಬಂದಿರುವ ಗೌಡರು ಅಂತಿಮವಾಗಿ ಕೋಮುವಾದಿ ಬಿಜೆಪಿ ಜೊತೆ ಉರುಳು ಸೇವೆ ಮಾಡುತ್ತಿದ್ದಾರೆ. ನನ್ನ ಮೊದಲ ಮತವನ್ನು ಅಂದು ಜೆಡಿಎಸ್ ನೀಡಿದ್ದಕ್ಕೆ ಪಶ್ಚಾತಾಪ ಪಡುವಂತಾಗಿದೆ.

-ಕೆ.ಎಂ. ಓಬಸಿದ್ದೇಗೌಡ, ಕನಕಪುರ

ಕೊಲೆ ಮಾಡಿ ಸಮರ್ಥಿಸಿದವರು..

ದೇವರ ದಯೆ ಇದ್ದವರಿಗೆ ದಾಬೋಲ್ಕರ್ ಅವರಂತೆ ಶ್ರಾದ್ಧದಲ್ಲಿ ಸಾಯುವ ಅವಕಾಶ ಸಿಗುತ್ತದೆ ಎಂದು ಚಡ್ಡಿ ನಾಯಕ ಜಯಂತ್ ಅಥವಾಲೆ ಎನ್ನುತ್ತಾನೆಂದರೆ ಅವನ ಬುದ್ಧಿ ಇನ್ನೆಂತಹದ್ದಿರಬೇಕು. ಇಂದು ಶಿಕ್ಷಕರು ಹಾಗು ವಿದ್ಯಾವಂತರೆನಿಸಿಕೊಂಡಿರುವರೇ ಹೋಮ, ಹವನ, ಜೋತಿಷ್ಯ, ಪೂಜೆಗಳಲ್ಲಿ ಮುಳುಗಿ ಮೌಢ್ಯದಲ್ಲಿ ತುಂಬಿರುವಾಗ ಇವರಿಂದ ಕಲಿಯಬೇಕಿರುವ ವಿದ್ಯಾರ್ಥಿಗಳು, ಅನಕ್ಷರಸ್ಥರ ಪಾಡೇನಾಗಬಹುದು? ಸಮಾಜಕ್ಕೆ ಇಂತಹ ಮೌಢ್ಯಗಳ ವಿರುದ್ಧ ಕೆಲಸ ಮಾಡುವ ವಿಚಾರವಾದಿಗಳ ಅನಿವಾರ್ಯತೆ ತುಂಬಾ ಇದೆ. ದಾಬೋಲ್ಕರರ ಮಸೂದೆ ಕಡೆಗೂ ಜಾರಿಯಾಗಿರುವುದು ಅವರ ಹೋರಾಟಕ್ಕೆ ಸಂದ ಜಯವೆನ್ನಬಹುದು. ಆದರೆ ಅವರ ಸಾವಿನ ನಂತರ ಜಾರಿಯಾಗಿರುವುದು ದುರಂತವೇ ಸರಿ.

"ನನ್ನ ಮಾತಿನ ಬಗ್ಗೆ ಜನರಿಗೆ ನನ್ನ ಸಾವಿನ ನಂತರವೇ ನಂಬಿಕೆ ಬರುತ್ತೇನೋ" (ಅವರ ಈ ಮಾತು ಕೂಡ ನಿಜವಾಗಿದೆ?!) ಈ ಸಾಲು ನೋಡಿದ ನನಗೆ ನೆನಪಾದದ್ದು ಭಗತ್ ಸಿಂಗ್. ಭಗತ್ ಸಿಂಗ್ ಕೂಡ ಜೈಲಿನಲ್ಲಿರುವ ಸಂದರ್ಭದಲ್ಲಿ "ನಮ್ಮ ಹೋರಾಟ ಪ್ರಾಮಾಣಿಕವಾದದ್ದು, ನಾವು ಭಯೋತ್ಪಾದಕರಲ್ಲ, ನಮ್ಮ ಹೋರಾಟ ಶೋಷಿತರ ಸ್ವಾತಂತ್ರ್ಯಕ್ಕಾಗಿ ಎಂದು ಜನರಿಗೆ ತಿಳಿಯಬೇಕಾದರೆ ನನ್ನ ಸಾವು ಅನಿವಾರ್ಯ" ಎಂದಿದ್ದರು. ಅವರು ಕೊನೆಗೂ ನಗುತ್ತಲೆ ನೇಣಿಗೆ ಕೊರಳೊಡ್ಡಿದ್ದರು! ಭಗತ್ ಸಿಂಗ್‌ರ ಫಾಸಿಯನ್ನ ಅಂದಿನ ಅವಕಾಶವಾದಿಗಳು ಸಮರ್ಥಿಸಿಕೊಂಡದ್ದು ನಮಗೆಲ್ಲ ಗೊತ್ತಿರುವುದೆ. ಅಂದಿನಿಂದಲೂ ಇಂತಹ ಜಯಂತ್ ಅಥವಾಲೆ ತರಹದ ವಿಷಜಂತುಗಳು ಬೆಳೆಯುತ್ತಿವೆ

ದಾಬೋಲ್ಕರ್ ಅವರ ಸಾವು ನಮ್ಮ ಮನಸ್ಸನ್ನು ಕಲಕಿದೆ. ಅವರ ಸಾವಿಗೆ ಇನ್ನಾದರು ನ್ಯಾಯ ಸಲ್ಲಿಸುವ ದಿಕ್ಕಿನಲ್ಲಿ ನಡೆಯೋಣ.

ಈಗ ಇತ್ತೀಚೆಗೆ ಚರ್ಚೆಯಾಗುತ್ತಿರುವ 'ಪತ್ನಿ ಪೀಡಿತರ ಕತೆ ವ್ಯಥೆ'ಯನ್ನು ನಾನು ಮೊದಲನೆ ಸಂಚಿಕೆಯಲ್ಲಿ ಓದಿದ್ದು ಬಿಟ್ಟರೆ ಬೇರೆ ಯಾವ ಸಂಚಿಕೆಯಲ್ಲೂ ಓದಿಲ್ಲ ಹಾಗು ಓದುವುದೂ ಇಲ್ಲ.

- ಸರೋಜಾ ಬೆಂಕಿಕೆರೆ, ಈ ಮೇಲ್ ಮೂಲಕ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಕಳುಹಿಸಬಹುದು ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರಿಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.

Registered No.KA/RNP/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 14/- 11-09-2013 RNI No. KARKAN2003/

ನಿರ್ಮಾಪಕಿಯರಾಗುತ್ತಿರುವ ನಾಯಕಿಯರು







ಕನ್ನಡ ಚಿತ್ರರಂಗದಲ್ಲಿ ನಾಯಕಿಯರು ಸ್ವತಃ ತಾವೇ ನಿರ್ಮಾಪಕಿಯಾಗುವ ಟ್ರೆಂಡ್ ಮತ್ತೊಮ್ಮೆ ಕಾಣಿಸಿಕೊಳ್ಳುತ್ತಿದೆ.

ಇತ್ತೀಚೆಗೆ ರಾಧಿಕಾ ಕುಮಾರಸ್ವಾಮಿ 'ಸ್ವೀಟಿ' ಎಂಬ ಅಪ್ಪಟ ಕಮರ್ಷಿಯಲ್ ಚಿತ್ರವನ್ನು ಮಾಡಿ ಮುಗಿಸಿದ್ದಾರೆ. ಹಾಗೆಯೇ ಇನ್ನು ಕೆಲವೇ ದಿನಗಳಲ್ಲಿ 'ಮುಂಗಾರು ಮಳೆ' ಖ್ಯಾತಿಯ ಪೂಜಾ ಗಾಂಧಿ ಮೊಟ್ಟಮೊದಲ ಬಾರಿಗೆ 'ಅಭಿನೇತ್ರಿ' ಎಂಬ ಚಿತ್ರದ ಮುಖಾಂತರ ನಿರ್ಮಾಪಕಿಯಾಗುವ ಹಾದಿಯಲ್ಲಿದ್ದಾರೆ. ಮಾಳವಿಕಾ ಕೂಡ ಸದ್ಯದಲ್ಲೇ ಒಂದು ಚಿತ್ರವನ್ನು ನಿರ್ಮಿಸಿ, ಅದನ್ನು ತಾನೇ ನಿರ್ದೇಶಿಸಿ, ಅದರಲ್ಲಿ ನಾಯಕಿಯಾಗಿಯೂ ನಟಿಸುವ ಸುದ್ದಿ ಕೇಳಿಬರುತ್ತಿದೆ.

ಅಂದರೆ, ನಿನ್ನೆ ರಾಧಿಕಾ ಕುಮಾರಸ್ವಾಮಿ, ಇಂದು ಪೂಜಾಗಾಂಧಿ, ನಾಳೆ ಮಾಳವಿಕಾ... ನಾಡಿದ್ದು ಇನ್ಯಾರೋ? ಈ ಹಿಂದೆ ಮಾಲಾಶ್ರೀ ಮತ್ತು ವಿಜಯಲಕ್ಷ್ಮಿಸಿಂಗ್ ನಟನೆಯಿಂದ ಪ್ರಾರಂಭಿಸಿ ನಿರ್ಮಾಪಕಿಯಾಗಿದ್ದರು. ಅದಕ್ಕಿಂತ ಮೊದಲು ಪ್ರಶಸ್ತಿ ಪಡೆಯುವ ಏಕೈಕ ಉದ್ದೇಶದಿಂದ ಅನೇಕ ನಾಯಕಿಯರು ಕಲಾತ್ಮಕ ಚಿತ್ರಗಳ ಮುಖಾಂತರ ನಿರ್ಮಾಪಕಿಯರಾಗಿದ್ದರು. ಉದ್ದಾಹರಣೆಗೆ ಜಯಮಾಲಾ, ಸೌಂದರ್ಯ, ತಾರಾ ಮತ್ತು ಪ್ರಮೀಳಾ ಜೋಷಾಯ್ ಮೊದಲಾದವರು ಪ್ರಶಸ್ತಿ ಪಡೆಯುವ ಉದ್ದೇಶದಿಂದಲೇ ಸಿನಿಮಾ ನಿರ್ಮಿಸಿದ್ದನ್ನು ಕಂಡಿದ್ದೇವೆ.

ಆದರೆ ಈಗ ರಾಧಿಕಾ ಮದುವೆ ಮತ್ತು ತಾಯಿಯಾದ ನಂತರ ಒಂದು ಅಪ್ಪಟ ಕಮರ್ಷಿಯಲ್ ಚಿತ್ರದಲ್ಲಿ ನಾಯಕಿಯಾಗಿ ನಟಿಸಿರುವುದು ವಿಶೇಷ. ಅದೇರೀತಿ ಪೂಜಾ ಗಾಂಧಿ ಕೂಡ ವೈಯಕ್ತಿಕ, ವೃತ್ತಿಜೀವನ ಮತ್ತು ರಾಜಕೀಯ ಜೀವನದ ವಿವಾದಗಳ ಅಧ್ಯಾಯದ ನಂತರ ಈಗ ನಿರ್ಮಾಪಕಿಯಾಗಿರುವುದೂ ವಿಶೇಷವೇ ಸರಿ. ಪಂಜಾಬಿನಿಂದ ಬಂದ ಈ ಹುಡುಗಿ ಕಳೆದ ಏಳೆಂಟು ವರ್ಷಗಳಿಂದ ನಾಯಕಿಯಾಗಿ ಮೆರೆದರೂ ರಾಜಕಾರಣಿಯಾಗಿ ಮಾತ್ರ ಅವರದು ಫ್ಲಾಪ್ ಷೋ. ಈಗ ನಿರ್ಮಾಪಕಿಯಾಗಿ 'ಅಭಿನೇತ್ರಿ' ಚಿತ್ರದ ಮುಖಾಂತರ ತನ್ನ ವೃತ್ತಿಜೀವನದ ಹೊಸ ಅಧ್ಯಾಯಕ್ಕೆ ನಾಂದಿ ಹಾಡಿದ್ದಾರೆ.

'ಅಭಿನೇತ್ರಿ' ಚಿತ್ರದ ಮುಖಾಂತರ ಪೂಜಾ ಗಾಂಧಿ ಕನ್ನಡ ಚಿತ್ರರಂಗದ ಶ್ರೇಷ್ಠ ಅಭಿನೇತ್ರಿ ದಿವಂಗತ ಕಲ್ಪನಾ ಅವರ ವೃತ್ತಿಜೀವನದ ವೃತ್ತಾಂತವನ್ನು ಹೇಳಲು ಹೊರಟಂತಿದೆ. ಬಹುಶಃ ಹಿಂದಿಯಲ್ಲಿ ಏಕ್ತಾ ಕಪೂರ್ ಸಿಲ್ಕ್‌ಸ್ಮಿತಾ ಅವರ ರೋಚಕ ಬದುಕನ್ನು ಆಧರಿಸಿ ನಿರ್ಮಿಸಿದ 'ಡರ್ಟಿ ಪಿಕ್ಚರ್' ಬಾಕ್ಸ್ ಆಫೀಸ್‌ನಲ್ಲಿ ಏಕ್‌ದಮ್ ಸೂಪರ್ ಹಿಟ್ ಆಗಿದ್ದರಿಂದ ಪೂಜಾ ಗಾಂಧಿ ಪ್ರೇರಣೆ ಪಡೆದು ಈ ಕಥಾವಸ್ತುವನ್ನು ಆಯ್ಕೆ ಮಾಡಿದ್ದಾರೆ ಎಂಬ ಗುಮಾನಿ ಬರುತ್ತದೆ.

ಇನ್ನು ಮಾಳವಿಕಾ ಅವರ ಚಿತ್ರದ ಕಥಾವಸ್ತುವೂ ರೋಚಕವಾಗಿದೆ. ಆಕೆಯ ಪತಿ ಅವಿನಾಶ್ ಇತ್ತೀಚೆಗೆ ಪತ್ರಕರ್ತರೊಂದಿಗೆ ಖಾಸಗಿಯಾಗಿ ಈ ಬಗ್ಗೆ ಹೇಳಿದ ಮಾಹಿತಿ ಹೀಗಿದೆ:

"ಮಾಳವಿಕಾ ಚಿತ್ರದ 'ಬೆಂಗಳೂರು ನಾಗರತ್ನ'. ಈ ಮಹಿಳೆ ಬೆಂಗಳೂರಿನವರಾಗಿದ್ದರೂ ಅವರ ಕಾರ್ಯಕ್ಷೇತ್ರ ಮದ್ರಾಸ್ ಆಗಿತ್ತು. ದೇವದಾಸಿಯಾಗಿ ಮದ್ರಾಸ್ ಮತ್ತು ಬೆಂಗಳೂರಿನಲ್ಲಿ ಒಂದು ಕಾಲದಲ್ಲಿ ಆಕೆ ಬಹಳ ಜನಪ್ರಿಯಳಾಗಿದ್ದರು. ಅವರನ್ನು ಕುರಿತು ಒಂದು ಪುಸ್ತಕವೂ ಬಂದಿದೆ. ಅದನ್ನು ಓದಿದ ನಂತರವೇ ಅದರಿಂದ ಸ್ಫೂರ್ತಿಗೊಂಡ ಮಾಳವಿಕಾ ಈಕೆಯ ಜೀವನಚರಿತ್ರೆಯನ್ನಾಧರಿಸಿ ಚಿತ್ರ ಮಾಡಹೊರಟಿದ್ದಾರೆ. ಇದು ಸ್ವಾತಂತ್ರ್ಯ ಪೂರ್ವ ಕಥೆಯಾಗಿರುವುದರಿಂದ ಒಂದು ರೀತಿಯಲ್ಲಿ 'ಪೀರಿಯ' ಸಿನಿಮಾ ಎಂದೆನಿಸಲಿದೆ. ಬೆಂಗಳೂರು ನಾಗರತ್ನ ತನ್ನ ವೃತ್ತಿಯಲ್ಲಿ ಏನೇ ಮಾಡಿರಬಹುದು ಆದರೆ ಸಂಗೀತದ ಬಗ್ಗೆ ಆಕೆಗೆ ಅಪಾರವಾದ ಹುಚ್ಚು ಮತ್ತು ಅಭಿಮಾನವಿತ್ತು. ಹೀಗಾಗಿ ತ್ಯಾಗರಾಜರ ಹೆಸರಿನಲ್ಲಿ ತಿರುವಾಯೂರಿನಲ್ಲಿ ದೇವಸ್ಥಾನ ಕಟ್ಟಿದ ಖ್ಯಾತಿಯೂ ಈಕೆಗೆ ಸಲ್ಲುತ್ತದೆ.

ಈಕೆ ಒಮ್ಮೆ ಖ್ಯಾತ ಸಾಹಿತಿ ಡಿ.ವಿ.ಜಿಯವರನ್ನು ಭೇಟಿಯಾಗಿದ್ದರಂತೆ. ಆಗ ಆಕೆ 'ನೋಡಿ ಡಿ.ವಿ.ಜಿಯವರೇ, ನನ್ನ ಹೆಸರು ನಾಗರತ್ನ, ಆದರೆ ಜನ ನನ್ನನ್ನು ಭೋಗರತ್ನ ಎಂದು ಕರೆಯುತ್ತಾರೆ. ಆದರೆ ನಿಜವಾಗಿ ನಾನು ಹೇಳುತ್ತೇನೆ. ನಾನೀಗ ನಾಗರತ್ನನೂ ಅಲ್ಲ, ಭೋಗರತ್ನನೂ ಅಲ್ಲ, ಬದಲಿಗೆ ರೋಗರತ್ನ ಆಗಿದ್ದೇನೆ' ಎಂದು ತಮ್ಮ ನೋವನ್ನು ವ್ಯಕ್ತಪಡಿಸಿದ್ದರಂತೆ. ಆಗ ಡಿ.ವಿ.ಜಿ.ಯವರು 'ರೋಗರತ್ನ ಅಲ್ಲ, ತ್ಯಾಗರತ್ನ' ಎಂದು ಹೇಳಿ ಆಕೆಯನ್ನು ಸಮಾಧಾನ ಮಾಡಿದರಂತೆ. ಇಂತಹ ಅನೇಕ ರೋಚಕ ಕಥೆ-ಉಪಕಥೆಗಳು ನಾಗರತ್ನರವರ ಜೀವನಚರಿತ್ರೆಯಲ್ಲಿ ಬಂದುಹೋಗುತ್ತವೆ."

ಕಲ್ಪನಾ ಮತ್ತು ನಾಗರತ್ನರ ಬದುಕು ತೆರೆಯ ಮೇಲೆ ಚೆನ್ನಾಗಿ ಮೂಡಿಬರಲಿ ಎಂದು ಆಶಿಸುತ್ತೇವೆ.

ರಾಜ್ ಮೊಮ್ಮಗ ಮಾಯಾಲೋಕ



ರಾಜ್‌ಕುಮಾರ್ ಅವರ ಮೊಮ್ಮಗ ನಾಯಕ ನಟನಾಗಿ ಚಿತ್ರರಂಗಕ್ಕೆ ಕಾಲಿಡುವ ಸುದ್ದಿ ದೃಢವಾಗಿದೆ. ಅಂದರೆ ರಾಜ್‌ಕುಮಾರ್ ಕುಟುಂಬದ ಮೂರನೆ ತಲೆಮಾರಿನ ಕುಡಿ ಈ ಮಾಯಾಲೋಕಕ್ಕೆ ಕಾಲಿಡಲಿದೆ.

ರಾಘವೇಂದ್ರ ರಾಜ್‌ಕುಮಾರ್ ಅವರ ಪುತ್ರ ವಿನಯ್ ರಾಘವೇಂದ್ರ ರಾಜ್‌ಕುಮಾರ್ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡುವ ಸುದ್ದಿ ಕಳೆದ ಎರಡು ವರ್ಷಗಳಿಂದ ಅಲ್ಲಿ ಇಲ್ಲಿ ಕೇಳಿಬರುತ್ತಿತ್ತು. ಈಗ ನವೆಂಬರ್ ತಿಂಗಳಲ್ಲಿ ಅಂದರೆ ರಾಜ್ಯೋತ್ಸವದ ಸಂದರ್ಭದಲ್ಲಿ ವಿನಯ್ ನಾಯಕನಾಗಿ ನಟಿಸಲಿರುವ ಚಿತ್ರ ಸೆಟ್ಟೇರಲಿದೆ ಎಂದು ಅವರ ಕುಟುಂಬದ ವಕ್ತಾರರು ಹೇಳುತ್ತಿದ್ದಾರೆ.


ವಿನಯ್ ಕಳೆದೆರಡು ವರ್ಷಗಳಿಂದ ಹೀರೋ ಆಗಲು ವ್ಯಾಯಾಮ, ನೃತ್ಯ ಮೊದಲಾದವನ್ನು ಕಲಿಯುತ್ತಿದ್ದರು. ಅಷ್ಟೇ ಅಲ್ಲ, ಒಂದೆರಡು ಸಿನಿಮಾಗಳಲ್ಲಿ ನಿ... ಸೂರಿ ಜೊತೆ ಕೆಲಸ ಮಾಡಿ, ನಿರ್ದೇಶನದ ಮತ್ತು ಸಿನಿಮಾದ ಒಟ್ಟಾರೆ ಅನುಭವವನ್ನು ಗಳಿಸಿದರು. ... ಹಲವು ಬಾರಿ ರಾಘವೇಂದ್ರ ರಾಜ್‌ಕುಮಾರ್ ಪತ್ರಕರ್ತರಿಗೆ ಹೇಳಿದ್ದಿಷ್ಟು: "ನಾವು ಆತನಿಗೆ ಒತ್ತಾಯ ಮಾ... ಆದರೆ ನಟನಾಗುವ ಮೊದಲು ಎಲ್ಲಾ ಅನುಭವ ಗಳಿಸಬೇಕೆಂಬುದು ನಮ್ಮ ಅಪ್ಪಾಜಿಯ ನಂಬಿಕೆಯ... ಅದರಂತೆ ಆತ ನಮ್ಮ ಪ್ರೊಡಕ್ಷನ್‌ನ ಕೆಲಸವನ್ನು ನೋಡಿಕೊಳ್ಳುತ್ತಿದ್ದಾನೆ. ಆದರೆ ಈಗ ಆತನಿಗೆ ... ನಾಯಕನಾಗಬೇಕು ಎಂಬ ಆಶಯ ಒಳಗಿನಿಂದ ಆರಂಭವಾಗಿದೆ. ಯಾವಾಗ ಒಬ್ಬ ವ್ಯಕ್ತಿಗೆ ಈ ರೀತಿ ಅಂತರ... ನಾಯಕನಾಗಬೇಕೆಂದು ಅನಿಸುತ್ತದೆಯೋ ಆ ಕೂಡಲೇ ಅದಕ್ಕೆ ಬೇಕಾದ ವ್ಯವಸ್ಥೆ ಮಾಡುವುದು ನಮ್ಮ ಕ...

ಅಂದಹಾಗೆ, ವಿನಯ್ ನಟಿಸಲಿರುವ ಚಿತ್ರವನ್ನು ರಾಜ್‌ಕುಮಾರ್ ಕುಟುಂಬದ ಸದಸ್ಯರಾದ '... ಖ್ಯಾತಿಯ ಪ್ರಕಾಶ್ ನಿರ್ದೇಶಿಸುವುದು ಬಹುತೇಕ ಖಾತ್ರಿಯಾಗಿದೆ.

ಭಾರತೀಯ ಚಿತ್ರರಂಗ ನೂರು ವರ್ಷ ಆಚರಿಸುತ್ತಿರುವ ಸುಸಂದರ್ಭದಲ್ಲಿ ರಾಜ್‌ಕುಮಾರ್ ಕುಟ... ಮತ್ತೊಂದು ತಲೆಮಾರು ಚಿತ್ರರಂಗಕ್ಕೆ ಆಗಮಿಸುತ್ತಿರುವುದು ರಾಜ್‌ಕುಮಾರ್ ಅಭಿಮಾನಿ... ಹಬ್ಬದಷ್ಟೇ ಸಂತೋಷ ನೀಡಲಿದೆ.



ರಮ್ಯಾಳ ಮುಂ... ರಾಶಿ ಕೆಲಸ ಬಾ...



ರಮ್ಯಾ ಕನ್ನಡ ಚಿತ್ರರಂಗದಿಂದ ಲೋಕಸಭೆಗೆ ಆಯ್ಕೆಯಾದ ಮೊಟ್ಟಮೊದಲ ನಟಿ. ಆದರೆ ಈಕೆ ಸಂಸತ್ತಿಗೆ ಆಯ್ಕೆಯಾದ ನಂತರ ಗಾಂಧಿನಗರದಿಂದ ವಿಶ್ರ ಪ್ರತಿಕ್ರಿಯೆ ಕೇಳಿಬರುತ್ತಿದೆ.

ರಮ್ಯಾ ಕೈಯಲ್ಲಿ ಈಗ ಒಟ್ಟು ಐದು ಚಿತ್ರಗಳಿವೆ. ಒಂದು ಅರ್ಧಕ್ಕೇ ನಿಂತಿರುವ 'ನೀರುದೋಸೆ'. ಮತ್ತೊಂದು ಮೊನ್ನೆಯಷ್ಟೇ ಆ... ಶಿವರಾಜ್‌ಕುಮಾರ್ ನಾಯಕನಾಗಿ ನಟಿಸುತ್ತಿರುವ '... ಮೂರನೆಯದು ಪ್ರಜ್ವಲ್ ದೇವರಾಜ್ ನಾ... ನಟಿಸುತ್ತಿರುವ 'ದಿಲ್ ಕಾ ರಾಜಾ'. ಇವುಗಳ... ನೃತ್ಯನಿರ್ದೇಶಕ ಇಮ್ರಾನ್ ಸರ್ದಾ... ಆರಂಭಿಸಬೇಕಾಗಿದ್ದ ಚೊಚ್ಚಲ ಚಿತ್ರಕ್ಕೂ... ನಾಯಕಿಯಾಗಿ ಆಯ್ಕೆಯಾಗಿದ್ದಳು. ... ತೆಲುಗಿನಲ್ಲಿ ಕೋಡಿ ರಾಮಕೃಷ್ಣ ನಿರ್ದೇಶನ... ಅರ್ಧಕ್ಕೇ ನಿಂತುಹೋಗಿದೆ. ಅಂದರೆ ... ಬೇಗ ರಮ್ಯಾ ಈ ಐದು ಚಿ... ಮಾಡಿಮುಗಿಸಬೇಕಿದೆ.

ಆದರೆ ಈ ಎಲ್ಲ ಚಿತ್ರ... ಪೂರೈಸುವಷ್ಟರಲ್ಲೇ ಆಕೆಯ ಲೋ... ಅವಧಿಯೂ ಮುಗಿದುಹೋ... ಸಾಧ್ಯತೆಯಿದೆ. ಹೀಗಾಗಿ ಆಕೆ... ಕಡೆಯಲ್ಲಿ ಸಿನಿಮಾಗಳ ಮು... ಸುತ್ತಾಳೋ ಅಥವಾ ಅ... ಆಯ್ಕೆಯಾಗಿರುವ ತನ್ನ ಲೋ... ಸದಸ್ಯತ್ವವನ್ನು ಸಮರ್ಪ... ನಿರ್ವಹಿಸುತ್ತಾಳೋ ಎಂಬ ... ಗಾಂಧಿನಗರದಲ್ಲಿ ಚರ್ಚೆ ಆರಂ...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com